

ಕಲ್ಯಾಣ ಕಿರಣ

ಸೆಪ್ಟೆಂಬರ್-2001 ಬೆಲೆ : ರೂ. 5-00





ಮಹಾರಾಷ್ಟ್ರದ ಪ್ರಮುಖ ವ್ಯಾಪಾರಿ ಕೇಂದ್ರ, ಗಡಹಿಂಗ್ಲಾಜ್‌ದ ಮುಖ್ಯ ರಸ್ತೆಯಲ್ಲಿ ಉಭಯ ಮಹಿಳಾ ಜಗದ್ಗುರುಗಳಿಗೆ ಮೆರವಣಿಗೆಯ ಮೂಲಕ ಗೌರವಾರ್ಪಣೆ

ಓಂ ಶ್ರೀ ಗುರುಬಸವಲಿಂಗಾಯ ನಮಃ

86666

ಸಂಪುಟ 31 | ಬಸವ ಶಕೆ 868 | ಆಜೀವ ಸದಸ್ಯತ್ವ 500 ರೂ.

ಸಂಚಿಕೆ 9 | ಸೆಪ್ಟೆಂಬರ್ 2001 | ವಾರ್ಷಿಕ ಚಂದಾ 50/- ರೂ.

ರಾಷ್ಟ್ರೀಯ ಬಸವ ದಳ-ಗಣಾಚಾರ ದಳದವರಿಗೆ ಪ್ರತಿಜ್ಞಾ ಗೀತೆ

ಬಸವ ಪಥಿಕರು ನಾವು ಎಂದೆಂದು ಒಂದು
ಎಲ್ಲ ಭೇದವ ಜರಿದು ನಡೆಯುವೆವು ಎಂದು ॥ ಪ ॥

ದೇವನೊಬ್ಬನೆ ಎಂದು ಸಾರಿ ನುಡಿಯುವೆವು
ದೇವಗುರು ಬಸವಣ್ಣ ಎಂದು ನಂಬುವೆವು
ವಚನ ಸಾಹಿತ್ಯವೇ ಧರ್ಮ ಸಂಹಿತೆ ಎಂದು
ಮರ್ತ್ಯಲೋಕದ ಮಹತಿ ಅರಿತು ಬಾಳುವೆವು ॥ 1 ॥

ಕಾಯಕವೇ ಕೈಲಾಸ ಎಂದು ದುಡಿಯುವೆವು
ರಾಷ್ಟ್ರದ ಅಭಿವೃದ್ಧಿಗಾಗಿ ಶ್ರಮಿಸುವೆವು
ಧಾಸೋಹವೇ ದೇವಧಾಮ ಎಂದೆನುತ
ಗಳಿಸಿದ ಸಂಪದವ ಹಂಚಿ, ಉಣ್ಣುವೆವು ॥ 2 ॥

ರಕ್ತ ಸಂಬಂಧಕಿಂ ಭಕ್ತಿ ಸಂಬಂಧವು
ಶಕ್ತವಾದುದು ಎಂದು ನಾವು ನಂಬುವೆವು
ಭಕ್ತಿ ಮಾರ್ಗದಿ ನಡೆವ ಮನುಜರೆಲ್ಲರನು
ಧರ್ಮ ಬಂಧುಗಳೆಂದು ತಿಳಿದು ಆದರಿಪೆವು ॥ 3 ॥

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ಮೇಳಕೆ ಬಂದು ಹಾಡಿ ಪಾಡುವೆವು
ಗಣಲಿಂಗ ದರ್ಶನವ ಮಾಡಿ ಪುಳಕಿತರಾಗಿ
ಸಮುದಾಯ ಪ್ರಾರ್ಥನೆಯ ನಿಷ್ಠೆಯಿಂ ಮಾಡುವೆವು ॥ 4 ॥

ಷಟ್ಕೋನ ಗಣಧ್ವಜವ ಹಿಗ್ಗಿನಿಂ ಹಾರಿಸುತ
ಷಟ್‌ಸೂತ್ರಗಳ ಘೋಷ ಹರ್ಷದಿಂ ಗೈಯುವೆವು
ಲಿಂಗದೇವನ ಮಹಿಮೆ ನಿತ್ಯ ಹಾಡುವೆವು
ಸಚ್ಚಿದಾನಂದನ ಒಲುಮೆ ಪಡೆಯುವೆವು ॥ 5 ॥

-ಬಸವಾತ್ಮಜೆ

www.Lingayathism.com

ಕಲ್ಯಾಣ ಕಿರಣ

ಸಂಪುಟ 31	ಬಸವ ಶಕೆ 868	ಆಜೀವ ಸದಸ್ಯತ್ವ 500 ರೂ.
ಸಂಚಿಕೆ 9	ಸೆಪ್ಟೆಂಬರ್ 2001	ವಾರ್ಷಿಕ ಚಂದಾ 50/- ರೂ.

ಲೇಖನಗಳು ಕಿರಣಗನ್ನಡಿ

ಲಿಂಗಾನಂದ ಗುರುವೆ

ಲಿಂಗದೊಳಗೊಂದಾದ ಲಿಂಗಾನಂದ ಗುರುವೆ
ಎಂದೆಂದೂ ಎಮ್ಮಗಳ ಸಲಹುತ್ತಲಿರುವೆ ।
ಬಸವ ಭಕ್ತರ ಬಾಳಿನ ದಾರಿಯಲ್ಲಿ
ಬೆಳಕಿನ ಕಿರಣವಾಗಿ ಮುನ್ನಡೆಸುತ್ತಿರುವೆ । 1 ।

ಕಷ್ಟಗಳ ಸುರಿಮಳೆಯು ಕಡವರದೆ ಬರುತಿರಲು
ಧರ್ಮದಿಂ ಮುನ್ನುಗ್ಗಿ ಮುಕ್ತಿಯಂ ಪಡೆದಿರುವೆ ।
ಮನುಜರ ಮನದಲ್ಲಿ ಮೂಡಿರುವ ಕತ್ತಲೆಯ
ಕರಗಿಸುತ ದಾರಿಯನು ತೋರುತ್ತಲಿರುವೆ । 2 ।

ಬಸವ ಭಕ್ತಿಯನು ಭರದಿಂದ ಸಾರುತಲಿ
ಭೂಮಿಯ ಮೇಲೊಂದು ಕೈಲಾಸ ತಂದಿರುವೆ ।
ಕರ್ಮಗಳ ಜಾಲದಲಿ ಕಮರಿದ ಜೀವಗಳ
ಕೈಹಿಡಿದು ಕಡಲನ್ನು ದಾಂಟಿಸುತ್ತಿರುವೆ । 3 ।

ಮಾತಾಜಿಯಂತಪ್ಪ ಮಾತೆಯನು ನೀಡುತಲಿ
ಮಾತೃತ್ವದ ಘನತೆಯನ್ನು ಮೆರೆದಿರುವೆ ।
ಮಾಯಾ ಮೋಹಗಳ ಪಾಶವನು ಕಿತ್ತೊಗೆದು
ವಾತ್ಸಲ್ಯ ವಾರಿಧಿಯ ತವರಾಗಿ ನಿಂದಿರುವೆ । 4 ।

ಶರಣರ ವಚನಗಳ ಪಠಣವ ಮಾಡುತ್ತ
ವಚನಗಳ ಬೀಜವ ಬಿತ್ತುತ್ತ ಬಂದಿರುವೆ ।
ವಚಿಸುತ್ತ ವಚಿಸುತ್ತ ಮುಂದೆ ನಾವ್ ಸಾಗಲು
ಪ್ರವಚನದ ಪುಸ್ತಕವ ಪ್ರೇಮದಿ ನೀಡಿರುವೆ । 5 ।

ಕಲ್ಯಾಣ ನಾಡಿನಲಿ ಕ್ರಾಂತಿಯನು ಗೈದು
ಕುರುಡರಾಗಿದ್ದ ಜನಕೆಲ್ಲ ಕಣ್ಣಾಲಿಯಾಗಿರುವೆ ।
ಕನ್ನಡ ವಾಙ್ಮಯದ ಕನ್ನಡಿಯ ತೋರುತ್ತ
ಕನ್ನಡದ ಜನಕಿಂದು ಕಣ್ಮಣಿಯೆ ಆಗಿರುವೆ । 6 ।

-ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ, ಬೀದರ್ ಕ್ಯಾಂಪ್

KALYAN KIRANA- Reg No. 19988/70. Monthly Magazine printed and published by B. Shambulingaiah, at Prabhudeva Printing Press, Basava Gangotri, Kumbalagodu, Bangalore-560074. Phone 8437234

ಅಕ್ಷರ ಜೋಡಣೆ ಮತ್ತು ಪುಟ ವಿನ್ಯಾಸ : ರಮೇಶ್ ಲಿಂಗಾಯತ

ದಿ. 22-8-2001ರಂದು ಆಚರಿಸಿದ ಹುಟ್ಟುಹಬ್ಬದ ನಿಮಿತ್ತ

ರಾಷ್ಟ್ರೀಯ ಬಸವ ದಳದವರಿಗೆ ದಿವ್ಯ ಸಂದೇಶ

ರಾಷ್ಟ್ರೀಯ ಬಸವ ದಳವು ಒಂದು ಉದಾತ್ತ ಧ್ಯೇಯದೊಡನೆ ಪ್ರಾರಂಭವಾದ ಸಂಘಟನೆ. ಇದರ ಮೊಟ್ಟ ಮೊದಲ ಪರಿಕಲ್ಪನೆ ಪ್ರಾರಂಭವಾದುದು 1985 ನೆಯ ಇಸವಿ. ಅಕ್ಟೋಬರ್ ತಿಂಗಳಲ್ಲಿ. ತಾತ್ತ್ವಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ಒಂದು ಸಂಘಟನೆ ಅಗತ್ಯವಿದೆ ಎಂಬ ವಿಷಯ ಸೂಚಿಯನ್ನು ಆ ಶಿಬಿರದ ನೇತೃತ್ವವಹಿಸಿದ್ದ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಮುಂದಿಟ್ಟಾಗ ಶಿಬಿರಾರ್ಥಿಗಳೆಲ್ಲರೂ ಸೇರಿ ಚರ್ಚಿಸಿದೆವು. ಬಸವ ಸೇನೆ, ಶರಣ ಸೇನೆ ಮುಂತಾದ ಪದಗಳನ್ನೆಲ್ಲ ಇಟ್ಟು ಚರ್ಚಿಸಿ ಅಂತಿಮವಾಗಿ "ಬಸವ ದಳ" ಎಂಬ ಹೆಸರನ್ನು ದೃಢಪಡಿಸಲಾಯಿತು. ಈ ಹೆಸರಿನಲ್ಲಿ ಅಲ್ಲಲ್ಲೇ ಶಾಖೆಗಳನ್ನು ತೆರೆಯಲಾಯಿತು. "ಬಸವ" ಎಂಬ ಪದ ಧಾರ್ಮಿಕ ಹಿನ್ನೆಲೆಯ ಸಂಕೇತ. ರಾಷ್ಟ್ರೀಯ ಪ್ರಜ್ಞೆ, ರಾಷ್ಟ್ರಪ್ರೇಮ ಜಾಗೃತಿ ಅಷ್ಟೇ ಮುಖ್ಯ ಎಂದು ಭಾವಿಸಿ "ಬಸವ ದಳ" ಎಂಬ ಪದಕ್ಕೆ ರಾಷ್ಟ್ರೀಯ ಎಂಬ ಪದ ಸೇರಿಸಿ 1988ರಲ್ಲಿ ಮೊಟ್ಟ ಮೊದಲ ಶರಣ ಮೇಳದಲ್ಲಿ ಘೋಷಿಸಲಾಯಿತು.

1. ರಾಷ್ಟ್ರೀಯ ಬಸವ ದಳವು ಜಾತಿವರ್ಣವರ್ಗರಹಿತ ಧರ್ಮಸಹಿತ ಸಮತಾವಾದಿ ಸಮಾಜವನ್ನು ಕಟ್ಟುವ ಧ್ಯೇಯಹೊತ್ತ ತತ್ತ್ವವಾದಿ ಸಂಸ್ಥೆ.

2. ಇಲ್ಲಿ ರಾಷ್ಟ್ರೀಯ ಎಂಬ ಪದವು ಇದ್ದರೂ ಇದು ಒಂದು ದೇಶಕ್ಕೆ ಸೀಮಿತವಾಗುವ ಪದವಲ್ಲ. ಕೆಲವು ಮುಸಲೀಮರು (ಎಲ್ಲರೂ ಅಲ್ಲ ; ಅನೇಕರು ಭಾರತೀಯ ಸಂಸ್ಕೃತಿ, ಭಾಷೆ, ನೆಲ-ಜಲಗಳ ಅಭಿಮಾನವನ್ನು ಮೈಗೂಡಿಸಿಕೊಂಡಿದ್ದಾರೆ.) ಭಾರತವು ಮಾತೃಭೂಮಿಯಾಗಿದ್ದರೂ ಪಾಕಿಸ್ತಾನವನ್ನೇ ಭಾರತಕ್ಕಿಂತಲೂ ಹೆಚ್ಚು ಪ್ರೀತಿಸುತ್ತಾರೆ. ಆ ರೀತಿಯ ಮನೋಭಾವ ಬೆಳೆಸಿಕೊಳ್ಳದೆ ಭಾರತವನ್ನು ತನ್ನ ಧರ್ಮಭೂಮಿಯನ್ನಾಗಿ ಭಾವಿಸಿದರೂ ಬಸವ ಭಕ್ತನು ತಾನು ವಾಸಿಸುವ ಮಾತೃಭೂಮಿಯನ್ನು ತನ್ನ ರಾಷ್ಟ್ರ ಎಂದು ತಿಳಿದು ಅದರ ಏಳ್ಗೆಗಾಗಿ ದುಡಿಯಬೇಕು.

ನಮ್ಮ ದೇಶದಲ್ಲಿ, ಸಮಾಜದಲ್ಲಿ ಯಾವುದೇ ಒಂದು concept ಪರಿಕಲ್ಪನೆ ಕೊಟ್ಟರೂ ಅದನ್ನು ನಕಲು ಮಾಡುವ ದುರಭ್ಯಾಸ ಜನರಲ್ಲಿ ರಕ್ತಗತವಾಗಿದೆ. ಸಮಾಜದ ಹಿತಾಸಕ್ತಿಯ ದೃಷ್ಟಿಯಿಂದ ಈವರೆಗೂ ಇರದ ಒಂದು ಸೈದ್ಧಾಂತಿಕ ಹಿನ್ನೆಲೆಯ ಸಂಘಟನೆಯನ್ನು ರೂಪಿಸಿದ್ದಾರೆ ಅದನ್ನು ಬಲಪಡಿಸೋಣ ಎಂಬ ಜಾಯಮಾನವೇ ಕೆಲವರದಿಲ್ಲ. ಯಾವಾಗ ಅದನ್ನು ಒಡೆದೇವೋ ಎಂದು ಆತುರರಾಗಿರುವುದಷ್ಟೇ ಅಲ್ಲ, ಇನ್ನೊಂದು ಪ್ರತಿಸ್ಪರ್ಧಿ ಸಂಸ್ಥೆಯನ್ನು ಹುಟ್ಟುಹಾಕಿ ಏನೇನೋ ಮಾಡಿ, ಕಡೆಗೆ ಆ ಜನರನ್ನು ಕೆಟ್ಟ ಕೆಲಸಗಳಿಗೂ ಪ್ರಚೋದಿಸಿ, ಸಾತ್ವಿಕ ಜನರು ಅತ್ತಲೂ ಹೋಗುವುದು ಬೇಡ, ಇತ್ತಲೂ ಹೋಗುವುದು ಬೇಡ ಎಂದು ತಟಸ್ಥವಾಗಿ ಉಳಿಯುವಂತೆ ಕೆಲವರು ವರ್ತಿಸುತ್ತಾರೆ. ಹೀಗಾಗಿ ಶರಣಮೇಳಕ್ಕೆ ಪ್ರತಿಸ್ಪರ್ಧಿಯಾಗಿ ಕೆಲವು ಸಮ್ಮೇಳನಗಳನ್ನು, ರಾಷ್ಟ್ರೀಯ ಬಸವ ದಳಕ್ಕೆ ಪ್ರತಿಸ್ಪರ್ಧಿಯಾಗಿ ಕೆಲವು ಸಂಘಟನೆಗಳನ್ನು ಹುಟ್ಟು ಹಾಕಿದ್ದಾರೆ. ಅದೇ ರೀತಿ ಮನೆಮನೆಗೆ ಬಸವ ಸಂದೇಶವನ್ನು ತಲುಪಿಸಲು ಬಸವ ಜ್ಯೋತಿಯನ್ನು ನಾವು ಆರಂಭಿಸುತ್ತಲೇ

ತಾವೂ ಶುರು ಮಾಡಿದ್ದಾರಾದರೂ ಆ ಕಾರ್ಯಕ್ರಮಗಳು ತಾತ್ತ್ವಿಕ ಖಚಿತತೆ, ನಿರ್ದಿಷ್ಟ ಆಚರಣೆ, ಏಕದೇವೋಪಾಸನೆ, ಸಮಾಜ ಸಂಘಟನೆಗಳಿಗೆ ಸಹಕಾರಿಯಾಗದೆ ಮುಖ್ಯವಾಗಿ ಇಷ್ಟಲಿಂಗ ನಿಷ್ಠೆ-ಬಸವ ಗುರು ನಿಷ್ಠೆ- ಶರಣ ಪರಂಪರೆಯ ನಿಷ್ಠೆ ಬೆಳೆಸದೆ ಮೊದಲು ವಚನ ಸಾಹಿತ್ಯ ತಿಳಿಯದೆ ಅಜ್ಞಾನಿಗಳಾಗಿದ್ದವರನ್ನು ಈಗ ವಚನ ಸಾಹಿತ್ಯ ಓದಿ ಅಜ್ಞಾನಿಗಳಾಗಿ ಉಳಿಯುವ ಸ್ಥಿತಿಗೆ ತರುತ್ತಿವೆ. ಜೊತೆಗೆ ವಿಧಾಯಕವಾಗಿ ಧರ್ಮಪ್ರಚಾರ ಮಾಡುವವರನ್ನು ವಚನ ಸಾಹಿತ್ಯದ ಸೋಗಿನಲ್ಲಿ ಈಗ ವಿರೋಧಿಸುವ ತಂತ್ರ ರೂಪುಗೊಳ್ಳುತ್ತಿದೆ. ಮೊದಲು ವಚನ ಸಾಹಿತ್ಯದ ವಿರೋಧಿಗಳು (ಅಥವಾ ತಟಸ್ಥರು) ಎಂಬ ವ್ಯಾಘ್ರರು ಈಗ ವಚನ ಸಾಹಿತ್ಯದ ಗೋಮುಖ ಹಾಕಿಕೊಂಡು ಶುದ್ಧ ಬಸವ ಮಾರ್ಗಿಗಳನ್ನು ಎದುರಿಸಲು ಮತ್ತು ಹೆದರಿಸಲು ಸಿದ್ಧರಾಗುತ್ತಿರುವರು.

ಒಳಗಿನ ಕಪಟಿಗಳು

ಬೇರೆ ಸಂಘ-ಸಂಸ್ಥೆಗಳಿಗೆ ಹೋಲಿಸಿದಾಗ ರಾಷ್ಟ್ರೀಯ ಬಸವ ದಳಗಳಲ್ಲಿ ಕಪಟಿಗಳು ಹಾಗೂ ವಿಶ್ವಾಸ ದ್ರೋಹಿಗಳ ಸಂಖ್ಯೆ ಕಡಿಮೆ. ಇಲ್ಲವೇ ಇಲ್ಲ ಎಂದು ಹೇಳುವುದು ಪ್ರಾಮಾಣಿಕ ಹೇಳಿಕೆಯಾಗದು. ಏಕೆಂದರೆ ಕಪಟತನ, ವಿಶ್ವಾಸದ್ರೋಹ (ಹೀನ) ಮಾನವ ಸಹಜ ದೌರ್ಬಲ್ಯಗಳು. ಸಾರ್ವಜನಿಕರಿಂದ ಹಣ ದೊರೆಯುವುದೆಂಬ ಆಮಿಷಕ್ಕೆ ಒಳಗಾಗಿ, ಇಲ್ಲವೇ ಅನಾಯಾಸವಾಗಿ ನಾಯಕತ್ವ ಸಿಗುವುದೆಂದು, ಇಲ್ಲವೇ ಕೀರ್ತಿವಾರ್ತೆಗಾಗಿ ಕೆಲವರು ರಾಷ್ಟ್ರೀಯ ಬಸವ ದಳಗಳ ಮುಂದಾಳುಗಳಾದರೂ ಬಹಳ ದಿವಸಗಳ ಕಾಲ ತಮ್ಮ ಕೀಳು ಆಕಾಂಕ್ಷೆಯನ್ನು ಮುಚ್ಚಿಟ್ಟುಕೊಳ್ಳಲಾರರು. ಒಳಗೇ ಕೊರೆಯುವ ಹೆಗ್ಗಣ ಗುದ್ದಿನಲ್ಲಿ ನೀರು ಹೊಕ್ಕಾಗ ಗಡಬಡಿಸಿ ಹೊರಗೆ ಬರುವಂತೆ ಕೀಳು ಆಕಾಂಕ್ಷೆಗಳು ಬಯಲಾಗಿ ಅಂಥವರ ವ್ಯಕ್ತಿತ್ವಗಳು ಅಭಿವ್ಯಕ್ತವಾಗಿ ಬಿಡುತ್ತವೆ. ಒಳಗಿನ ಕಪಟಿಗಳಿಂದ ಸಂಘಟನೆ ಕುಂಠಿತವಾಗುತ್ತದೆ. ಆದರೆ ಏನು ಮಾಡಲೂ ಸಾಧ್ಯವಿಲ್ಲ. ಸಮಷ್ಟಿ ಪ್ರಜ್ಞೆ ಇರುವವರು ಕೆಲವು ಕಾಲ ಅಂಥ ಕಪಟಿಗಳನ್ನು ಸಹಿಸಿಕೊಂಡು, ಸಂಘಟನೆಗೆ ತೊಂದರೆಯಾಗದಂತೆ ನಯ ವಂಚಕರನ್ನು ತೆಗೆದು ಹೊರಹಾಕಬೇಕಾಗುತ್ತದೆ.

ರಾಷ್ಟ್ರೀಯ ಬಸವ ದಳದವರು (ಮತ್ತು ಎಲ್ಲರೂ) ಅಳವಡಿಸಿಕೊಳ್ಳಬೇಕಾದ ಕೆಲವು ಆದರ್ಶಗಳು ಹೀಗಿವೆ.

ಧಾರ್ಮಿಕ ಪಥದಲ್ಲಿ ನಡೆಯುವವರು ಕೆಲವು ಆದರ್ಶಗಳನ್ನು ಅಳವಡಿಸಿಕೊಳ್ಳಬೇಕು. ಸ್ವಯಂ ಪ್ರೇರಿತರಾಗಿ ಹಲವು ನಿಯತ್ತುಗಳಿಗೆ ಬದ್ಧರಾಗಬೇಕು.

1. ಸ್ವತಃ ತಾನೇ ಒಂದು ಸಂಘಟನೆ, ಸಂಸ್ಥೆ ಕಟ್ಟಿ ಬೆಳೆಸಿದ್ದರೂ ಕಾರಣಾಂತರದಿಂದ ತಾವು ಹೊರಗೆ ಉಳಿಯಬೇಕಾದರೂ ತಾವು ಕಟ್ಟಿದ ಸಂಸ್ಥೆಯನ್ನು ಹಾಳುಮಾಡಿ, ದುರ್ಬಲಗೊಳಿಸಿ ಹೋಗಬಾರದು ಎಂಬ ನಿಯತ್ತು ಬೆಳೆಸಿಕೊಳ್ಳಬೇಕು. ನದಿಗಳು ಒಣಗಿದಾಗ ಸಣ್ಣ ಗುಂಡಿಗಳಾಗಿ ಬಗೆದು ಅಲ್ಲಿ ನೀರನ್ನು ಪಡೆಯುತ್ತಾರೆ. ಅದು ಬಹಳ ಶುದ್ಧ ಜಲ ; ಸೋಸಿ ಬಂದಿರುತ್ತದೆ. ಇವುಗಳಿಗೆ ವರ್ತಿ (ವರತೆ) ಎಂದು ಕರೆಯುತ್ತಾರೆ. ಕುಡಿಯುವಷ್ಟು ನೀರು ಕುಡಿದು, ತುಂಬಿಕೊಂಡು ಕೆಲವು ಕಿಡಿಗೇಡಿ ಹುಡುಗರು ಆ ಒರತೆಯಲ್ಲಿ ಮೂತ್ರ ವಿಸರ್ಜನೆ ಮಾಡಿಯೋ ಕಸಕಡ್ಡಿಯನ್ನು ಹಾಕಿಯೋ ಹೋಗುವುದುಂಟಂತೆ. ಹಾಗೆಯೇ ಒಂದು ಸಂಸ್ಥೆಯ ಉಪಯೋಗವನ್ನು ಸ್ವಂತ ಲಾಭಕ್ಕಾಗಿ

ತೆಗೆದುಕೊಂಡು, ಬಿಟ್ಟು ಹೋಗಬೇಕಾಗಿ ಬಂದಾಗ ಅದನ್ನು ಒಡೆದು ದುರ್ಬಲಗೊಳಿಸಿ ಹೋಗಬೇಕೆಂಬುದು ಹೀನ ಮನಸ್ಕರ ನಡೆಯೇ ವಿನಾ ಪ್ರೌಢ ಹೃದಯಿಗಳಾದ ಶರಣರ ನಡೆಯಲ್ಲ.

2. ರಾಷ್ಟ್ರೀಯ ಬಸವ ದಳದ ಸದಸ್ಯರುಗಳ ಒಂದು ತಂಡವಿರುತ್ತದೆ ಎಂದುಕೊಳ್ಳೋಣ. ಅದರಲ್ಲಿ ಯಾರೋ ಒಬ್ಬರು, ಇಬ್ಬರು ಯಾವುದಾದರೊಂದು ಕಾರ್ಯಕ್ರಮವನ್ನು (programme) ಅಥವಾ ಆಹ್ವಾನ (Challenge)ವನ್ನು ಒಪ್ಪಿಕೊಂಡು ಬಂದರು ಎಂದುಕೊಳ್ಳುವಾ. ಆಗ ಆ ಕಾರ್ಯಕ್ರಮ ಅಥವಾ ಸವಾಲು ಯಶಸ್ವಿಯಾದರೆ, ಮೊದಲು ಮುಂದಾದವರಿಗೆ ಹೆಸರು ಬರುತ್ತದೆ ಎಂದು ವೈಯಕ್ತಿಕ ಮಾತ್ಸರ್ಯದಿಂದ (personal jealousy) ತಮ್ಮದೇ ಸಂಘಟನೆಯ ಕಾರ್ಯಕ್ರಮವನ್ನು ಕೆಡಿಸಲು ಒಳಪಿತೂರಿ ಮಾಡಬಾರದು. ಅಂಥ ನಡತೆಯನ್ನು ಧರ್ಮಪಿತ ಬಸವಣ್ಣನವರಾಗಲೀ, ಸೃಷ್ಟಿಕರ್ತ ಲಿಂಗದೇವನಾಗಲೀ ಮೆಚ್ಚರು. ಒಂದು ಕಡೆ ಧರ್ಮಪಿತರು ಹೇಳುತ್ತಾರೆ, "ಮಣ್ಣಾದರೂ ತನ್ನೆತ್ತು ಗೆಲ್ಲಬೇಕು" ಎಂಬ ಛಲದಿಂದ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಬೇಕಂತೆ. ಸುಖ-ದುಃಖ, ಕೀರ್ತಿ-ಅಪಕೀರ್ತಿ ಏನೇ ಬರಲಿ ರಾಷ್ಟ್ರೀಯ ಬಸವ ದಳದವರು ಸಮಾನವಾಗಿ ಹಂಚಿಕೊಳ್ಳಬೇಕು ಮತ್ತು ಹೆಗಲುಕೊಡಬೇಕು. ವೈಯಕ್ತಿಕ ಮಾತ್ಸರ್ಯದಿಂದ ಪ್ರೇರಿತರಾಗಿ ಸಮಷ್ಟಿಯ ಹಿತವನ್ನು ಬಲಿಗೊಡಬಾರದು.

3. ಕೇಂದ್ರವನ್ನು ಬಲಪಡಿಸುವಿಕೆ : ದಿ.22-8-2001ರಂದು ಪೂನಾದ ಶರಣರಾದ ಶಿವಾನಂದ ದೇಶಮುಖ ಮತ್ತು ಸಿದ್ಧರಾಮಯ್ಯನವರ ಜೊತೆ ಮಾತನಾಡುತ್ತ ಕುಳಿತಾಗ ಒಂದು ಉತ್ತಮ ದೃಷ್ಟಾಂತ ನನ್ನ ಬಾಯಲ್ಲಿ ಮೂಡಿತು. ಕಾಲು ಒಂದು ಮುಳ್ಳನ್ನು ತುಳಿಯಿತು ಎಂದುಕೊಳ್ಳುವಾ. ಆಗ ಆ ಮುಳ್ಳನ್ನು ತೆಗೆಯಬೇಕೆಂಬ ಸೂಚನೆ ಕಾಲಿನಿಂದ ಕೈಗೆ ರವಾನೆಯಾಗದು. ಕಾಲು ಮುಳ್ಳನ್ನು ತುಳಿದ ತಕ್ಷಣ ಈ ವಿಷಯ ಮೆದುಳಿಗೆ ರವಾನೆಯಾಗುತ್ತದೆ. ಮೆದುಳು ಕೈಗೆ ಸೂಚನೆ ನೀಡುತ್ತದೆ. ಕೈ ಆ ಮುಳ್ಳನ್ನು ಕೀಳುತ್ತದೆ. ಕಿತ್ತುದಾಗಿ ಮೆದುಳಿಗೆ ಸಂದೇಶ ನೀಡುತ್ತದೆ. ಮೆದುಳಿನ ಕೆಲಸವನ್ನು ಕ್ರೈಸ್ತ ಧರ್ಮದಲ್ಲಿ ಪೋಪ್ ಮಾಡಿದರೆ, ಇಸ್ಲಾಂದಲ್ಲಿ ಮಸೀದಿಯು ಮಾಡುತ್ತದೆ. ಸಿಖ್ ಧರ್ಮದಲ್ಲಿ ಪಂಚ ಪ್ರಬಂಧಕ ಸಮಿತಿ ಮಾಡುತ್ತದೆ. ಸಮಾಜಕ್ಕೆ ಕಷ್ಟ, ತೊಂದರೆ ವಿಪತ್ತು ಬಂದಾಗ ಆ ನಿಯಂತ್ರಕ ಶಕ್ತಿಗಳು ತಕ್ಷಣವೇ ಪ್ರತಿಭಟಿಸುತ್ತವೆ. ಆದರೆ ಲಿಂಗಾಯತ ಸಮಾಜದಲ್ಲಿ ಯಾರೂ ಜವಾಬ್ದಾರರೇ ಇಲ್ಲ. ವೈಯಕ್ತಿಕ ಕಷ್ಟವನ್ನು ಜನರೇ ಅನುಭವಿಸಬೇಕು. ಸಮಷ್ಟಿಯ ಕಷ್ಟವನ್ನು ಕೇಳುವವರೇ ಇಲ್ಲ. ಧರ್ಮಪಿತ ಬಸವಣ್ಣನವರು ಊರೂರಿಗೆ ಅನುಭವ ಮಂಟಪಗಳಾಗಬೇಕು ಎಂದು ಮಾದರಿಯಾಗಿ ಕಟ್ಟಿ ತೋರಿಸಿದರು ಮತ್ತು ಒಂದು ಧರ್ಮ ಪೀಠವೆಂಬ ನಿಯಂತ್ರಕ ಪೀಠವೊಂದಿರಬೇಕು ಎಂಬುದನ್ನು ಸಹ ಸೂಚಿಸಿ, ತಾವೇ ಮಾಡಿ, ತೋರಿಸಿದರು. ಈ ಯಾವ ಆದರ್ಶವನ್ನೂ ಲಿಂಗಾಯತ ಸಮಾಜ ಮುಂದುವರಿಸಿಕೊಂಡು ಬರಲಿಲ್ಲ ಎಂಬುದು ವಿಷಾದನೀಯ. ಲಿಂಗಾಯತ ಸಮಾಜದ ಕಾಯಿಲೆಗಳೇನು ಎಂಬುದನ್ನು ಒಂದೊಂದೇ ಗುರುತಿಸಿ ನಾವು ಪರಿಹಾರವನ್ನು ಹುಡುಕುವ ದೆಸೆಯಲ್ಲಿ ರೂಪುಗೊಂಡವು 1. ಶರಣಮೇಳ 2. ಬಸವ ಧರ್ಮ

ಪೀಠ, 3. ಬಸವ ಧರ್ಮ ಸಂಸತ್ 4. ರಾಷ್ಟ್ರೀಯ ಬಸವ ದಳ ಮುಂತಾದವು. ಇವನ್ನು ಆರಂಭಿಸುವುದರ ಹಿಂದಿನ ಉದ್ದೇಶ ಸ್ವಾರ್ಥ, ವೈಯಕ್ತಿಕ ಪ್ರತಿಷ್ಠೆಯಲ್ಲ ಸಮಾಜದ ಸರ್ವತೋಮುಖ ಪ್ರಗತಿ ಸಾಧನೆ.

ಈ ಎಲ್ಲವೂ ಉದ್ದೇಶಿತ ರೀತಿಯಲ್ಲೆ ಕಾರ್ಯೋನ್ಮುಖವಾಗಿ ಯಶಸ್ಸು ಕಂಡಿವೆ. ಬಸವ ಧರ್ಮ ಸಂಸತ್ ಮತ್ತು ರಾಷ್ಟ್ರೀಯ ಬಸವ ದಳಕ್ಕೆ ಕಚ್ಚಾ ಸಾಮಗ್ರಿ ಇದ್ದ ಜನಗಳ ಮಧ್ಯದಲ್ಲಿಂದಲೇ ಆಯ್ದು ಕೊಂಡುದರಿಂದ ತಾತ್ತ್ವಿಕವಾಗಿ ಗಟ್ಟಿಗೊಳ್ಳದವರೂ ಬಂದು ಸೇರಿದರು. ಈ ದಿಶೆಯಲ್ಲಿ 'ಲಿಂಗದೇವ'ನ ಪ್ರಸಂಗ ಬಹಳ ಚೆನ್ನಾಗಿ ಜರಡಿಯಾಡಿಸಿ ಗಟ್ಟಿಕಾಳನ್ನು ಜೊಳ್ಳು ಕಾಳುಗಳನ್ನು ಬೇರೆ ಮಾಡಿತು.

ಕೆಲವು ರಾಷ್ಟ್ರೀಯ ಬಸವ ದಳಗಳವರು (ಬೆರಳ ಮೇಲೆಣಿಸುವಷ್ಟು ಜನರು) ಕೇಂದ್ರ ಸಂಸ್ಥೆಯಾದ ಬಸವ ಧರ್ಮ ಪೀಠವನ್ನು ದುರ್ಬಲಗೊಳಿಸಿ ತಾವೇ ಸ್ಥಳೀಯವಾಗಿ ಬಲಿಷ್ಠರಾಗಬೇಕೆಂಬ ಸಂಚು ಹೂಡಿದುದೇ ಅಲ್ಲದೆ ಕೇಂದ್ರ ಸಂಸ್ಥೆಗೆ ಕಾಣಿಕೆ ಬರುವುದನ್ನು ಕೂಡ ಇಷ್ಟಪಡದವರಾದರು. ಕೆಲವು ಮುಗ್ಧ ಭಕ್ತರು, ಭಾವುಕರು ಮಧ್ಯವರ್ತಿಗಳ ಈ ಸಂಚನ್ನು ಅರಿಯದೆ ತಪ್ಪು ಹೆಜ್ಜೆ ಇಟ್ಟುದೂ ಉಂಟು. ನಮಗಿರುವ ಮುಖ್ಯ ಕಳಕಳಿ ನಾವು ಮುನ್ನಡೆಸುವ ಧರ್ಮಪೀಠ ಅಥವಾ ಸಂಸ್ಥೆ ಬೆಳೆಯಬೇಕೆಂಬುದಲ್ಲ ; ಇಡೀ ಸಮಾಜವು ಒಂದು ನ್ಯೂಕ್ಲಿಯಸ್ ಸುತ್ತ ಬೆಳೆದರೆ ಅದರ ಪ್ರಗತಿ ಚೆನ್ನಾಗಿ ಆಗುವುದೆಂಬುದು. ಧರ್ಮಪಿತ ಬಸವಣ್ಣನವರು ಅಂದು ಸ್ಥಾಪಿಸಿದ ಶೂನ್ಯ ಪೀಠವು ಪೋಪ್ ಪೀಠದಂತೆ ಬೆಳೆದು ಅಖಂಡ ಸಮಾಜವನ್ನು ಕಟ್ಟಿದ್ದರೆ ನಾವು ನೀವು ಭದ್ರವಾಗಿ ಕಟ್ಟಿದ ಮನೆಯಲ್ಲಿ ನೆಮ್ಮದಿಯಿಂದ ಇರಬಹುದಿತ್ತು, ಹೊಸ ಮನೆಯನ್ನು ಕಟ್ಟುವ ಅಗತ್ಯವಾದರೂ ಏನಿತ್ತು? 800 ವರ್ಷದ ಬಳಿಕ ತಪ್ಪನ್ನು ಕಂಡುಕೊಂಡ ಮೇಲಾದರೂ ತಿದ್ದಿಕೊಳ್ಳದೆ ಹೋದರೆ ಇನ್ನು ನಮ್ಮವರಂತಹ ಮೂರ್ಖರು ಯಾರಾಗಬಹುದು ?

ಸ್ಥಳೀಯ ರಾಷ್ಟ್ರೀಯ ಬಸವ ದಳಗಳನ್ನು ಬಲಪಡಿಸಿ ಕೇಂದ್ರ ಸಂಸ್ಥೆಯನ್ನು ಬಲಪಡಿಸದಿದ್ದರೆ ವಿದ್ಯುತ್ ಜನಕಾಗಾರವನ್ನು (Generating station) ನಿಲ್ಲಿಸಿ, ಬರೀ ವಿದ್ಯುತ್ ಗ್ರಾಹಕ (receiving stations) ಕೇಂದ್ರಗಳನ್ನು ನಿರ್ಮಿಸಿಟ್ಟಂತಾಗುತ್ತದೆ. ಪುನಃ ಕೆಲವೇ ವರ್ಷಗಳಲ್ಲಿ ಹಿಂದಿನ ತಪ್ಪು ಮರುಕಳಿಸುತ್ತದೆ. ಬಸವ ಧರ್ಮ ಪೀಠ- ಶರಣ ಮೇಳಗಳಿಂದಾಗಿ ಇಡೀ ಸಮಾಜ ಒಂದು ಕಡೆ ಬರುತ್ತಲಿದೆ ಎಂಬುದನ್ನು ಪ್ರಾಜ್ಞರು ಮನಗಾಣಬೇಕು. ಆದ್ದರಿಂದ ರಾಷ್ಟ್ರೀಯ ಬಸವ ದಳಗಳವರು ಬಸವ ಧರ್ಮಪೀಠ/ಶರಣ ಮೇಳದ ಪ್ರಗತಿಯ ಕಡೆಗೆ ಸದಾ ಲಕ್ಷ್ಯವಿಟ್ಟಿರಬೇಕು. ಮುಸ್ಲೀಮರ ಮೆಕ್ಕಾ ಮತ್ತು ಹಜ್‌ಗಳ, ಸಿಖ್ಖರ ಅಮೃತಸರ ಮತ್ತು ಖಾಲ್ಸಾಗಳ ಬಗ್ಗೆ ಸದಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ತನು-ಮನ-ಧನಗಳನ್ನು ಧಾರೆ ಎರೆದು ಬಸವ ಧರ್ಮ ಪೀಠವನ್ನು ಬೆಳೆಸಬೇಕು.

ಯಾವುದೇ ವಯಸ್ಸಿನವರಿರಲಿ, ತನು-ಮನ-ಧನ ಯಾವುದೇ ಸಾಧನದಿಂದ ಸೇವೆ ಮಾಡುವವರಿರಲಿ ವರ್ಷದಲ್ಲಿ ಇಂತಿಷ್ಟು ದಿನ ಎಂದು ಬಿಡುವು ಮಾಡಿಕೊಂಡು ಬಂದು ಕೂಡಲ ಸಂಗಮದ ಬಸವ ಧರ್ಮ ಪೀಠದ ಮಹಾಮನೆಯಲ್ಲಿ ಸೇವೆ ಮಾಡಬೇಕು. ಅಲ್ಲಿ ಪ್ರಸಾದ

ದಾಸೋಹದ ವ್ಯವಸ್ಥೆ ಇರುತ್ತದೆ. ತೀರಾ ಬಡವರಿದ್ದರೆ ಅವರಿಗೆ ಬಂದು ಹೋಗುವ ಖರ್ಚನ್ನು ಸಹ ಕೊಡಬಹುದಾಗಿರುತ್ತದೆ. ಗುರು ಬಸವ ಸೇವೆಯಲ್ಲಿ ತನು ಸವೆಯಬೇಕು. ಮನವು ದುಡಿಯಬೇಕು, ಧನವು ವಿನಿಯೋಗವಾಗಬೇಕು. ಅಮೃತಸರದ ಕಾರ್‌ಸೇವಾ (ದೇಹಶ್ರಮ) ಜಗತ್‌ಪ್ರಸಿದ್ಧವಾಗಿದೆಯಲ್ಲವೆ ? ಶರಣ ಮೇಳದಲ್ಲಿ ನಾವು ಈ "ಕಾಯಸೇವೆ"ಯನ್ನು ಕಡ್ಡಾಯ ಮಾಡಿಲ್ಲ. ಕೆಲವು ಸ್ವಯಂ ಸೇವಕ ಕಾರ್ಯಕರ್ತರಿಗೆ ಮಾತ್ರ ಅದು ಲಭ್ಯವಾಗುತ್ತಿದೆ. ಏಕೆಂದರೆ ಶರಣ ಮೇಳದ 5 ದಿವಸಗಳ ಕಾರ್ಯಕ್ರಮವು ಕಮ್ಮಟ (workshop) ವಾಗಿ ಜನರನ್ನು ತರಬೇತಿಗೊಳಿಸಿ ಕಳಿಸಬೇಕಾದುದು ಅನಿವಾರ್ಯವಿದೆ. ಮುಂದೆ ಅವರು ಮಾಡಬೇಕಾದ ಕೆಲಸ ಬಹಳವಿರುತ್ತದೆ. ಆದ್ದರಿಂದ ಶರಣ ಬಂಧುಗಳು ವರ್ಷದ ಬೇರಾವುದೇ ಸಮಯವನ್ನು ಒದಗಿಸಿಕೊಂಡು ಮಹಾಮನೆ ಮಹಾಮಠಕ್ಕೆ ಬಂದು ಸೇವಾ ಕಾರ್ಯ ಕೈಗೊಳ್ಳುವ ಪರಿಪಾಠ ಬೆಳೆಸಿಕೊಳ್ಳಬೇಕು. ಅವರ ಶಕ್ತ್ಯಾನುಸಾರ ಸೇವೆ ಮಾಡಲು ಅವಕಾಶವಿರುತ್ತದೆ.

ದರ್ಶನ ಮತ್ತು ಸಂಕಲ್ಪ

ಪ್ರತಿಯೊಬ್ಬ ಧಾರ್ಮಿಕ ವ್ಯಕ್ತಿಗೂ ತನ್ನ ಸುಖ-ದುಃಖವನ್ನು ಲಿಂಗದೇವನೊಡನೆ, ಧರ್ಮಪಿತರೊಡನೆ, ಜಂಗಮ (ಸಮಾಜ)ದೊಡನೆ ಹಂಚಿಕೊಳ್ಳುವ ಪ್ರವೃತ್ತಿ ಬೆಳೆಯಬೇಕು. ತನಗೇನಾದರೂ ಒಳ್ಳಿತಾದಾಗ ಅದಕ್ಕೆ ಪ್ರತಿಫಲವಾಗಿ ಕೃತಜ್ಞತೆಯನ್ನು ಸಮರ್ಪಿಸಬೇಕು; ದುಃಖವಾದಾಗ ಅದರ ನಿವಾರಣೆಗಾಗಿ ಬಂದು ಪೂಜೆ ಮಾಡಿಸಿ, ಒಳ್ಳಿತಿಗಾಗಿ ಸಂಕಲ್ಪಿಸಬೇಕು. ಇದಕ್ಕೀಗ ಸೂಕ್ತ ವೇದಿಕೆ ಬಸವ ಮಹಾಮನೆ ; ಅದೀಗ ಬಸವ ಭಕ್ತರಿಗೆ ಧಾರ್ಮಿಕ ತೌರು. ವಿದ್ಯಾಭ್ಯಾಸ ಪೂರೈಕೆ, ನೌಕರಿ, ವಿವಾಹ, ಸಂತಾನ ಪ್ರಾಪ್ತಿ, ಲಾಭ ಪ್ರಾಪ್ತಿ, ಮುಂಬಡ್ತಿ ಹೀಗೆ ಯಾವುದೇ ಸಂತೋಷಕರ ಪ್ರಸಂಗ ಒದಗಿದಾಗ ಬಸವ ಧರ್ಮ ಪೀಠಕ್ಕೆ ಆಗಮಿಸಿ, ಪೂಜೆ-ದಾಸೋಹಗಳಲ್ಲಿ ಸ್ವತಃ ಭಾಗಿಗಳಾಗಿ ತನಗೆ ನೀಡಿದ ಸೌಭಾಗ್ಯಕ್ಕಾಗಿ ಗುರು ಬಸವ-ಲಿಂಗದೇವರಿಗೆ ಕೃತಜ್ಞತೆ ಸಲ್ಲಿಸಬೇಕು. ಅದೇ ರೀತಿ ಹೊಸ ಪ್ರಯತ್ನ ಕೈಗೊಳ್ಳುವಾಗ, ಹೆಚ್ಚಿನ ವಿದ್ಯಾಭ್ಯಾಸದ ಹಂಬಲವಿದ್ದಾಗ, ವಿದೇಶ ಪ್ರವಾಸ ಕೈಗೊಳ್ಳುವಾಗ, ವ್ಯಾಪಾರ ವ್ಯವಹಾರದಲ್ಲಿ ನಷ್ಟವಾಗುತ್ತಿರುವಾಗ ಬಂದು ಸ್ವತಃ ಪೂಜೆಯಲ್ಲಿ ಭಾಗವಹಿಸಿ ಸಂಕಲ್ಪ ಕೈಗೊಂಡು, ಆ ಸಂಕಲ್ಪ ಈಡೇರಿದ ಬಳಿಕ ಪುನಃ ಬಂದು ಪೂಜೆಯನ್ನು ಸಲ್ಲಿಸಬೇಕು. ಇದು ಬಿಟ್ಟು ತನಗೆ ಸಂಬಂಧವಿಲ್ಲದ ದೇವತೆಗಳ ಪೂಜೆ ಮಾಡುವುದು, ಹರಕೆ ಸಲ್ಲಿಸುವುದು, ಕೆಲವು ಉಗ್ರದೇವತೆಗಳಿಗೆ ಪ್ರಾಣಬಲಿ ಕೊಡುವುದು ಮುಂತಾದ ಮೂಢನಂಬಿಕೆ ಆಚರಣೆ ಮಾಡಬಾರದು.

ಈ ದಿಶೆಯಲ್ಲಿ ತನುಸೇವೆಯ ಹರಕೆ ಬಹು ಉತ್ತಮ. ಇಂಥ ಕೆಲಸವಾದರೆ ಇಷ್ಟು ದಿನ ಕಾಯಸೇವೆ ಮಾಡುತ್ತೇನೆ ಎಂದು ಸಂಕಲ್ಪಿಸಿ ಬಸವ ಧರ್ಮ ಪೀಠದಲ್ಲಿ ಅಷ್ಟು ದಿನ ಇದ್ದು ದಾಸೋಹಶಾಲೆಯಲ್ಲಿ ಪ್ರಸಾದ ಎಡೆ ಮಾಡುವುದು, ಪೂಜಾ ಮಂದಿರ ಸ್ವಚ್ಛ ಮಾಡುವುದು ಮುಂತಾದ ಸೇವೆ ಕೈಗೊಳ್ಳಬೇಕು. ಒಮ್ಮೆ ಒಂದು ಗುರುದ್ವಾರಕ್ಕೆ ಹೋದಾಗ ಆಮದಾದ (imported) ಕಾರಿನಲ್ಲಿ ಬಂದ ಕೋಟ್ಯಧೀಶರೊಬ್ಬರು ನಮ್ಮ ಶರಣರಿಗೆ ತಾವೇ ಊಟಕ್ಕೆ ನೀಡಿದರಂತೆ. ಸಿಖ್ಖರ ಜೂತಾಸೇವೆ (ಚಪ್ಪಲಿ ಸೇವೆ) ಜಗತ್ಪ್ರಸಿದ್ಧ. ಅವರ ತ್ಯಾಗ-ದಾಸೋಹ

ನೋಡಿದಾಗ ನಮ್ಮವರೂ ಹೀಗಾಗಿ ಗುರು ಬಸವ-ಲಿಂಗದೇವರ ಋಣ ತೀರಿಸುವುದು ಯಾವಾಗ ? ಎನ್ನಿಸುತ್ತ ನನ್ನ ಹೃದಯ ಚಟಪಟಿಸುತ್ತದೆ. ನಮ್ಮಲ್ಲಿಯೂ ಈಗ ಒಳ್ಳೆಯ ಸೇವಾವ್ರತಿಗಳು ತಯಾರಾಗಿದ್ದಾರೆ ಎಂದೇ ಶರಣ ಮೇಳದಲ್ಲಿ ದಾಸೋಹವು ಅಷ್ಟು ಸುಸೂತ್ರವಾಗಿ ನಡೆಯುತ್ತದೆ. ಆದರೆ ಸೇವಾವ್ರತಿಗಳ ಸಂಖ್ಯೆ ಮತ್ತು ವೃದ್ಧಿಯಾಗುತ್ತಿರುವ ವೇಗ ಸಾಲದು. ದಾಸೋಹ ಭಾವನೆಯ ಧರ್ಮದ ಆಧಾರದ ಮೇಲೆ ರೂಪುಗೊಂಡ ಈ ಸಮಾಜವು ಬೇಗನೆ ಮಾದರಿ ಸಮಾಜವಾಗಿ ರೂಪುಗೊಳ್ಳಬೇಕಾಗಿದೆ.

ರಾಷ್ಟ್ರೀಯ ಬಸವ ದಳ ಮತ್ತು ಛಲವಂತಿಕೆ

"ಲಿಂಗದೇವ ವಚನಾಂಕಿತವಾದುದರಿಂದ ರಾಷ್ಟ್ರೀಯ ಬಸವ ದಳಗಳಲ್ಲಿ ಒಡಕು ಉಂಟಾಯಿತು ; ಪ್ರಗತಿ ಕುಂಠಿತವಾಯಿತು. ಇದನ್ನು ಮಾಡದಿದ್ದರೆ ಇನ್ನೂ ವೃದ್ಧಿಯಾಗುತ್ತಿತ್ತು." ಎಂದೆಲ್ಲ ಕೆಲವರ ಟೀಕೆ. ಇದೆಲ್ಲ ಮಿಥ್ಯಾರೋಪ. ಯಾವಾಗ ಏನೇನು ಮಾಡಿಕೊಳ್ಳಬೇಕೋ ಆ ಕಾಲಕ್ಕೆ ತಕ್ಕಂತೆ ಗುರುಬಸವ-ಲಿಂಗದೇವ-ಶರಣರು ತಮ್ಮ ಸಂಕಲ್ಪಗಳನ್ನು ಪೂರೈಸಿಕೊಳ್ಳುತ್ತಿರುವರು. ನಮಗೂ ಅನ್ನಿಸುತ್ತೆ, ಕೆಲವರು ಅನ್ನುತ್ತಾರೆ. "ಶರಣ ಮೇಳ ಇನ್ನಿಪ್ಪತ್ತು ವರ್ಷ ಮೊದಲೇ ಆಗಬೇಕಿತ್ತು. ಬಸವ ಧರ್ಮ ಪೀಠ ಇನ್ನೂ ಮೊದಲೇ ಆಗಬೇಕಿತ್ತು" ನಿಜ ; ಆದರೆ ಬಸವ-ಲಿಂಗ ದ್ವಯರ ಸಂಕಲ್ಪ ಯಾವಾಗ ಆಗಬೇಕೆಂದಿತ್ತೋ ಆಗ ಆಗುವಂತೆ ಪ್ರೇರಣೆ ನೀಡಿತು.

ಧ್ವನಿ ಸುರುಳಿ ಮಾಡುವಾಗ ಉಪಯೋಗಿಸುವ ಟೇಪಿನಲ್ಲಿ ಟ್ರ್ಯಾಕ್‌ಗಳು ಇರುತ್ತವೆ. ಒಂದು ಮಾರ್ಗದಲ್ಲಿ ತಬಲಾ, ಇನ್ನೊಂದರಲ್ಲಿ ಸಿತಾರ, ಮತ್ತೊಂದರಲ್ಲಿ ಧ್ವನಿ ಇತ್ಯಾದಿ. ಎಲ್ಲ ಸೇರಿ ಲೌಡ್ ಸ್ಪೀಕರ್ ಬಾಕ್ಸಿನಲ್ಲಿ ಕೇಳುತ್ತವೆ. ಹಾಗೆಯೇ ನಮ್ಮದು 3 ಮಾರ್ಗದ ಟೇಪ್. ಗುರು(ಬಸವಣ್ಣ), ಲಿಂಗದೇವ, ಜಂಗಮ(ಶರಣಸಮೂಹ)- ಈ ಮೂವರಿಂದಲೂ ಆದೇಶಗಳು ಹೊಮ್ಮಿ ನಮ್ಮ ಹೃನ್ಮನಗಳೆಂಬ ಸೌಂಡ್ ಬಾಕ್ಸಲ್ಲಿ ಕೇಳುತ್ತವೆ. ಅವರ ಪ್ರೇರಣೆ ಆದಾಗ ಆಯಾ ಕೆಲಸವಾಗುತ್ತವೆ. ಮೊದಲೇ ಆಗೆಂದರೆ ಹೇಗೆ ಆಗಲು ಸಾಧ್ಯ ? 1968ರಲ್ಲಿ ಮಹಿಳಾಗುರು ಪೀಠಕ್ಕೆ ಪ್ರೇರಣೆ, 1970ರಲ್ಲಿ ಸ್ಥಾಪನೆ, 1975ರಲ್ಲಿ ಬೆಂಗಳೂರಿನಲ್ಲಿ ಬಸವ ಮಂಟಪ ಸ್ಥಾಪನೆ, 1988ರಲ್ಲಿ ಶರಣ ಮೇಳ, 1992ರಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠ, 1996ರಲ್ಲಿ ಗಣಲಿಂಗ ಸ್ಥಾಪನೆ ; ಇವೆಲ್ಲವೂ ಗುರು-ಲಿಂಗ-ಜಂಗಮತ್ರಯರ ಸಂಕಲ್ಪಗಳೆ ? ಈ ಸಂಕಲ್ಪ ಪೂರೈಕೆಗೆ ಸಾಧನ ರಾಷ್ಟ್ರೀಯ ಬಸವ ದಳ.

ಶರಣ. ಡಿ.ಪಿ.ಪ್ರಕಾಶ್ ಹೇಳಿದಂತೆ ಈ ಎಲ್ಲ ಕಾರ್ಯ ಮಾಡಿದುದು ಒಂದು ಎಲೆಕ್ಟ್ರಿಕ್ ಸಿಸ್ಟಮ್ ಎಲ್ಲ ಸಿದ್ಧಪಡಿಸಿ ಇಟ್ಟಂತೆ ; "ಲಿಂಗದೇವ"ನ ವಚನಾಂಕಿತ ಬಂದುದು ಫ್ಯೂಸ್ ಹಾಕಿದಂತಾಯಿತು. ಆ ಫ್ಯೂಸ್ ಹಾಕುತ್ತಲೇ ಜಗ್ಗನೆ ಬೆಳಕು ! ಎಲ್ಲ ಜೀವಂತಗೊಂಡಿತು. ನನಗೆ ಚಿಂತನೆ ಮಾಡಿದಷ್ಟೂ ಇದು ಅಗಾಧ ಪರಿಕಲ್ಪನೆ ಎನಿಸುತ್ತಿದೆ" ಎಂದು ಉದ್ಗರಿಸುತ್ತಾರೆ ಪ್ರಕಾಶ್.

ಈ. ಬೆಳಕು ಎಂದೂ ಹೊತ್ತದೆ ಲಿಂಗಾಯತ ಸಮಾಜವು ಕಗ್ಗತ್ತಲೆಯಲ್ಲೇ ಇದ್ದು ತಡವರಿಸುತ್ತ ಮುಗ್ಗರಿಸುತ್ತ ಇರಬೇಕು ಎಂದು ಬಯಸಿದವರಿಗೆ "ಲಿಂಗದೇವ" ನುಂಗಲಾರದ ತುತ್ತು. ವೀರಶೈವ ಮಹಾಸಭೆಗೂ ಲಿಂಗಾಯತ ಸಮಾಜಕ್ಕೂ ಯಾವ ಬಾದರಾಯಣ ಸಂಬಂಧ ?

ಧರ್ಮಪಿತ ಬಸವಣ್ಣನವರನ್ನು ಧರ್ಮಗುರು ಎಂದೊಪ್ಪದ ವೀರಶೈವ ಮಹಾಸಭೆಗೆ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದ ಸುಕೃತಿ-ವಿಕೃತಿಯ ಬಗ್ಗೆ ಮಾತನಾಡಲು ಯಾವ ಹಕ್ಕೂ ಇಲ್ಲ. ನಾವೇನಾದರೂ ವೇದಾಗಮಗಳ ವಿಷಯಕ್ಕೆ ಕೈ ಹಾಕಿದರೆ ಆಗ ವೀರಶೈವ ಮಹಾಸಭೆ ಪ್ರಶ್ನೆ ಕೇಳಲಿ.

ಪಂಚ ಪೀಠಾಧೀಶರು ಏನಾದರೂ ಮಾಡಿಕೊಳ್ಳಲಿ ; ಆದರೆ ವಿರಕ್ತರು ವಚನ ಸಾಹಿತ್ಯದ ಪ್ರಚಾರ ಮಾಡಬೇಕಾದುದು ಅದಕ್ಕಿಂತ ಮಿಗಿಲಾಗಿ ಅದರಂತೆ ನಡೆಯಬೇಕಾದುದು ಅವರ ಆದ್ಯ ಕರ್ತವ್ಯವಾಗಿತ್ತು. ಅದನ್ನು ಮಾಡದ ಅವರು ಪುರಾಣ ಸಂಸ್ಕೃತಿಯನ್ನು ಬೆಳೆಸಿದರೆ ವಿನಾ ವಚನ-ಪ್ರವಚನ ಸಂಸ್ಕೃತಿಯನ್ನಲ್ಲ. ಅವರು ಮಾಡದೆ ಇರುವ ಕಾರ್ಯವನ್ನು ಬಸವ ಧರ್ಮ ಪೀಠದ ಧರ್ಮ ಬೋಧಕರು ಮಾಡುತ್ತಿರುವುದು ಕೆಲವು ವಿರಕ್ತ ಮಠಾಧೀಶರಿಗೆ ಮಾತ್ಸರ್ಯವನ್ನು ಹುಟ್ಟಿಸಿದೆ. ಬಸವ ಧರ್ಮವು ಪ್ರಚಾರವಾಗಬಾರದು, ಸತ್ಯ ಇತಿಹಾಸ ತಿಳಿಯಬಾರದು ಎಂಬುದು ವೀರಶೈವ ಮಹಾಸಭೆಯ ಆಕಾಂಕ್ಷೆ. ಹೀಗಾಗಿ ಉಭಯತರೂ ಕೈಜೋಡಿಸಿ ದುಷ್ಟ ತಂತ್ರಗಳನ್ನು ರೂಪಿಸುವುದು ಬಲು ಸಹಜ. ಆದ್ದರಿಂದ ಈ ದಿಶೆಯಲ್ಲಿ ಬಸವ ಪಥಿಕರಾದ ರಾಷ್ಟ್ರೀಯ ಬಸವ ದಳಗಳವರು ಛಲವಂತರಾಗಿ ಕಾರ್ಯೋನ್ಮುಖರಾಗಬೇಕು.

1. ತಮ್ಮ ಮನೆಗಳಲ್ಲಿ ನಡೆಯುವ ಗೃಹಪ್ರವೇಶ, ವಿವಾಹ, ನಾಮಕರಣ, ಮುಂತಾದುವನ್ನು ಧಾರ್ಮಿಕ ಸಮಾವೇಶ ನಡೆಸಲು ಬಳಸಿಕೊಂಡು, ಧೈರ್ಯವಾಗಿ ಧರ್ಮಪ್ರಚಾರ ಮಾಡಬೇಕು. ಇಂಥ ಸಮಾರಂಭಗಳಿಗೆ ಕುತಂತ್ರಿಗಳು (ಕೆಲವು ಮಠಾಧೀಶರಾಗಲೀ ಅಥವಾ ಅವರ ಬೆಂಬಲಿಗರಾಗಲೀ) ತಡೆಯೊಡ್ಡಲು ಸಾಧ್ಯವಾಗುವುದಿಲ್ಲ.

2. ಪ್ರಜಾಪ್ರಭುತ್ವದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿದೆ. ಯಾವುದೇ ಧರ್ಮದವರು ವೇದಿಕೆ ರಚಿಸಿಕೊಂಡು ತಮ್ಮ ವಿಚಾರಗಳನ್ನು ಮಂಡಿಸಲು ಅವಕಾಶವಿದೆ. ಆದರೆ ಇನ್ನೊಬ್ಬರ ವಿಚಾರವನ್ನು ನಿರ್ದೇಶಿಸಲು, ತಡೆಯೊಡ್ಡಲು ಹಕ್ಕಿಲ್ಲ, ಕಾನೂನಿನಲ್ಲಿ ಅವಕಾಶವಿಲ್ಲ. ಆದ್ದರಿಂದ ರಾಷ್ಟ್ರೀಯ ಬಸವ ದಳಗಳು ಆಕ್ರಮಣಕಾರಿಗಳಲ್ಲವಾದರೂ ಆತ್ಮರಕ್ಷಣೆ ಮಾಡಿಕೊಳ್ಳಲು ಹಕ್ಕುದಾರರಾಗಿದ್ದಾರೆ. ಇಂಥವರು ಛಲತೊಡಲೇ ಬೇಕು. ಕೆಲವು ವಿರಕ್ತ ಮಠಾಧೀಶರುಗಳು, ವೀರಶೈವ ಮಹಾಸಭೆಯವರು ಮತ್ತು ವೀರಶೈವವಾದಿಗಳು ಬಸವ ತತ್ತ್ವ ಬೋಧೆ ನಡೆಯಬಾರದೆಂದು ಪಣತೊಟ್ಟು ಅಡ್ಡಿ ಆತಂಕ ಒಡ್ಡಿದರೂ ಛಲವಂತರಾಗಿ ಬಸವ ಭಕ್ತರು ಬಸವ ತತ್ತ್ವ ಬೋಧೆ ನಡೆಸಲೇ ಬೇಕು. ಇಂದು ಲಿಂಗಾಯತರು ಮತ್ತು ಲಿಂಗಾಯತೇತರ ಜನ ಸಾಮಾನ್ಯರು ಆಕರ್ಷಿತರಾಗುವುದು ಬಸವ ತತ್ತ್ವಕ್ಕೇ ವಿನಾ ವೀರಶೈವದ ಹಳೆಯ ಗೊಡ್ಡು ವಾದಕ್ಕಲ್ಲ. ಕಾಡಿಗೆ ಮೇಯಲು ದನಗಳು ಹೋದಾಗ ಹುಲಿಯು ಎರಗಿ ಬಂದರೆ ಅಹಿಂಸಾತ್ಮಕ ಪ್ರಾಣಿಗಳಾದ ದನಗಳು ಹೆದರಿ ತಮ್ಮ ಸಂಗಾತಿ ದನವನ್ನು ಬಿಟ್ಟುಕೊಡುವುದಿಲ್ಲವಂತೆ. ಶುದ್ಧ ಅಹಿಂಸಾತ್ಮಕ ಪ್ರಾಣಿಗಳಾದ ಹಸು-ಎತ್ತುಗಳು ತಮ್ಮ ಕೊಂಬುಗಳನ್ನು ಹೊರಮುಖವಾಗಿ ಮಾಡಿಕೊಂಡು ವೃತ್ತಾಕಾರದಲ್ಲಿ ನಿಂತು ಹುಲಿಯನ್ನು ಎದುರಿಸುತ್ತವಂತೆ. ಹಾಗೆಯೇ ವೀರಶೈವ ಮಹಾಸಭೆ ಎಂಬ ಹುಲಿ ರಾಜಕೀಯ ಬಲ ಮತ್ತು ಧನಬಲದಿಂದ, ಬಸವ ತತ್ತ್ವ ಪ್ರಚಾರವಾಗಬಾರದೆಂದು ಮಠಾಧೀಶರನ್ನು

ಮುಂದಿಟ್ಟುಕೊಂಡು ಬಸವ ಸಂದೇಶವಾಹಕ ಧರ್ಮಬೋಧಕರಿಗೆ ತೊಂದರೆ ಕೊಡಬಂದರೆ ರಾಷ್ಟ್ರೀಯ ಬಸವ ದಳಗಳವರು ತತ್ತ್ವನಿಷ್ಠರ ಪಡೆಯನ್ನು ವರ್ಧಿಸಿಕೊಂಡು ಹಸುಗಳು ಒಟ್ಟುಗೂಡಿ ಹುಲಿಯನ್ನು ಹಿಮ್ಮೆಟ್ಟಿಸುವಂತೆ ಬಸವ ತತ್ತ್ವ ವಿರೋಧಿಗಳನ್ನು ಹಿಮ್ಮೆಟ್ಟಿಸಬೇಕು. ಇವರ ಹಿಂದೆ ಲಿಂಗದೇವನ ಅನುಗ್ರಹವಿದೆ. ಬಸವ ಗುರುವಿನ ಶ್ರೀರಕ್ಷೆ ಇದೆ. ಅವರ ಮೇಲೆ ಲಿಂಗದೇವನ ಕ್ರೋಧವಿದೆ. ಸದಾಕಾಲವೂ ಅವರು ಪರಮಪ್ರಭು ಜಗದೊಡೆಯ ಲಿಂಗದೇವನ ದೂಷಣೆಯನ್ನು ಮಾಡುವುದನ್ನೇ ತಮ್ಮ ಕೆಲಸವನ್ನಾಗಿ ಮಾಡಿಕೊಂಡಿದ್ದಾರೆ. ಈಗಲಾದರೂ ಬಸವ ತತ್ತ್ವ ಪಥಿಕರು ವಿರೋಧಿಗಳ ಧೂರ್ತ ತಂತ್ರವನ್ನು ಅರ್ಥಮಾಡಿಕೊಳ್ಳಲಾರದವರಾದರೆ ಮುಂದೆಂದೂ ಬಸವ ತತ್ತ್ವಾಧಾರಿತ ಜಾತಿ ವರ್ಣವರ್ಗರಹಿತ ಧರ್ಮಸಹಿತ ಸುಂದರ ಬಂಧುರ ಶರಣ ಸಮಾಜವನ್ನು ಕಟ್ಟಲಾರರು ಎಂದುಬು ನೆನಪಿರಲಿ.

-ಬಸವಾತ್ಮಜೆ

ವಾಗ್ದಾನಿಗಳಿಗೆ ಸೂಚನೆ

ಕೂಡಲ ಸಂಗಮದ ಬಸವ ಧರ್ಮ ಪೀಠದ ಆವರಣದಲ್ಲಿ ಸರ್ವಜ್ಞ ಶರಣಧಾಮ ಎಂಬ ವಸತಿ ಗೃಹ ಮತ್ತು 4 ಸಮುದಾಯ ಕೋಣೆಗಳು ತ್ವರಿತ ಗತಿಯಲ್ಲಿ ನಿರ್ಮಾಣವಾಗುತ್ತಿವೆ. ಶರಣ ಮೇಳದ ಸಮಯದಲ್ಲಿ ಹೆಚ್ಚಿನ ದಾನಿಗಳಿಗೆ ಸ್ಥಳಾವಕಾಶ ಕಲ್ಪಿಸಿಕೊಡುವಂತೆ ಆಗಬೇಕೆಂದು ತ್ವರಿತಗತಿಯಲ್ಲಿ ಕಾರ್ಯ ಮಾಡಲಾಗುತ್ತಿದೆ.

ಎಷ್ಟೋ ದಾನಿಗಳು ಮೊದಲು ವಾಗ್ದಾನ ಮಾಡಿ ನಂತರ ಕಂತಿನಲ್ಲಿ ಕೊಡುತ್ತಾ ಹೋಗುವರು. ಇಂಥ ವಾಗ್ದಾನಿಗಳು ಆದಷ್ಟು ಬೇಗ ತಮ್ಮ ಕಾಣಿಕೆಗಳನ್ನು ಕಳಿಸಬೇಕೆಂದು ಕೋರುತ್ತೇವೆ. ತ್ವರಿತಗತಿಯಲ್ಲಿ ಕೆಲಸವಾಗಬೇಕೆಂದು ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. ಹಣದ ಕೊರತೆಯಿಂದ ಕೆಲಸವು ನಿಲ್ಲುವಂತೆ ಆಗಬಾರದಷ್ಟೆ, ಆದ್ದರಿಂದ ವಾಗ್ದಾನಿಗಳು ಬೇಗನೆ ತಮ್ಮ ಕಾಣಿಕೆ ಕಳಿಸಬೇಕು. ಬಸವ ಧರ್ಮ ಪೀಠ, ಬೆಂಗಳೂರು ಎಂದು ಯಾವುದೇ ಬ್ಯಾಂಕಿನ ಡಿ.ಡಿ. ತೆಗೆದು ಕಳಿಸಬಹುದು. ಇಲ್ಲವೇ State Bank of India ಬ್ಯಾಂಕಿನಿಂದ ಬಸವ ಧರ್ಮ ಪೀಠ, ಕೂಡಲಸಂಗಮ ಎಂಬ ಡಿ.ಡಿ.ಯನ್ನು ತೆಗೆಸಿ ಕಳಿಸಬಹುದು.

ಕೂಡಲ ಸಂಗಮದ ವಿಳಾಸ
ಬಸವ ಧರ್ಮ ಪೀಠ
ಮಹಾಮನೆ ಮಹಾಮಠ, ಶರಣ ಲೋಕ
ಕೂಡಲಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟ

ಬೆಂಗಳೂರು ವಿಳಾಸ
ಬಸವ ಧರ್ಮ ಪೀಠ
ಬಸವ ಮಂಟಪ, 2035
20ನೇ ಮುಖ್ಯ ರಸ್ತೆ, ರಾಜಾಜಿನಗರ
2ನೇ ಬ್ಲಾಕ್, ಬೆಂಗಳೂರು-560010

ವಾಙ್ಮಯ ತಪಸ್ವಿ ಸ್ವಾಮಿ ಲಿಂಗಾನಂದರು

ಗುರೂಪದೇಶ ಮಂತ್ರವೈದ್ಯ
ಜಂಗಮೋಪದೇಶ ಶಸ್ತ್ರವೈದ್ಯ ನೋಡಾ !
ಭವರೋಗದ ಕಳೆವ ಪರಿಯ ನೋಡಾ
ಲಿಂಗದೇವನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ. -ಬ.ವ.ದೀ 652

ಸಂಜೆ ಏಳರ ಪವಿತ್ರವಾದ ಸಮಯ. ದೂರದಿಂದ ಸಂಜೆಗತ್ತಲನ್ನು ಸೀಳಿಕೊಂಡು, ಸುತ್ತಮುತ್ತಲಿನ ಶಬ್ದಮಾಲಿನ್ಯವನ್ನು ಭೇದಿಸಿಕೊಂಡು ಕಂಚಿನ ಕಂಠದ ಸುಸ್ಪಷ್ಟವಾದ ಧ್ವನಿಯೊಂದು ಕೇಳಿಬರುತ್ತಿದೆ ?! ಇದರ ಸೆಳೆತಕ್ಕೆ ಒಳಗಾದ ವಾಹನಗಳು ಅತ್ತ ತಿರುಗುತ್ತಿವೆ. ವಾಯುಸೇವನೆಗೆಂದು, ಮಾರುಕಟ್ಟೆಗೆಂದು, ಕಛೇರಿ ಕೆಲಸ ಮುಗಿಸಿ ಮನೆಗೆ ಹಿಂದಿರುಗಲೆಂದು ಬಂದವರ, ದಾರಿಹೋಕರ ಪಾದಗಳು ಗುಂಪು ಗುಂಪಾಗಿ, ಆ ಧ್ವನಿ ಬಂದ ದಿಕ್ಕಿಗೆ ಹೆಜ್ಜೆ ಹಾಕುತ್ತಿವೆ. ಅದೇನಿರಬಹುದೆಂದು ಕುತೂಹಲವೇ ? ಬನ್ನಿ, ನಾವೂ ಅವರನ್ನು ಹಿಂಬಾಲಿಸೋಣ.

ಅದೊಂದು ಜನಸಂದಣಿಯಿಂದ ಕೂಡಿದ ನಗರ ಮಧ್ಯದಲ್ಲಿರುವ ವಿಶಾಲವಾದ ಮೈದಾನ. ಸಿದ್ಧವಾಗಿರುವ ಎತ್ತರದ ವೇದಿಕೆಯ ಮೇಲೆ, ತಲೆಗೆ ಕಾವಿ ಪೇಟ, ಕಾವಿಯ ಬಗಲುಗಸೆಯಂಗಿ ಧರಿಸಿದ ಸ್ವಾಮಿಗಳೋರ್ವರು ಕುಳಿತಿದ್ದಾರೆ. ಅವರ ಮುಂದೆ ಮೈಕ್ ಇದೆ. ಮಂದಸ್ಮಿತ, ತೇಜಸ್ವಿಮುಖಮುದ್ರೆಯ, ಎತ್ತರವಾದ ದಿವ್ಯ ಭವ್ಯ ವ್ಯಕ್ತಿತ್ವದ ಸ್ವಾಮೀಜಿಯವರು, ಅಲ್ಲಿ ಸೇರಿದ್ದ ಜನರಿಗೆ ಪ್ರವಚನಾಮೃತವನ್ನು ಉಣಬಡಿಸುತ್ತಿದ್ದಾರೆ. ಆ ಜನರಾದರೂ ಅಷ್ಟೇ ತನ್ಮಯತೆಯಿಂದ ಸವಿಯುತ್ತಿದ್ದಾರೆ, ಆಲಿಸುತ್ತಿದ್ದಾರೆ. ಪೂಜ್ಯರ ಶ್ರೀಮುಖದಿಂದ ಸ್ಫುರಿಸುತ್ತಿರುವ ಈ ವಾಗ್ಝರಿ ಕಬ್ಬಿಣದ ಕಡಲೆಯಂತಿಲ್ಲ. ಆಬಾಲವೃದ್ಧರಾದಿಯಾಗಿ, ಪಂಡಿತ ಪಾಮರರೆಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಮತ್ತು ಕೇಳಿದ್ದನ್ನು ಜೀವನದ ಕೊನೆಯವರೆಗೂ ನೆನಪಿನಲ್ಲಿ ಉಳಿಯುವಂತೆ ವಿವರಿಸುತ್ತಿದ್ದ ಆ ನಿರೂಪಣಾ ಶೈಲಿ ನಿಜಕ್ಕೂ ಅದ್ಭುತವಾಗಿದೆ. ಅಬ್ಬಾ ! ಪ್ರತಿದಿನವೂ ಕೇಳುಗರ ಮನಸ್ಸನ್ನು ಸತತವಾಗಿ ಎರಡು ಗಂಟೆಗಳ ಕಾಲ ಅತ್ತಿತ್ತ ಚಲಿಸದಂತೆ ಹಿಡಿದಿಟ್ಟುಕೊಂಡಿರುವ ಆ ಮಾಂತ್ರಿಕನ, ಗಾರುಡಿಗನ ವಾಕ್ಚಾತುರ್ಯ ಎಂಥದ್ದಿರಬೇಕು !! ಇಂಥ ಪ್ರವಚನವನ್ನು ಹಿಂದೆ ಎಂದೂ ಕೇಳಿರಲಿಲ್ಲ. ಸದ್ಯಕ್ಕೆ ಒದಗಿ ಬಂದಿರುವ ಇಂಥ ಸದವಕಾಶವನ್ನು ಕಳೆದುಕೊಂಡರೆ ಮುಂದೆ ಮತ್ತೆ ಇಂಥ ಪ್ರವಚನ ಸಿಗಲಿಕ್ಕಿಲ್ಲ. ಏಕೆಂದರೆ ಈ ಪ್ರವಚನಕಾರರು ಮಡುವಿನಲ್ಲಿ ನಿಂತ ನೀರಲ್ಲ. ಸದಾ ಹರಿಯುತ್ತಿರುವ ಜಂಗಮ ನದಿ. ಆದ್ದರಿಂದ ಇದರ ರುಚಿ ಒಮ್ಮೆ ಕಂಡ ಮೇಲಂತೂ ಎಷ್ಟೇ ಕೆಲಸವಿದ್ದರೂ, ಏನೇ ಒತ್ತಡವಿದ್ದರೂ, ಬಿಡುವು ಮಾಡಿಕೊಂಡು ಭಾಗಿಗಳಾಗಿ ಸಿಕ್ಕಿದಷ್ಟು, ನಮ್ಮ ನೆತ್ತಿ ಹಿಡಿಸುವಷ್ಟು ಜ್ಞಾನಜಲವನ್ನು ಬೇಗ ಈಂಟಬೇಕು. ತಪ್ಪಿಸಿಕೊಂಡರೆ ಜೀವನದಲ್ಲಿ ಅಮೂಲ್ಯವಾದ ಕ್ಷಣಗಳನ್ನು ಕಳೆದುಕೊಂಡಂತೆಯೇ. ಅಂದಂತೆ ಇದು ಒಂದೆರಡು ದಿನಗಳ ಮಾತಲ್ಲ. 30-60 ದಿನಗಳು ಉರುಳಿದರೂ, ಜನ ಮತ್ತಷ್ಟು ದಿನ ಬೇಕೆಂದು

ಹಂಬಲಿಸುತ್ತಿರುವಂತೆಯೇ ಯಶಸ್ವಿಯಾಗಿ ಪ್ರವಚನವನ್ನು ಮುಕ್ತಾಯಗೊಳಿಸುತ್ತಾ, ಜನಮನದಲ್ಲಿ ಭದ್ರವಾದ ಛಾಪನ್ನು ಮೂಡಿಸುತ್ತಾ, ಈ ಬಸವ ಪಥಿಕ, ಮುಂದಿನ ಊರಿಗೆ ಪಯಣ ಬೆಳೆಸುತ್ತಿದ್ದರು. ಇಂತಹ ಉತ್ಕಟಭಾವವನ್ನು, ಕಾತುರತೆಯನ್ನು, ಜ್ಞಾನದಾಹವನ್ನು ಜನರ ಹೃದಯದಲ್ಲಿ ಹುಟ್ಟಿಸುತ್ತಿದ್ದವರು, ತುಂಬುತ್ತಿದ್ದವರು ಯಾರು ?! ಅವರೇ ಕ್ರಾಂತಿಕಾರಿ, ಪ್ರಗತಿಪರ ಧರ್ಮಪ್ರಚಾರಕರೂ, ಪ್ರವಚನ ಪಿತಾಮಹರು, ವಾಙ್ಮಯ ತಪಸ್ವಿಗಳೆಂದೂ ಹೆಸರಾಗಿದ್ದ ಪೂಜ್ಯ ಶ್ರೀ ಸ್ವಾಮಿ ಲಿಂಗಾನಂದ ಅಪ್ಪಾಜಿಯವರು.

ನಾವು ಸಾಕಷ್ಟು ಜನರ ಭಾಷಣಗಳನ್ನು ಕೇಳಿದ್ದೇವೆ. ಮಠಾಧೀಶರ ಉಪದೇಶಗಳನ್ನು ಆಲಿಸಿದ್ದೇವೆ. ಗಣ್ಯರ ಮಾತುಗಳಿಗೆ ಕಿವಿಕೊಟ್ಟಿದ್ದೇವೆ. ಕೀರ್ತನ, ಪುರಾಣ, ಪುಣ್ಯಕಥೆ, ಕಾಲಕ್ಷೇಪಗಳನ್ನು ಶ್ರವಣ ಮಾಡಿದ್ದೇವೆ. ಹೆಸರಾಂತ ಸಂಗೀತ ಕಛೇರಿಗಳಲ್ಲಿ ತಲೆ ತೂಗಿದ್ದೇವೆ. ಮಾತು ಮಾತಿಗೂ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾ ತಾವು ನಕ್ಕು ನಮ್ಮನ್ನು ನಗಿಸುತ್ತಾ ಬಫೂನ್‌ಗಳಂತೆ ಕುಣಿದು ಕುಪ್ಪಳಿಸಿದ ಸಭೆಗಳಲ್ಲೂ ಭಾಗವಹಿಸಿದ್ದೇವೆ, ಆದರೇನು? ಇವರ ಪರಿಯೇ ಬೇರೆ ! ಮೇಲೆ ಹೇಳಿದ ಎಲ್ಲಾ ಮಾಧ್ಯಮಗಳಿಂದಲೂ ಭಿನ್ನವಾದ, ಈ 'ಪ್ರವಚನ' ಎನ್ನುವ, ಜನಮನದ ಮೈಲಿಗೆ ತೊಳೆಯುವ, ನಿತ್ಯ ಸತ್ಯಶುದ್ಧವಾದ, ಸಾಹಸ, ಪ್ರತಿಭೆಯ ಜ್ಞಾನಕ್ರಿಯಾ ಪ್ರಧಾನವಾದ ಅಪರೂಪದ ಕಾಯಕವನ್ನು ಹುಟ್ಟುಹಾಕಿದ ಶ್ರೇಯಸ್ಸು ಪೂರ್ಣವಾಗಿ ಪೂಜ್ಯ ಶ್ರೀ ಲಿಂಗಾನಂದ ಅಪ್ಪಾಜಿಯವರಿಗೆ ಸಲ್ಲಬೇಕು. ಏಕೆಂದರೆ ಇದು ಎಲ್ಲರಿಗೂ ಸುಲಭಸಾಧ್ಯವಾದ ಕಾಯಕವಲ್ಲ. ತಿಪ್ಪೆ ಸಾರಿಸುವ ಕೆಲಸವೂ ಅಲ್ಲ. ಪೂಜ್ಯ ಅಪ್ಪಾಜಿಯವರು ಹೇಳುತ್ತಿದ್ದರು. "ಪ್ರವಚನ ಎಂದರೆ ಕೇವಲ ಮಾತಿನ ಮಾಲೆಯಲ್ಲ. ಮನರಂಜನೆಯ ಕೂಟವೂ ಅಲ್ಲ. ಅದೊಂದು ತಪಸ್ಸು, ಸಮಷ್ಟಿಯೋಗ, ಅಂದರೆ ವೈಯಕ್ತಿಕವಾದ ಪೂಜೆ, ಜಪ, ಧ್ಯಾನ, ಪ್ರಾಣಾಯಾಮಗಳಿಂದ ವ್ಯಕ್ತಿಯು ಮಾತ್ರ ಬಲಿಷ್ಠನಾದರೆ ಪ್ರವಚನ ಎಂಬ ಸಮಷ್ಟಿಯೋಗದಿಂದ ಒಂದು ಜನಾಂಗ, ಸಮುದಾಯ, ಸಮಾಜವೇ ಬಲಿಷ್ಠವಾಗುತ್ತದೆ. ಇದರಿಂದ ಮನಸ್ಸು, ಬುದ್ಧಿಗಳ ಮೇಲೆ ಬೆಳಕು ಚೆಲ್ಲಿದಂತಾಗಿ ಬದುಕು ಹಸನಾಗುತ್ತದೆ" ಎಂದು. ಹೇಳುತ್ತಿದ್ದರಷ್ಟೇ ಅಲ್ಲ ; ಸಾಧಿಸಿ ತೋರಿಸಿದರು. ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ, ತಮ್ಮ ಜೀವನದ ಪ್ರತಿಕ್ಷಣವನ್ನು ಜ್ಞಾನದಾಸೋಹಕ್ಕಾಗಿ ಸವೆಸಿದ, ಮೀಸಲಿಟ್ಟಿದ್ದ ಮಹಾ ತ್ಯಾಗಿ ಪೂಜ್ಯರು ಎಂದರೆ ಅತಿಶಯೋಕ್ತಿಯಲ್ಲ.

ಧರ್ಮಪಿತರು ತಮ್ಮ ವಚನಗಳಲ್ಲಿ ಹೇಳುತ್ತಾರೆ. "ಗೀತವ ಬಲ್ಲಾತ ಜಾಣನಲ್ಲ, ಮಾತು ಬಲ್ಲಾತ ಜಾಣನಲ್ಲ ; ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು" ಎಂದು. ನಮ್ಮಲ್ಲಿ ಮಾತಿನ ಮಲ್ಲರಿಗಾಗಲಿ, ಸಭೆಗಳಲ್ಲಿ ರಂಜನೀಯವಾಗಿ ಮಾತಾಡುತ್ತಾ ಚಪ್ಪಾಳೆಗಿಟ್ಟಿಸುವವರಿಗಾಗಲೀ ಕೊರತೆಯಿಲ್ಲ. ಆದರೆ ಮಾತುಗಳನ್ನು ಸತ್ಯದ ಪ್ರತಿಪಾದನೆಗಾಗಿ ಲೋಕಕಲ್ಯಾಣಕ್ಕಾಗಿ ಬಳಸುತ್ತಾ ಮಾತಿಗೆ ಒಂದು ಗೌರವವನ್ನು ಪೂಜ್ಯತೆಯನ್ನು ಸಾರ್ಥಕತೆಯನ್ನು ತಂದುಕೊಟ್ಟವರು ಎಷ್ಟು ಜನ ? ಕೆಲವರು ಸಭೆಗಳಲ್ಲಿ ಮಾತಾಡುವುದನ್ನು ಕೇಳಬೇಕು ; ಅವು ಕೇಳುಗರಿಗೂ ಹೇಳುವವರಿಗೂ ಏನೊಂದು ತಿಳಿದಿರಬಾರದು. ಮತ್ತೆ ಕೆಲವರ ಮಾತುಗಳಂತೂ ತುಟಿಯಿಂದ ಹೊರಗೆ ಬರುವುದಿಲ್ಲ.

ಪಾಪ, ಅವು ಗಂಟಲಿನೊಳಗೆ ಮುಷ್ಕರ ಹೂಡಿ ಸಮಾಧಿ ಪಡೆದಿರುತ್ತವೆ. ಇಂಥವರು ಜನರಿಗೆ ಏನು ಉಪದೇಶ ಮಾಡಬಲ್ಲರು ? ಸಮಾಜವನ್ನು ಹೇಗೆ ತಿದ್ದಬಲ್ಲರು ? ಮತ್ತೆ ಕೆಲವರು ಮಾತಾಡುವುದನ್ನು ಕೇಳಬೇಕು, ಪಿಸುದನಿಯಲ್ಲಿ ವೇದಿಕೆಯ ಮೇಲೆ ತನಗೆ ಮತ್ತು ತನ್ನ ಅಕ್ಕಪಕ್ಕದವರಿಗೆ ಮಾತ್ರ ಕೇಳಿಸಬೇಕು. ಅಂಥಲ್ಲಿ ಸಭಿಕರು "ಏನು ಅವರಿಗೇ ಮಾತು ಬರುವುದಿಲ್ಲವೋ, ಅಥವಾ ನಾವೇ ಕಿವುಡರೋ?" ಎಂಬ ಸಂದಿಗ್ಧತೆಗೆ, ಸಂದೇಹಕ್ಕೆ ಒಳಗಾಗಬೇಕಾಗುತ್ತದೆ. ಇನ್ನು ಕೆಲವರು ಬಾಯಿಶೂರರು ಮತ್ತು ಬಾಡಿಗೆ ಬಾಯಿಯವರು ಅಂದರೆ ಜನರ ಮುಂದೆ ಗಿಳಿಪಾಠದಂತೆ ದೊಡ್ಡ ದೊಡ್ಡ ಮಾತಾಡಿ, ತೆರೆ ಹಿಂದೆ ತಾವಾಡಿದ ಮಾತಿಗೆ ವಿರುದ್ಧವಾಗಿ ವರ್ತಿಸುವವರು. ಮತ್ತೆ ಕೆಲವರು ಹೌದಪ್ಪ-ಅಲ್ಲಪ್ಪಗಳಾಗಿ ತಮ್ಮ ಬೇಳೆ ಬೇಯಿಸಿಕೊಂಡು ಬದುಕುವವರು. ಇಂಥ ಸಮಯ ಸಾಧಕರು ಹೇಗೆ ದೇಶವನ್ನು ಬಲಿಷ್ಠಗೊಳಿಸಬಲ್ಲರು ; ಧರ್ಮ ಸಮಾಜಗಳನ್ನು ಉಳಿಸಿ ಬೆಳೆಸಬಲ್ಲರು ? ಇವೆಲ್ಲಕ್ಕೂ ಹೊರತಾಗಿ, ಒಳಹೊರಗೆ, ಸ್ಫಟಿಕದಂತೆ ಒಂದಾಗಿ "ಪ್ರವಚನವನ್ನೇ" ತಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಮಾಡಿಕೊಂಡು ಬದುಕಿದ ಚೇತನ ಪೂಜ್ಯ ಅಪ್ಪಾಜಿಯವರು.

ಪೂಜ್ಯರ ಪ್ರವಚನಗಳು ಯಶಸ್ವಿಯಾಗಲು, ಜನಪ್ರಿಯವಾಗಲು ಕಾರಣವೇನು ? ಮುಖ್ಯವಾಗಿ ತಮ್ಮ ವಿಚಾರಗಳನ್ನು, ಚಿಂತನೆಗಳನ್ನು ತಾವು ಕಂಡುಕೊಂಡ ಸತ್ಯ ಸಂಗತಿಗಳನ್ನು ಕೇಳುಗರ ಮನಸ್ಸಿಗೆ, ಬುದ್ಧಿಗೆ, ಹೃದಯಕ್ಕೆ ಪೂಜ್ಯರು ರವಾನಿಸುತ್ತಿದ್ದುದು. ಅವರ ಸಂವಹನ ಕ್ರಿಯೆ ಅಮೋಘವಾಗಿರುತ್ತಿತ್ತು. ಸಭಿಕರಿಗೆ ವಿಷಯಗಳನ್ನು ಮನದಟ್ಟುಮಾಡಿಕೊಡಲು ತಮ್ಮಿಂದ ಸಾಧ್ಯವಾದ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದರು. ಕಠಿಣ ತತ್ತ್ವಗಳನ್ನು ಸಿದ್ಧಾಂತಗಳನ್ನು ಕಥೆ, ಹಾಸ್ಯ, ದೃಷ್ಟಾಂತ, ಲೌಕಿಕ ಉದಾಹರಣೆಗಳೊಂದಿಗೆ ಬಿತ್ತರಿಸುತ್ತಿದ್ದರು. ಅವರ ಪ್ರವಚನಗಳು ಸೂರ್ಯೋದಯದಂತೆ ನಿತ್ಯನೂತನವಾಗಿರುತ್ತಿದ್ದವು. ಪ್ರತಿ ಪ್ರವಚನಗಳು ಹೊಸ ಹೊಸ ವಿಚಾರಗಳು, ಚಿಂತನೆಗಳಿಂದ ತುಂಬಿರುತ್ತಿದ್ದವು. ವಿಷಯಗಳು ಎಲ್ಲಿಯೂ ಪುನರಾವರ್ತನೆ ಆಗುತ್ತಿರಲಿಲ್ಲ. ವರ್ಷವೆಲ್ಲ ಅಭ್ಯಾಸ ಮಾಡಿದ್ದರೂ, ಪ್ರವಚನಕ್ಕೆ ಹೋಗುವಾಗ ಪರೀಕ್ಷೆಗೆ ಹೊರಟ ವಿದ್ಯಾರ್ಥಿಯಂತೆ ಸಿದ್ಧತೆ, ಅವಲೋಕನ ಮಾಡಿಕೊಳ್ಳುತ್ತಿದ್ದರು. ವಿಷಯ ಸಂಗ್ರಹ, ಅಧ್ಯಯನದಲ್ಲಿ ಅಪಾರವಾದ ಆಸಕ್ತಿ. ಯಾವಾಗಲೂ, ಅಧ್ಯಯನ, ಚಿಂತನೆ, ಬಂದ ಭಕ್ತರೊಂದಿಗೆ ಮಾತುಕತೆ, ಚರ್ಚೆ, ಶಿಷ್ಯರಿಗೆ ಜ್ಞಾನಬೋಧೆ, ತಪ್ಪು ಒಪ್ಪುಗಳ ಬಗ್ಗೆ ಮುನ್ನೆಚ್ಚರಿಕೆ-ಮಾರ್ಗದರ್ಶನ ಹೀಗೆ ಇಳಿವಯಸ್ಸಿನಲ್ಲಿಯೂ ಸದಾ ಚೈತನ್ಯದ ಚಿಲುಮೆಯಾಗಿ ಚಟುವಟಿಕೆಯ ಬುಗ್ಗೆಯಾಗಿ ಆದರ್ಶಪ್ರಾಯರಾಗಿದ್ದರು. ದೇಶ-ಧರ್ಮ-ಸಮಾಜಕ್ಕಾಗಿ ದುಡಿಯುತ್ತಿರುವ ತ್ಯಾಗಿಗಳನ್ನು ಕಂಡರೆ ಅಪಾರವಾದ ಮಮತೆ-ವಾತ್ಸಲ್ಯ, ದೀನ ದುರ್ಬಲರ ಬಗ್ಗೆ ಅನುಕಂಪ. ಹೀಗಾಗಿ ಪರಿಮಳಯುಕ್ತ ಪುಷ್ಪದ ಸುತ್ತ ಜೇನ್ನೊಣಗಳು ಸುಳಿಯುವಂತೆ ಮುಮುಕ್ಷುಗಳು, ಜಿಜ್ಞಾಸುಗಳ ಹಿಂಡು ಅವರನ್ನು ಸುತ್ತುವರಿಯುತ್ತಿತ್ತು. ಈ ಎಲ್ಲಾ ಧನಾತ್ಮಕ (Positive) ಅಂಶಗಳು ಹೆಚ್ಚು ಜನರನ್ನು ಆಕರ್ಷಿಸಲಿಕ್ಕೆ ಕಾರಣವಾಗುತ್ತಿದ್ದವು.

ಇನ್ನು ಪ್ರವಚನಗಳಿಂದ ಆಗುತ್ತಿದ್ದ ಸತ್ಪರಿಣಾಮಗಳ ಬಗ್ಗೆ ಹೇಳುವುದಾದರೆ ಧರ್ಮಪಿತರ

ವಾಣಿಯಂತೆ ಗುರೂಪದೇಶ ಮಂತ್ರವೈದ್ಯ. ಅಂದರೆ ಗುರು ರೂಪದ ಈ ಭವರೋಗ ವೈದ್ಯರು ಮಾನವನ ಜೀವನದಲ್ಲಿ ಅಜ್ಞಾನದಿಂದ ಉಂಟಾಗುವ ಚಿಂತೆ, ಭಯ, ಭ್ರಾಂತಿಗಳೆಂಬ ಮಾನಸಿಕ ಕಾಯಿಲೆಗಳಿಗೆ ಪೂಜೆ, ಮಂತ್ರ ಜಪ ಧ್ಯಾನಗಳನ್ನು ಕಲಿಸಿ ಮನೋರೋಗಗಳಿಂದ ಮುಕ್ತರನ್ನಾಗಿ ಮಾಡುತ್ತಿದ್ದರು. ಆಲಸ್ಯ ಮತ್ತು ಸ್ವಾರ್ಥಗಳಿಂದ ಕೂಡಿದ ವ್ಯಾಧಿಗೆ ಕಾಯಕ-ದಾಸೋಹ ಎಂಬ ಸಂಜೀವಿನಿಯ ಮಹತ್ವವನ್ನು ಅಗತ್ಯಗಳನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ಅಜ್ಞಾನಿ ನಾಸ್ತಿಕರು ಸಂದೇಹವಾದಿಗಳು, ಸುಜ್ಞಾನಿ ಆಸ್ತಿಕರಾಗುತ್ತಿದ್ದ ನಿದರ್ಶನಗಳುಂಟು. ಜಾತಿ ಮತ ಪಂಥ ಲಿಂಗಭೇದವಿಲ್ಲದೆ ಬಯಸಿ ಬಂದವರಿಗೆಲ್ಲ ದೀಕ್ಷಾನುಗ್ರಹ ಮಾಡುತ್ತಾ ಮಾರ್ಗದರ್ಶನ ನೀಡುತ್ತಿದ್ದರು. ಇದರಿಂದ ಬರಡಾಗಿದ್ದ ಜೀವನದಲ್ಲಿ ಆಸಕ್ತಿ ಹುಟ್ಟಿ, ಸಾರ್ಥಕತೆಯನ್ನು ಕಂಡುಕೊಂಡವರಿಗೆ ಲೆಕ್ಕವಿಲ್ಲ. ಹೀಗೆ ಜನರಿಗೆ ಆತ್ಮಸಂಸ್ಕಾರ ನೀಡುವುದರಲ್ಲಿ ಪ್ರವಚನವು ಮುಖ್ಯಪಾತ್ರ ವಹಿಸುತ್ತಿತ್ತು.

ಇನ್ನು ಪ್ರವಚನಗಳಿಂದ ಸಮಾಜದ ಮೇಲೆ ಆಗುವ ಪರಿಣಾಮವೇನೆಂದು ನೋಡೋಣ. ಜಂಗಮೋಪದೇಶ ಶಸ್ತ್ರವೈದ್ಯ- ಈ ಚಿಕಿತ್ಸೆ ಕೊಂಚ ತೀಕ್ಷ್ಣವೂ ಪ್ರವಲವೂ ಆಗಿರುತ್ತಿತ್ತು. "ಜಂಗಮ" ಎನ್ನುವ ಈ ಶಸ್ತ್ರಚಿಕಿತ್ಸಾ ತಜ್ಞರು ಸಮಾಜ ಎನ್ನುವ ರೋಗಗ್ರಸ್ಥ ಶರೀರದಲ್ಲಿ ಜಾತೀಯತೆ, ಅಸ್ಪೃಶ್ಯತೆ, ಅನೈಕ್ಯತೆ, ಬಹುದೇವತೋಪಾಸನೆ, ಮೂಢನಂಬಿಕೆ, ಕಂದಾಚಾರ ಮುಂತಾಗಿ ಆಳವಾಗಿ ಬೇರುಬಿಟ್ಟಿರುವ ಗಡ್ಡೆಗಳನ್ನು ಪ್ರವಚನದ ಕತ್ತರಿ ಮೂಲಕ ಕತ್ತರಿಸಿ, ಶಸ್ತ್ರಚಿಕಿತ್ಸೆ ಮಾಡುತ್ತಿದ್ದರು, ನಂತರ ರೋಗಿಗೆ ಸಚ್ಚಿಂತನೆ, ರಾಷ್ಟ್ರಪ್ರಜ್ಞೆ ಎಂಬ ಹೊಲಿಗೆ ಹಾಕಿ, ಶರಣರ, ಮಹಾತ್ಮರ ಸಂದೇಶಗಳೆಂಬ ಮುಲಾಮು ಹಚ್ಚಿ, ದೀಕ್ಷಾಸಂಸ್ಕಾರ ಎಂಬ ಬ್ಯಾಂಡೇಜು ಹಾಕಿ, ವಚನ ಸಾಹಿತ್ಯದ ಔಷಧಿ, ಮಾತ್ರೆ, ಇಂಜೆಕ್ಷನ್‌ಗಳನ್ನು ಕೊಡುತ್ತಿದ್ದರು. ಇದರಿಂದ ಪ್ರಬಲವಾಗಿರುವ ಪುರೋಹಿತ, ಬಂಡವಾಳ ಶಾಹಿಯನ್ನು ಎದುರುಹಾಕಿಕೊಂಡರೂ ಹೆದರದೆ ನಿರ್ಭೀತಿಯಿಂದ ಪ್ರಾಣವನ್ನೇ ಪಣಕ್ಕಿಟ್ಟು ಕೊನೆಯವರೆಗೂ ಛಲದಿಂದ ಹೋರಾಡಿದ ಧೀಮಂತ ಚೇತನ.

ಹೀಗೆ ಪ್ರವಚನಗಳಿಂದ ಏಕಕಾಲದಲ್ಲಿ ಎರಡು ರೀತಿಯ ಕಲ್ಯಾಣವಾಗುತ್ತಿತ್ತು. ಒಂದು ವ್ಯಷ್ಟಿಕಲ್ಯಾಣ- ದೇವರು ಧರ್ಮದ ಬಗ್ಗೆ ಸರಿಯಾದ ತಿಳುವಳಿಕೆ ಕೊಡುತ್ತಾ, ಪೂಜೆ, ಜಪ, ಧ್ಯಾನ, ಯೋಗಗಳನ್ನು ಕಲಿಸುತ್ತಾ ಮನದಲ್ಲಿದ್ದ ಅಜ್ಞಾನದ ಕತ್ತಲೆಯನ್ನು ಕಳೆದು ಸುಜ್ಞಾನದ ಜ್ಯೋತಿಯನ್ನು ಬೆಳಗುವುದು. ಇನ್ನೊಂದು ಸಮಷ್ಟಿ ಕಲ್ಯಾಣ- ಸತ್ಯದ ಹಾದಿಯಲ್ಲಿ ಸಾಗುತ್ತಾ ಮುಂದಿನ ಗುರಿ ಕಂಡುಕೊಳ್ಳಬೇಕೆನ್ನುವವರಿಗೆ, ಹಿಂಬಾಲಿಸುವವರಿಗೆ, ತಾವೂ ನಡೆದು ತೋರಿಸಿ, ಮುಂದಿನ ಹಾದಿಯನ್ನು ಸುಗಮಗೊಳಿಸುವುದು. ಈ ಕಾರಣಕ್ಕಾಗಿ ಪೂಜ್ಯರ ಪ್ರವಚನದಲ್ಲಿ ಆತ್ಮಕಲ್ಯಾಣ ಮತ್ತು ಲೋಕಕಲ್ಯಾಣಗಳೆರಡು ಒಟ್ಟಿಗೆ ಕೈ ಕೈ ಹಿಡಿದು ಸಾಗುತ್ತಿದ್ದವು.

ಪ್ರವಚನಕಾರನ ಕೆಲಸ ಒಂದು ರೀತಿ ಮಡಿವಾಳ (ಅಗಸ)ನ ಕಾಯಕದಂತೆ ಎನ್ನುತ್ತಾರೆ ಅಪ್ಪನವರು. ಊರಿನೆಲ್ಲ ಜನರ ಬಟ್ಟೆಗಳನ್ನೇ ತೊಳೆಯುವ ಮಡಿವಾಳ ಮೊದಲು ತಾನು ಧರಿಸಿದ ಬಟ್ಟೆಗಳನ್ನು ಶುಚಿಯಾಗಿಟ್ಟುಕೊಳ್ಳಬೇಕು. ಅವನ ಬಟ್ಟೆಗಳು ಕೊಳಕಾಗಿದ್ದರೆ "ತನ್ನ ಸ್ವಂತ ಬಟ್ಟೆಗಳನ್ನೇ ಸರಿಯಾಗಿ ತೊಳೆದುಕೊಳ್ಳದವ ಇವನು ನಮ್ಮ ಬಟ್ಟೆಗಳನ್ನು ಹೇಗೆ ತೊಳೆದಾನೋ ?!" ಎಂದು

ಜನರು ಅವನಿಗೆ ಬಟ್ಟೆ ಕೊಡಲು ಹಿಂಜರಿಯುತ್ತಾರೆ ; ಹೆದರುತ್ತಾರೆ ; ಸಂದೇಹಿಸುತ್ತಾರೆ. ಅದರಂತೆ ಸಮಾಜವನ್ನು ತಿದ್ದಲು ಹೊರಟ ಸಾಧಕನು ಮೊದಲು ತನ್ನ ವೈಯಕ್ತಿಕ ಬದುಕನ್ನು ಪವಿತ್ರವಾಗಿಟ್ಟುಕೊಳ್ಳಬೇಕು ; ಶುದ್ಧಚಾರಿತ್ರ್ಯವನ್ನು ಕಾಪಾಡಿಕೊಳ್ಳಬೇಕು. ಅಂದಾಗ ಮಾತ್ರ ಅಂಥವರ ನಡೆ-ನುಡಿಗಳು ಸತ್ವಯುತವಾಗಿ, ಸಮುದಾಯದ ಮೇಲೆ ಪ್ರಭಾವ ಬೀರುತ್ತವೆ. ಇಲ್ಲದಿದ್ದರೆ ಪ್ರಜ್ಞಾವಂತ ಜನರು ತಮ್ಮ ಬದುಕು, ಮನಸ್ಸು, ಬುದ್ಧಿಯನ್ನು ಚಾರಿತ್ರ್ಯಹೀನರ ಕೈಯಲ್ಲಿ ಕೊಡಲು ಹೆದರುತ್ತಾರೆ ; ಸಂದೇಹಿಸುತ್ತಾರೆ. ಇದನ್ನರಿತೆ ಪೂಜ್ಯ ಅಪ್ಪಾಜಿಯವರು ನಮಗೆ ಬೋಧಿಸುತ್ತಿದ್ದರು. "ವಚನೋಪದೇಶಕ್ಕಿಂತ ವರ್ತನೋಪದೇಶ ಹೆಚ್ಚು ಪರಿಣಾಮಕಾರಿ. ಮಕ್ಕಳೇ, ನಮ್ಮ ಸನ್ನಡತೆಯನ್ನು ಯಾವಾಗಲೂ ಎಚ್ಚರಿಕೆಯಿಂದ ಕಾಯ್ದುಕೊಳ್ಳಬೇಕು. ಏಕೆಂದರೆ ಈ ಜಗತ್ತು ಆದರ್ಶ ಹೀನರನ್ನು ಅಷ್ಟಾಗಿ ಗಮನಿಸುವುದಿಲ್ಲ. ಆದರೆ ಸಮಾಜ ಸೇವೆ ಮಾಡುತ್ತಾ ಹಗಲಿರುಳು ನಿಸ್ವಾರ್ಥವಾಗಿ ದುಡಿಯುವ ತ್ಯಾಗಿಗಳನ್ನು, ಸಮಾಜ ಸುಧಾರಕರನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುತ್ತದೆ. ಆನೆ ಎಷ್ಟೇ ಬಲಶಾಲಿಯಾದ ಪ್ರಾಣಿಯಾಗಿದ್ದರೂ ಸಿಂಹಕ್ಕೆ ಶರಣಾಗುವಂತೆ (ಹೆದರುವಂತೆ) ವ್ಯಕ್ತಿಯು ಎಷ್ಟೆ ಬಲಿಷ್ಠನಿರಲಿ ಸಮಾಜ (ಜಂಗಮ)ಕ್ಕೆ- ತನ್ನ ಅಂತರಾತ್ಮಕ್ಕೆ ಅಂಜಲೇ ಬೇಕು. ಕೇವಲ ಪಾಂಡಿತ್ಯ ಪೂರ್ಣ ಮಾತಿನ ಬಲದಿಂದ ಜಗತ್ತನ್ನೇ ಜಯಿಸಬಲ್ಲೆ ಎಂದು ಕೆಟ್ಟ ಧೈರ್ಯದಿಂದ ಮುನ್ನುಗ್ಗುವ ಸಾಧಕನು ತಾತ್ಕಾಲಿಕವಾಗಿ ಜನಮನ್ನಣೆ ಗಳಿಸಿದರೂ ಇತಿಹಾಸದಲ್ಲಿ ಮೂಲೆಗುಂಪಾಗುವುದನ್ನು ಕಾಣುತ್ತೇವೆ. ಆದ್ದರಿಂದ ಪ್ರಾಮಾಣಿಕ ಸಾಧಕನು ಯಾವಾಗಲೂ ಅಂತರವಲೋಕನ ಮಾಡಿಕೊಳ್ಳುವುದನ್ನು ಕಲಿಯಬೇಕು. ಏಕೆಂದರೆ ಬಹಿರಂಗದಲ್ಲಿ ವ್ಯಕ್ತವಾಗುವ ಸುಧಾರಣೆಗಳೇ ಅಂತರಂಗದ ಪರಿವರ್ತನೆಗೆ ಕೈ ಕನ್ನಡಿ ಎಂಬುದನ್ನು ಅರಿಯಬೇಕು."

ಆದ್ದರಿಂದ ಒಬ್ಬ ಕಾಯಕ ನಿಷ್ಠೆಯಿರುವ ಅಧ್ಯಾತ್ಮಿಕ ಮಡಿವಾಳ ಮೊದಲು ತನ್ನ ವೈಯಕ್ತಿಕವಾದ ಬಟ್ಟೆಗಳನ್ನು ಸ್ವಚ್ಛವಾಗಿರಿಸಿಕೊಳ್ಳುವುದು ಆತ್ಮೋದ್ಧಾರವನ್ನು ಸೂಚಿಸಿದರೆ, ಊರ ಜನರ ಬಟ್ಟೆಗಳನ್ನು ತೊಳೆಯುವ ಕ್ರಿಯೆ ಸಮಾಜೋದ್ಧಾರವನ್ನು ಸಂಕೇತಿಸುತ್ತದೆ. ನೀವು ಆರು ತಿಂಗಳು ವರ್ಷದಿಂದಲೂ ಸಂಗ್ರಹವಾಗಿದ್ದ ಕೊಳೆಯ ಬಟ್ಟೆಗಳನ್ನು ಅಗಸನಿಗೆ ಕೊಡಿರಿ. ಅದು ಎಷ್ಟೇ ಹಳೆಕೊಳೆಯಾಗಿರಲಿ, ಎಷ್ಟೇ ಕಷ್ಟವಾದರೂ ಬಿಡದೆ, ತಾನು ಕಲಿತ ವಿದ್ಯೆಯನ್ನೆಲ್ಲ ಖರ್ಚುಮಾಡಿ ಸ್ವಚ್ಛವಾಗಿ ತೊಳೆದು, ಒಣಗಿಸಿ, ಇಸ್ತ್ರೀ ಮಾಡಿ ತಂದುಕೊಡುತ್ತಾನೆ. ನಿಮ್ಮ ಮೆಚ್ಚುಗೆಗೂ ಪಾತ್ರನಾಗುತ್ತಾನೆ. ಹಾಗೆಯೇ ಧರ್ಮ ಪ್ರಚಾರಕನೂ ಸಮಾಜದಲ್ಲಿ ಬಹುಕಾಲದಿಂದ ಸಂಗ್ರಹವಾಗಿರುವ ಹಳೆಕೊಳೆಯಾದ ಜಾತಿ ಪದ್ದತಿ, ಬೌದ್ಧಿಕ ದಾರಿದ್ರ್ಯ, ದಾಸ್ಯತ್ವ ಬಹುದೇವತೋಪಾಸನೆ, ಅನೈಕ್ಯತೆ ಇತ್ಯಾದಿ ಕೊಳೆಗಳನ್ನೆಲ್ಲ ತೊಳೆಯಲು ಶ್ರಮಿಸುತ್ತಾನೆ. ತನ್ಮೂಲಕ ಸತ್ಯಶೀಲರ- ದೇವನ ಮೆಚ್ಚುಗೆಗೆ ಪಾತ್ರನಾಗುತ್ತಾನೆ. ಇಂಥ ಪವಿತ್ರಾತ್ಮರು ಜಗತ್ತಿನಲ್ಲಿ ಇನ್ನೂ ನಮ್ಮ ನಡುವೆ ಇರುವುದರಿಂದಲೇ ನೆಮ್ಮದಿಯ ಬದುಕು ಸಾಧ್ಯವಾಗುತ್ತಿದೆ.

ಈಗಾಗಲೇ ಕೆಲವು ಕುಹಕಿಗಳು ಭಾವಿಸಿರುವಂತೆ ಮತ್ತು ಅಪಪ್ರಚಾರ ಮಾಡುತ್ತಿರುವಂತೆ ಪ್ರವಚನ ಎನ್ನುವುದು ಹಣ ತರುವ, ಆಸ್ತಿ ಮಾಡುವ ದಂಧೆಯಲ್ಲ. ಕಷ್ಟಕಾಲದಲ್ಲಿ ಪಡೆದ ಸಾಲವನ್ನೇ ಪ್ರಾಮಾಣಿಕವಾಗಿ ವಾಪಸ್ಸು ಕೊಡದ ಜನರಿರುವಾಗ, ಯಾವ ಪ್ರತಿಫಲದ ಆಸೆಯೂ ಇಲ್ಲದೆ

ಧರ್ಮ-ಸಮಾಜದ ಸರ್ವಾಂಗೀಣ ಉದ್ಧಾರಕ್ಕೆಂದು ಕೊಡಲು ಹಿಂದುಗಳು ಅದರಲ್ಲೂ ಲಿಂಗಾಯತರು (?) ಮುಂದಾಗುವರೇ ? ಇಲ್ಲ. ಪ್ರವಚನದಿಂದ ಪ್ರಭಾವಿತರಾದ ಮತ್ತು ಇವರ ರಚನಾತ್ಮಕ ಮಾನವೀಯ ಕಾರ್ಯಗಳ ಅರಿವುಳ್ಳ ಎಲ್ಲೋ ಕೆಲವು ಜನ ಸಹೃದಯರು, ಸದ್ಭಕ್ತರು ಮಾತ್ರ ಧನ ದಾಸೋಹ ಮಾಡುತ್ತಾರೆ. ಬೃಹತ್ ಲಿಂಗಾಯತ ಸಮಾಜವು ಬಡ-ನಿರ್ಗತಿಕ ಸಮಾಜ ಅಲ್ಲವಾದರೂ, ಇದರ ಬಹುಪಾಲು ಹಣದ ಹುಚ್ಚು ಹೊಳೆ "ನಾಯಿಯ ಹಾಲು ಪಂಚಾಮೃತಕ್ಕೆ ಸಲ್ಲದಯ್ಯ" ಎಂಬಂತೆ ಅನ್ಯ ಧರ್ಮಗಳಿಗೆ, ದುಂದು ವೆಚ್ಚಗಳಿಗೆ, ದುಶ್ಚಟ-ದುರ್ವ್ಯಸನಗಳಿಗೆ ಸ್ವಾರ್ಥಸಾಧನೆಗೆ ಹರಿದು ಹಂಚಿ ಹೋಗುತ್ತಿದೆ. ನಿಜಸ್ಥಿತಿ ಹೀಗಿರುವಾಗ ವಚನ ಸಾಹಿತ್ಯ ಪ್ರಕಟಣೆಗೆ, ಸಂಸ್ಥೆಗಳ ನಿರ್ಮಾಣಕ್ಕೆ ತ್ಯಾಗಿಗಳ ಪೋಷಣೆಗೆ, ದೀನ ದುರ್ಬಲರ ರಕ್ಷಣೆಗೆ, ಧರ್ಮಪ್ರಚಾರಕ್ಕೆ, ಜನಜಾಗೃತಿಯ ಕಾರ್ಯಕ್ರಮಗಳಿಗೆ ಬಹಳಷ್ಟು ಹಣದ ಅಗತ್ಯವಿದೆ. ಹಾಗಿದ್ದರೂ ಕೇವಲ ಆತ್ಮಬಲ, ದೃಢಸಂಕಲ್ಪದೊಂದಿಗೆ, ಮನೆಯಿಂದ ಬರಿಗೈಯಿಂದ ಹೊರಟ ಈ ಗುರು-ಶಿಷ್ಯರು ಯಾರ ನೆರವನ್ನೂ ನಿರೀಕ್ಷಿಸದೆ, ಕಡೆಗೆ ಸರ್ಕಾರದ ಸಹಾಯವನ್ನೂ ಬಯಸದೆ, ಇಂದು ಕೇವಲ ಪ್ರವಚನ ಎಂಬ ಸತ್ಕಾಯಕದ ಬಲದಿಂದ ಸಾಧಿಸಿರುವುದನ್ನು ನೋಡಿದರೆ ಎಂಥವರೂ ಬೆರಗಾಗುತ್ತಾರೆ. ಮೂಗಿನ ಮೇಲೆ ಬೆರಳಿಡುತ್ತಾರೆ. ಈ ಬಗ್ಗೆ ಒಂದು ಪತ್ರಿಕೆಯ ವರದಿಯನ್ನು ಬರೆಯುವುದಾದರೆ *"ಈ ಗುರುದ್ವಯರು ಜನಜಾಗೃತಿ ಮತ್ತು ಜನಸಂಘಟನೆಯಲ್ಲಿ ಸರ್ಕಾರವನ್ನೇ ನಾಚಿಸುವಷ್ಟು ಕೆಲಸ ಮಾಡಿದ್ದಾರೆ ! ಮೂರು-ನಾಲ್ಕು ಜನ್ಮಗಳಲ್ಲಿ ಸಾಧಿಸಬಹುದಾದ್ದನ್ನು ಒಂದೇ ಜನ್ಮದಲ್ಲಿ ಸಾಧಿಸಿದ್ದಾರೆ. !!"* "ಧೃತಿಗೆಟ್ಟು ಅನ್ಯರ ಬೇಡದಂತೆ; ಮತಿಗೆಟ್ಟು ಅನ್ಯರ ಹೊಗಳದಂತೆ" ಎಂದಿರುವ ಬಸವ ವಾಣಿಗೆ ಅಂಟಿಕೊಂಡಿರುವ ಇವರು ಯಾರ ಮುಂದೆಯೂ ದೀನರಾಗಿ ಕೈಯೊಡ್ಡಿ ಬೇಡಿದವರಲ್ಲ. ಕಾಯಕದಿಂದ ಬಂದುದನ್ನು ಮಾತ್ರ ಸ್ವೀಕರಿಸಿದವರು. ಇದಕ್ಕೊಂದು ನಿದರ್ಶನ ಹೇಳುವೆ. 1987ರ ವರ್ಷ. ಲಿಂಗಾಯತ ಧರ್ಮದ ಆದ್ಯರಾದ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮವು ಅಂದು ಯಾವುದೇ ಪ್ರಗತಿ ಕಾಣದ ಒಂದು ಕುಗ್ರಾಮವಾಗಿತ್ತು. 1987ರಲ್ಲಿ ಪೂಜ್ಯದ್ವಯರು ಅಲ್ಲಿ ಕಾಲಿಟ್ಟ ಮೇಲೆ, ಈ ಬಗ್ಗೆ ಜನಜಾಗೃತಿ ಮೂಡಿಸಲು ಅಲ್ಲೊಂದು ಬಸವ ತತ್ತ್ವ ತರಬೇತಿ ಕಮ್ಮಟವನ್ನು ಹಮ್ಮಿಕೊಳ್ಳಬೇಕೆಂದು ನಿಶ್ಚಯಿಸಿದರು. ಅಂತೆಯೇ 15 ದಿನಗಳ ಕಮ್ಮಟ ಪ್ರಾರಂಭವಾಯಿತು. ಕೊನೆಯ ದಿನದ ಭಕ್ತಿಪಕ್ಷ ಸಮ್ಮೇಳನಕ್ಕೆ ಅಂದಿನ ವಿರೋಧಪಕ್ಷದ ನಾಯಕಿಯಾಗಿದ್ದ ದಿವಂಗತ ಶ್ರೀಮತಿ ಕೆ.ಎಸ್.ನಾಗರತ್ನಮ್ಮನವರನ್ನು ಆಹ್ವಾನಿಸಲಾಗಿತ್ತು. ಪೂಜ್ಯ ಅಪ್ಪಾಜಿಯವರು ಆ ಕ್ಷೇತ್ರದ ದುಃಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಾಗ ನಾಗರತ್ನಮ್ಮನವರು ಒಂದು ಸಲಹೆಯನ್ನು ಮುಂದಿಟ್ಟರು. "ಸ್ವಾಮೀಜಿ, ಈ ಬಗ್ಗೆ ತಾವು ಸರ್ಕಾರಕ್ಕೆ ಒಂದು ಮನವಿ ಕೊಡಿರಿ. ನಾನು ಮುಖ್ಯಮಂತ್ರಿಗಳೊಂದಿಗೆ ಈ ವಿಷಯ ಕುರಿತು ಮಾತನಾಡುತ್ತೇನೆ" ಎಂದು. ಅದಕ್ಕೆ ಪೂಜ್ಯ ಅಪ್ಪಾಜಿಯವರು ಕೊಟ್ಟ ಉತ್ತರ ಏನು ಗೊತ್ತೆ ?! "ತಾಯಿ ! ನಾವು ಜಗತ್ಕರ್ತ ಪರಮಾತ್ಮ ಮತ್ತು ವಿಶ್ವಗುರು ಬಸವಣ್ಣನವರನ್ನು ಬಿಟ್ಟು ಬೇರೆ ಯಾರಿಗೂ ಮನವಿ ಅರ್ಪಿಸುವವರಲ್ಲ; ತಲೆಬಾಗುವವರಲ್ಲ !" ಎಂದು. ಕೂಡಲಸಂಗಮ ಕ್ಷೇತ್ರದ ಇತ್ತೀಚಿನ ಅಭಿವೃದ್ಧಿ ನೋಡಿದ ಮೇಲೆ

ನನಗನ್ನಿಸುತ್ತಿದೆ. "ಅಂದು ಪೂಜ್ಯ ಅಪ್ಪಾಜಿಯವರ ಮನವಿಯ ಮೇರೆಗೆ ಬಸವಣ್ಣನವರು ಸರ್ಕಾರದಿಂದ ತಮ್ಮ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದಾರೆ !!" ಎಂದು.

ನಮ್ಮ ಅಪ್ಪಾಜಿಯವರ ವ್ಯಕ್ತಿತ್ವದ ಮತ್ತೊಂದು ವೈಶಿಷ್ಟ್ಯವೆಂದರೆ, ಅವರು ಪ್ರವಚನದ ವೇದಿಕೆಯನ್ನು ಹತ್ತುವುದು ಇಳಿಯುವುದನ್ನು ನೋಡುವುದೇ ಒಂದು ರೋಚಕ ಅನುಭವ ! ಅದು ಹೇಗೆಂದರೆ ವೀರಯೋಧನೊಬ್ಬ "ಗೆದ್ದೇ ತೀರುವೆ" ಎಂಬ ಸತ್ಸಂಕಲ್ಪದೊಂದಿಗೆ, ಆತ್ಮವಿಶ್ವಾಸದ ದೃಢಹೆಜ್ಜೆಗಳನ್ನಿರಿಸುತ್ತಾ ರಣರಂಗವನ್ನು ಪ್ರವೇಶಿಸುತ್ತಿರುವಂತೆ ತೋರುತ್ತಿತ್ತು. ಅಷ್ಟೇ ಅಲ್ಲ, ವೇದಿಕೆಯ ಮೇಲೆ ಕುಳಿತ ನಂತರ ನೆರೆದಿದ್ದ ಶ್ರೋತೃಗಳ ಮೇಲೆ ಎಸೆಯುತ್ತಿದ್ದ ಸವಾಲಿನ ವಾಗ್ಬಾಣಗಳಾದರೂ ಅಷ್ಟೆ, ಅಬ್ಬಾ ! ಅದೆಷ್ಟು ರೋಮಾಂಚನಕಾರಿಯಾಗಿರುತ್ತಿದ್ದವು. ತಾವು ನಂಬಿದ ತತ್ತ್ವಗಳ ಸತ್ಯದ ಬಗ್ಗೆ ಅದೆಷ್ಟು ಅಚಲವಾದ ಆತ್ಮವಿಶ್ವಾಸ ಅವರಿಗೆ ! ಆಹಾ !! ನಿಜಕ್ಕೂ ಅದ್ಭುತ !!! ಪೂಜ್ಯರು ಹೇಳುತ್ತಿದ್ದರು. "ಬಂಧುಗಳೇ ಇಲ್ಲಿ ನೋಡಿ, ಇದು ಪೂಜ್ಯ ಮಾತಾಜಿಯವರು ಬರೆದಿರುವ "ವಿಶ್ವವಿಭೂತಿ ಬಸವಣ್ಣ" ಎಂಬ ಪುಸ್ತಕ. ಇದರಲ್ಲಿ ಬಸವಣ್ಣನವರ ಅರವತ್ತು ಮೂರು ಮಹತ್ವಪೂರ್ಣವಾದ ಸದ್ಗುಣಗಳ ಮತ್ತು ಅರ್ಹತೆಗಳ ಬಗ್ಗೆ ತಾತ್ತ್ವಿಕ ವಿವರಣೆಯಿದೆ. ಇದುವರೆಗೂ ಕನ್ನಡ, ಹಿಂದಿ, ಮರಾಠಿ ಮಂತಾದ ಭಾಷೆಗಳಲ್ಲಿ ಈ ಪುಸ್ತಕದ ಸಹಸ್ರಾರು ಪ್ರತಿಗಳು ಖರ್ಚಾಗಿವೆ. ಇಷ್ಟೇ ಗುಣಗಳನ್ನು ಹೊಂದಿರುವ ಮತ್ತೊಬ್ಬ ಮಹಾತ್ಮರನ್ನಾಗಲಿ, ಪ್ರವಾದಿಗಳನ್ನಾಗಲಿ ಸಿದ್ಧಮಾಡಿ ತೋರಿಸಿರಿ ಎಂದು ನಾವು ಸುಮಾರು ಇಪ್ಪತ್ತು ವರ್ಷಗಳಿಂದಲೂ ಪ್ರಚಾರ ಮಾಡುತ್ತಲೇ ಬಂದಿದ್ದೇವೆ. ಈಗಲೂ ಕಾಲ ಮಿಂಚಿಲ್ಲ. ಅಂಥ ಮಹಾತ್ಮರನ್ನು ತೋರಿಸಿದರೆ, ಇನ್ನು ಮುಂದೆ ಆ ಮಹಾತ್ಮರ ಪ್ರಚಾರಕ್ಕೆ ನನ್ನ ಉಳಿದ ಆಯುಷ್ಯವನ್ನು ಮೀಸಲಿಡುತ್ತೇನೆ." ಆದರೆ ಇಂದಿಗೂ ಆ ಸವಾಲನ್ನು ಸ್ವೀಕರಿಸಿ ತೋರಿಸಲು ಯಾರೂ ಮುಂದೆ ಬಂದಿಲ್ಲವೆಂಬುದು ಧಾರ್ಮಿಕ ಜಗತ್ತಿನ ಒಂದು ದೇವನಿರ್ಮಿತ ಅದ್ಭುತ ಪವಾಡವಾಗಿದೆ ಎನ್ನದೆ ವಿಧಿಯಿಲ್ಲ. ಇನ್ನು ಪ್ರವಚನವನ್ನು ಮುಗಿಸಿ ವೇದಿಕೆಯಿಂದ ಇಳಿಯುವಾಗಲಂತೂ ದಿಗ್ವಿಜಯ ಸಾಧಿಸಿದ ಸಂತೃಪ್ತಿ ಪೂಜ್ಯರ ಮುಖದ ಮೇಲಿರುತ್ತಿತ್ತು. ಅವರ ಪ್ರವಚನಗಳಾದರೂ ಹಾಗೇ ಇರುತ್ತಿದ್ದವು. ಜನಸಾಮಾನ್ಯರ, ಚಿಂತನಶೀಲರ ಪಾಲಿಗೆ ರಸದೂಟವಾದರೆ, ಸ್ವಾರ್ಥಿಗಳ, ಪಟ್ಟ ಭದ್ರಹಿತಾಸಕ್ತರ ಪಾಲಿಗೆ ಕಹಿಗುಳಿಗೆಗಳಾಗಿರುತ್ತಿದ್ದವು. ಇದರಿಂದ ಬಹಳಷ್ಟು ವಿರೋಧ, ಕಿರುಕುಳವನ್ನು ಎದುರಿಸಬೇಕಾಗುತ್ತಿತ್ತು. ಆದರೂ ಎಂದಿಗೂ ತಾವು ಹಿಡಿದ ತತ್ತ್ವಪಥದಿಂದ ಪೂಜ್ಯ ಗುರುಗಳು ಹಿಮ್ಮೆಟ್ಟಿದವರಲ್ಲ.

ನಮ್ಮ ಅಪ್ಪಾಜಿಯವರ ಮಗದೊಂದು ವಿಶಿಷ್ಟವಾದ ಗುಣವೆಂದರೆ "ವೇದಿಕೆಯಿಂದಲೇ ಪ್ರವಚನ - ಬೋಧೆ ಮಾಡಬೇಕು" ಎಂಬ ಕೃತಕ ನಿಯಮಕ್ಕೆ ಎಂದೂ ಒಳಗಾದವರಲ್ಲ. ನಿಂತಲ್ಲಿ, ಕುಳಿತಲ್ಲಿ, ನಡೆದಲ್ಲಿ ಸುತ್ತಮುತ್ತಲಿದ್ದ ಶಿಷ್ಯರಿಗೆ, ಜಿಜ್ಞಾಸುಗಳಿಗೆ, ಮುಮುಕ್ಷುಗಳಿಗೆ ಬೋಧೆ ಮಾಡುತ್ತಿದ್ದರು. ಅದು ಅವರ ನಿತ್ಯ ಕಾಯಕವಾಗಿತ್ತು. ಅದರ ಒಂದು ಅನುಭವವನ್ನು ನಿಮಗೆ ಹೇಳುತ್ತೇನೆ. ಮಂಗಳಮಯ ಆಹ್ಲಾದಕರ ಮುಂಜಾನೆಯ ಒಂದು ದಿನ ಬಸವಗಂಗೋತ್ರಿಯಲ್ಲಿ ಬೆಳಗಿನ ಸ್ನಾನ, ಪೂಜೆ ಮುಗಿಸಿ, ಸಂಸ್ಥೆಯ ಮೇಲ್ವಿಚಾರಣೆ ಮಾಡುತ್ತಾ ವಾಯುಸೇವನೆಗೆಂದು ಓಡಾಡುತ್ತಿದ್ದರು. ಅಲ್ಲಿಯೇ ಸಮೀಪದಲ್ಲಿದ್ದ ನನ್ನನ್ನು ಕರೆದು "ನೋಡಿ, ರಾತ್ರಿ ಪ್ರಚಾರಕ್ಕೆ

ಹೋಗಿದ್ದ ಗಾಡಿ ಬರಬೇಕಿತ್ತು. ಬಂತೇನು ?!'' ಎಂದು ವಿಚಾರಿಸಿಕೊಂಡರು. ಆಗ ನಾನು, ನೋಡಿಕೊಂಡು ಬರುತ್ತೇನೆ'' ಎಂದು ಹೊರಡಲು ಸಿದ್ಧಳಾದೆ. ಅದಕ್ಕೆ ಪೂಜ್ಯರು ''ಇಲ್ಲಿ ನೋಡಿ, ನಾನು ಗಾಡಿ ಬಂದಿರುತ್ತದೆ ಎಂದು ತಿಳಿಯುತ್ತೇನೆ, ಹೇಗೆ ಎಂದು ಹೇಳಬಲ್ಲಿರಾ ?'' ಎಂದು ಮರುಪ್ರಶ್ನಿಸಿದರು. ನಾನು ಗೊತ್ತಿಲ್ಲವೆಂಬಂತೆ ತಲೆ ಅಲ್ಲಾಡಿಸಿದೆ. ನಂತರ ಪೂಜ್ಯ ಅಪ್ಪಾಜಿಯವರು ವಿವರಿಸಿದ್ದು ಹೀಗೆ- ''ಇಲ್ಲಿ ನೋಡಿ, ಮಣ್ಣಿನಲ್ಲಿ ಕಾರಿನ ಚಕ್ರದ ಗುರುತು ಮೂಡಿದೆ. ಇದರಿಂದ ನಾವು ಗಾಡಿ ಬಂದಿದೆ ಎಂದು ಊಹಿಸಬಹುದು. ಇದಕ್ಕೆ ಅನುಮಾನ ಪ್ರಮಾಣ ಎನ್ನುತ್ತಾರೆ, ತಿಳಿಯಿತೆ ?'' ಅದುವರೆಗೂ ನನಗೆ ''ವ್ಯವಸ್ಥಿತವಾಗಿ ಅನುಮಾನ ಪಡಲಿಕ್ಕೂ ಒಂದು ಶಾಸ್ತ್ರವಿದೆ'' ಎಂದು ತಿಳಿದಿರಲಿಲ್ಲ. ಹೀಗೆ ಅಪ್ಪಾಜಿಯವರು ನಮಗೆ ಕುಳಿತಲ್ಲಿ, ನಿಂತಲ್ಲಿ ನಮ್ಮ ಬುದ್ಧಿ, ಮನಸ್ಸುಗಳಿಗೆ ಜ್ಞಾನವನ್ನು, ಸಂಸ್ಕಾರಗಳನ್ನು ತುಂಬುತ್ತಿದ್ದರು, ಪ್ರತಿ ಹೆಜ್ಜೆಯಲ್ಲೂ ಮಾರ್ಗದರ್ಶನ ಮಾಡುತ್ತಿದ್ದರು ; ಎಚ್ಚರಿಕೆ ನೀಡುತ್ತಿದ್ದರು. ಇದರಿಂದ ನಮ್ಮ ಪಾಲಿಗೆ ಪೂಜ್ಯರ ಕ್ಷಣಕಾಲದ ಸನ್ನಿಧಿ ಸಿಕ್ಕಿದರೂ ಸಾಕು, ಅವೆಲ್ಲ ಜ್ಞಾನದ ಕ್ಷಣಗಳಾಗಿ ಅನುಭಾವದ ರಸ ನಿಮಿಷಗಳಾಗಿ ಪರಿವರ್ತನೆ ಹೊಂದುತ್ತಿದ್ದವು.

ಇಂಥ ಪೂಜ್ಯ ಅಪ್ಪಾಜಿಯವರ ಜೀವನ, ಸಾಧನೆ,, ಸಂದೇಶಗಳನ್ನು ಮೆಲುಕು ಹಾಕಿದಾಗಲೆಲ್ಲ ಹೃದಯ ತುಂಬಿ ಬರುತ್ತದೆ. ಅವರ ಸಮಕಾಲೀನರಾಗಿದ್ದು ಕೆಲವು ಕಾಲವಾದರೂ ಕಳೆದಿದ್ದು ನಮ್ಮ ಪುಣ್ಯವಿಶೇಷ ಎನಿಸುತ್ತದೆ. ಏಕೆಂದರೆ ಹೂವಿನಿಂದ ನಾರು ಸ್ವರ್ಗಕ್ಕೆ ಎಂಬಂತೆ, ಶ್ರೀಗಂಧದ ಮರದ ಸಂಗ ಮಾಡಿದ ಬೇವಿನ ಮರ ಕ್ಷಣಕಾಲವಾದರೂ ಸುಗಂಧ ಬೀರುವಂತೆ, ಇಂಥ ಸದ್ಗುರುವಿನ ಉಪದೇಶ, ಸ್ಫೂರ್ತಿ, ಆಶ್ರಯ ಸಿಕ್ಕಿದ್ದರಿಂದಲೇ, ಇಂದು ನನ್ನಂಥ ಒಬ್ಬ ಸಾಮಾನ್ಯಳ ಬದುಕು ಸಹ ಸಾರ್ಥಕತೆಯನ್ನು ಅನುಭವಿಸುತ್ತಿದೆ. ಬಸವ ಧರ್ಮದ ಧ್ರುವತಾರೆಯಾಗಿ, ಕರ್ನಾಟಕದ ಧೀರಯೋಗಿಯಾಗಿ, ಭಾರತದ ಒಬ್ಬ ಶ್ರೇಷ್ಠ ತ್ಯಾಗಿಯಾಗಿ ಬಾಳಿ ಬೆಳಗಿದ ಪೂಜ್ಯ ಅಪ್ಪಾಜಿಯವರ ಶ್ರೀ ಪಾದಾರವಿಂದಗಳಿಗೆ 71ನೆಯ ಜಯಂತಿಯ ಶುಭ ಸಂದರ್ಭದಲ್ಲಿ ಈ ನುಡಿಪುಷ್ಪಗಳನ್ನು ಅರ್ಪಿಸಿ ಮಂಗಳ ಹಾಡುತ್ತೇನೆ.

ಜಯತು ಜಯತು ಲಿಂಗಾನಂದ ಸದ್ಗುರುವೆ ಪಾಹಿಮಾಂ ।
ಜಯತು ಜಯತು ಪ್ರತಿಭಾನ್ವಿತ ಜ್ಞಾನಮೂರ್ತೆ ರಕ್ಷಮಾಂ ॥

ಪೂಜ್ಯ ಶ್ರೀ ಮಾತೆ ಕಸ್ತೂರಿ ದೇವಿ, ಬಸವ ಗಂಗೋತ್ರಿ, ಕುಂಬಳಗೋಡು

ಪ್ರವಚನ ಪಿತಾಮಹ

ವಿವೇಕಾನಂದರಂತೆ ನಿರ್ಭೀತ ನಿಲುವು
ಅಪೂರ್ವವಾಗ್ಮಿ ವಿಶಾಲ ಹೃದಯಿ
ನೊಂದ ಜೀವಿಗಳ ಸಂತೈಸುವ ಕರುಣಾಮಯಿ
ಬಸವ ತತ್ತ್ವ ಪ್ರಚಾರಕರು
ಪ್ರವಚನ ಪಿತಾಮಹರು
ಪ್ರವಚನಕಾರರ ತಯಾರಕರು
ಧಾರ್ಮಿಕ ಗ್ರಂಥ ನಿರ್ಮಾಪಕರು
ಬಸವಣ್ಣ ಚಲನಚಿತ್ರ ನಿರ್ಮಾತೃಗಳು
ಬಸವ ಧರ್ಮ ಪೀಠಾಧ್ಯಕ್ಷರು
ಬಸವ ದಳ ಸಂಸ್ಥಾಪಕರು
ಮಹಿಳಾ ಜಗದ್ಗುರು ಪೀಠ ಸ್ಥಾಪಕರು
ನುಡಿದಂತೆ ನಡೆದು ತೋರಿದ ಮಹಾತ್ಮರು
ಎಲ್ಲರಿಗೂ ಲೇಸನ್ನೇ ಬಯಸಿದವರು
ಪರಧರ್ಮ ಸಹಿಷ್ಣುಗಳು, ಸ್ವಧರ್ಮ ಪಾಲಕರು
ಯಾರಿಗೂ ಅಂಜದ ಧಿಟ್ಟರು
ಬಸವಣ್ಣನ ಕರುಣೆಯ ಕಂದರು
ಪೂಜ್ಯ ಮಹಾಜಗದ್ಗುರು ಲಿಂಗಾನಂದರು

- ಶೋಭಾದೇವಿ ಪರಮಾದಿ, ಹುಬ್ಬಳ್ಳಿ

ರಂಗಾಪುರದ ಮಲ್ಲಪ್ಪಜ್ಜನ ಪರಾರಿ ಪ್ರಕರಣ

(ಸಾಧಕನ ಬದುಕಿಗೆ ಬಾಧಕವಾದ ಪ್ರೇಮಗಾಥೆ)

ಲಕ್ಷ್ಮೇಶ್ವರ : ದೇವರಂಥಾ ಮನುಷ್ಯ ಮಲ್ಲಪ್ಪಜ್ಜ. ಯಾರಿಗೂ ಕೇಡು ಬಯಸಿದವ ಅಲ್ಲ. ಮಂದಿ ಗೊಡವೀನ ಬ್ಯಾಡ ಅಂತ್ಹೇಳಿ ದೂರ ಉಳಿದಿದ್ದ. ನಮ್ಮೂರಿಗೆ ಹತ್ತು ವರ್ಷದ ಹಿಂದೆ ಬಂದ. ಹೊಸ ಚೇತನ ತಂದ, ಅವಾ ಜನರಿಂದ ದೂರ ಇದ್ರೂ, ಜನ ಅವನ ಹತ್ರ ಬಂದ್ರು. ಈ ಜಾಗಾ ಮಠಾ ಆದಂಗ ಆತು. ಇಷ್ಟೆಲ್ಲ ಮಾಡಿದ ''ಆದ್ರ ಆ ಹುಡ್ಗಿ ವಿಚಾರದಾಗ-ಹಂಗ್ಯಾಕ ನಡಕೊಂಡ ಅನ್ನೋದ ಮಾತ್ರ ತಿಳಿದ್ಹಂಗ ಆಗ್ಯೆತ್ರೀ....''

ಹಿಂದೊಮ್ಮೆ ಮರ ಏರಿ ಕುಳಿತು ನಾಡೆಲ್ಲ ಹೆಸರು ಮಾಡಿದ ಮಲ್ಲಪ್ಪಜ್ಜನ ಬಗ್ಗೆ ಬಿದರಳ್ಳಿ, ಮಾಗಳ, ವಿಠಲಾಪುರದ ಜನರು ಹೇಳುವ ಮಾತುಗಳಿವು.

''ಅಜ್ಜಾವರೂ ದುಡುಕಿ ನಿರ್ಧಾರ ಕೈಕೊಂಡಿದ್ದು ತಪ್ಪಾಗ್ಯೆತ್ರೀ'' ಎಂದೂ ಹೇಳುತ್ತಾರೆ. ಅಧ್ಯಾತ್ಮ ಚಿಂತನಶೀಲ ವ್ಯಕ್ತಿತ್ವದ ಮೃದುಮನದಲ್ಲಿ ಹುಡುಗಿ ಎಬ್ಬಿಸಿದ ಕೋಲಾಹಲಕ್ಕೆ ಹಿಡಿಶಾಪ ಹಾಕುತ್ತಾರೆ.

ಕಲಬುರ್ಗಿ ಕಡೆಯಿಂದ ಮುಂಡರಗಿ ಸಮೀಪದ ರಂಗಾಪುರಕ್ಕೆ ಬಂದು ನೆಲೆಸಿದ ಮಲ್ಲಪ್ಪಜ್ಜ, ಹತ್ತು ವರ್ಷಗಳ ಹಿಂದೆ ನದಿ ತೀರದ ಮರದಲ್ಲಿ ಕುಳಿತು ಆರು ತಿಂಗಳು ಹಠಯೋಗ ಸಾಧನೆ ಮಾಡಿ ಜನಮನ ಸೂರೆಗೊಂಡರು. ಅವರ ಮೌನ ಜನರಲ್ಲಿ ಮಾತು ಹುಟ್ಟಿಸಿತು. ಗೌರವ ಬೆಳೆಸಿತು. ಮಿತಭಾಷಿಯಾದ ಮಲ್ಲಪ್ಪಜ್ಜ ಅಲ್ಲಿ ಧಾರ್ಮಿಕ ವಾತಾವರಣ ಸೃಷ್ಟಿಸಿದರು.

ಭಕ್ತಿಯಿಂದ ಬಾಗಿದ ಜನ, ಅಲ್ಲೊಂದು ಆಶ್ರಮ ಕಟ್ಟಿದರು, ವನಸಿರಿಯ ಸೊಬಗು ಬೆಳೆಸಿದರು. ಹಠಯೋಗಿ ಯುವಕನನ್ನು '' ಮಲ್ಲಪ್ಪಜ್ಜ'' ಎಂದು ಗುರುತಿಸಿ, ಆತನ ತಮ್ಮಲ್ಲಿಗೆ ಬಂದದ್ದೆ ಪುಣ್ಯ ವಿಶೇಷವೆಂದು ಕೊಂಡಾಡಿದರು. ಜನ ಒಲಿದರೆ ಜಾತ್ರೆ -ಉತ್ಸವಗಳಿಗೇನು ಬರ? ಅವು ನಿರಂತರವಾಗಿ ನಡೆದವು. ಮಾಗಳ ಗ್ರಾಮದಿಂದ ಕಳೆದ ವರ್ಷ ಪರಾರಿಯಾಗಿದ್ದ ಯುವತಿಯೊಬ್ಬಳು ಮಲ್ಲಪ್ಪಜ್ಜನ ಆಶ್ರಯ ಪಡೆದು ಅಧ್ಯಾತ್ಮ ಯೋಗ ಅಧ್ಯಯನ ಮಾಡಿದ ವಿಷಯ ಇತ್ತೀಚೆಗೆ ಬಯಲಿಗೆ ಬಂದಾಗ, ಹಿಂದೆ ಅಜ್ಜನ ಅಡಿ ಹಿಡಿದ ಜನರೆ ಈಗ ಮುಡಿಗೆ ಕೈಹಾಕಿದರು. ಅವರ ನಡವಳಿಕೆ ಬಗ್ಗೆ ಆತಂಕ ವ್ಯಕ್ತಪಡಿಸಿದರು. ಆಶ್ರಮ ಬಿಟ್ಟು ಹೋಗುವ ವಾತಾವರಣ ನಿರ್ಮಾಣವಾಯಿತು. ಹಲವಾರು ಸಾಧನೆ ಮಾಡಿದ ಮಲ್ಲಪ್ಪಜ್ಜನನ್ನು ಆಗ ಜನ ಹೃತ್ಪೂರ್ವಕ ಗೌರವಿಸಿದ್ದರು. ಹುಡುಗಿಯ ಸಹವಾಸ ಮಾಡಿದ ನಂತರ ಅವರನ್ನು ಜನರು ಈಗ ಕೇವಲವಾಗಿ ಕಂಡರು. ಎಂಟು ತಿಂಗಳು ಕಾಲ ಆಶ್ರಮದಲ್ಲಿ ಆಶ್ರಯ ಪಡೆದಿದ್ದ ಯುವತಿಯೊಂದಿಗೆ ಅಜ್ಜ ತುಂಗಭದ್ರಾ ನದಿ ಮೂಲಕ ತೆಪ್ಪದಲ್ಲಿ ಹಂಪಿ ಸೇರಿದರೆಂದು ಹೇಳಲಾಗುತ್ತಿದೆ. ಅವರಿಬ್ಬರನ್ನು ಬಿಟ್ಟು ಬಂದಿರುವ ಮೀನುಗಾರರು ನದಿಯಲ್ಲಿ ಮೂರು ದಿನ ಪ್ರಯಾಣಿಸಿದ ವಿವರ ನೀಡುತ್ತಾರೆ.

ಭಕ್ತರು ನೀಡಿದ ಸರಕು-ಸಾಮಗ್ರಿ, ಹಣ ಎಲ್ಲವನ್ನು ಇಲ್ಲಿಯೇ ಬಿಟ್ಟು, ತನ್ನ ಆಸನವನ್ನೂ ನದಿಗೆ ಅರ್ಪಿಸಿ, ತಾನು ತಂದಿದ್ದ ಕಮಂಡಲದೊಂದಿಗೆ ಯುವತಿಯನ್ನು ಕರೆದುಕೊಂಡು ಆಶ್ರಮ ತ್ಯಜಿಸಿದ ಮಲ್ಲಪ್ಪಜ್ಜ, ಜನಮನದಲ್ಲಿ ಅಚ್ಚರಿ ಆಘಾತ ಎರಡನ್ನೂ ಉಂಟು ಮಾಡಿದ್ದಾರೆ. ಆದಾಗ್ಯೂ

ಪ್ರಾಮಾಣಿಕತೆಯ ಅಂಶ ಬಿಟ್ಟುಹೋಗಿದ್ದಾರೆ ಎಂದು ಅಲ್ಲಿಯ ಜನ ಆಡಿಕೊಳ್ಳುತ್ತಾರೆ.

ಆ ಗ್ರಾಮಗಳಲ್ಲಿ ಸಂಚರಿಸಿದ ಈ ವರದಿಗಾರನಿಗೆ ಮಲ್ಲಪ್ಪಜ್ಜನ ಬಗ್ಗೆ ಜನರಲ್ಲಿ ಈಗಲೂ ಗೌರವ ಭಾವನೆ ಇರುವುದು ಕಂಡುಬಂದಿತು. ಬೇರೆ ಯಾರಾದರೂ ಆಗಿದ್ದರೆ ಆಶ್ರಮದಲ್ಲಿನ ಹಣವನ್ನೆಲ್ಲ ಎತ್ತಿಕೊಂಡೇ ಪರಾರಿಯಾಗುತ್ತಿದ್ದರು. ಆದರೆ ಮಲ್ಲಪ್ಪಜ್ಜ ಹಾಗಲ್ಲ ಎಂದು ಅವರು ಅಭಿಮಾನದಿಂದ ಹೇಳುತ್ತಾರೆ. ಆದಾಗ್ಯೂ ಹುಡುಗಿಯ ಪ್ರಕರಣ ಮಲ್ಲಪ್ಪಜ್ಜನ ವ್ಯಕ್ತಿತ್ವಕ್ಕೆ ಮಸಿ ಬಳಿದಂತಾಗಿದೆ.ಎಂಬುದೂ ಸತ್ಯ. -ನಾಗರಾಜ ಕುಲಕರ್ಣಿ

(ಸಂಯುಕ್ತ ಕರ್ನಾಟಕ, ದಿನಾಂಕ : 5-8-2001)

ತೀರ್ಪುಗಾರರು ಯಾರು? ದೇವರೋ ಮಾನವರೋ ?

ಮಾತಾಜಿ

"ಮಲ್ಲಪ್ಪಜ್ಜನ ಪರಾರಿ ಪ್ರಕರಣ" ಎಂಬ ಶೀರ್ಷಿಕೆಯಡಿಯಲ್ಲಿ ದಿ. 5-8-2001ರ ಸಂಯುಕ್ತ ಕರ್ನಾಟಕದಲ್ಲಿ ಒಂದು ಪ್ರಸಂಗ ಮುದ್ರಣಗೊಂಡಿತ್ತು. ಇದರಲ್ಲಿ ಒಂದು ಉಪಶೀರ್ಷಿಕೆಯೂ ಇದ್ದಿತು, 'ಸಾಧಕನ ಬದುಕಿಗೆ ಬಾಧಕವಾದ ಪ್ರೇಮಗಾಥೆ" ಎಂದು. ಇದನ್ನು ಓದಿದಾಗ ಅನೇಕ ಹಳೆಯ ನೆನಪುಗಳು ಚಿತ್ತಭಿತ್ತಿಯ ಮೇಲೆ ಮೂಡಿದವು. ಪತ್ರಿಕೆಗಳವರು ಎಷ್ಟೋ ಪ್ರಕರಣಗಳನ್ನು ವಿಕೃತಗೊಳಿಸಿ ಪ್ರಚಾರ ಮಾಡಿ ಅನೇಕ ವ್ಯಕ್ತಿಗಳ ತೇಜೋವಧೆ ಮಾಡಿ ಬಿಡುವರು. ತೀರಾ ಇತ್ತೀಚಿನ ತಾಜಾ ಪ್ರಕರಣ ಎಂದರೆ ಬೈಲಹೊಂಗಲದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ನಡೆಯುತ್ತಿರುವಾಗಲೇ ದಿನಾ ಸಾವಿರಾರು ಜನ ಪ್ರವಚನ ಕೇಳುತ್ತಲೇ ಸಾಕ್ಷಿಯಾಗಿದ್ದರೂ ಒಂದೆರಡು ಪ್ರಮುಖ ದಿನಪತ್ರಿಕೆಗಳು ಪ್ರವಚನ ಸ್ಥಗಿತಗೊಂಡಿತು ಎಂದು ಸುದ್ದಿಯನ್ನು ಪ್ರಕಟಿಸಿದರು. ರಾಜಕೀಯ ಪ್ರಭಾವಶಾಲಿಗಳ ಒತ್ತಡಕ್ಕೆ ಈಡಾಗಿ ಸತ್ಯದ ತಲೆಯ ಮೇಲೆ ಹೊಡೆದಂತೆ ಸುಳ್ಳನ್ನು ವರದಿಗಾರರು ಕಳಿಸಿ, ಜಾಹೀರಾತುಗೊಳಿಸುವರು.

ಸಾಧಕ ಮಲ್ಲಪ್ಪಜ್ಜನ ಪ್ರಕರಣ ಪ್ರೇಮಗಾಥೆ ಎಂದು ಪತ್ರಿಕೆಯವರು ಶಿರ್ಷಿಕೆ ಕೊಟ್ಟು ಬರೆದರು. ಅದು ಪ್ರೇಮಗಾಥೆಯೋ, ತ್ಯಾಗಗೀತೆಯೋ ಎಂಬುದನ್ನು ಭವಿಷ್ಯವು ನಿರ್ಧರಿಸುವುದೇ ವಿನಾ ಹಳ್ಳಿಯ ಜನರಲ್ಲ, ಪತ್ರಿಕೆಗಳವರಲ್ಲ. ಓರ್ವ ವ್ಯಕ್ತಿಯ ಸಾಧನೆಯ ಮೇಲೆ ಅವರ ಬದುಕು ಯಶಸ್ಸಿನ ಗೀತೆಯೋ, ಅಪಯಶದ ಗಾಥೆಯೋ ಎಂಬುದು ನಿರ್ಧಾರವಾಗುತ್ತದೆ. ತರಂಗಿಣಿ ಪುಸ್ತಕದಲ್ಲಿ ನಾನು ಬರೆದಿದ್ದೇನೆ. ಒಂದು ನದಿ ಹರಿಯುತ್ತಾ ಸಾಗಿದಾಗ ಒಂದು ಊರಿನ ಮುಂದೆ ಪೂರ್ವದಿಂದ ಪಶ್ಚಿಮಕ್ಕೆ ಹರಿದಿರಬಹುದು. ನದಿಯ ಚಲನೆಯ ದಿಕ್ಕನ್ನು ಆ ಊರಿನ ಮುಂದೆ ಹರಿದಿರುವ ಹಿನ್ನೆಲೆಯಲ್ಲಿ ನಿರ್ಧರಿಸದೆ ಒಟ್ಟಾರೆ ಅದರ ಉಗಮ ಸ್ಥಾನದಿಂದ ಹಿಡಿದು ಅದರ ಸಮುದ್ರ ಸಂಗಮ ಸ್ಥಾನದವರೆಗೆ ಗಮನಿಸಿ, ನಿರ್ಧರಿಸಬೇಕು".

ನನ್ನ ಮೇಲೆ ಕೆಲವೊಂದು ಕಥೆಗಳು ಬಹಳ ಪ್ರಭಾವ ಬೀರಿದವು. ಅವುಗಳಲ್ಲಿ ಮುಖ್ಯವಾದವು. 1. ಧ್ರುವನ ಛಲವಂತಿಕೆಯ ತಪಸ್ಸು 2. ಪನ್ನಾದಾಸಿಯ ತ್ಯಾಗ, 3. ಬುದ್ಧನ ಗೃಹತ್ಯಾಗ (ಕುವೆಂಪುರವರ ಮಹಾರಾತ್ರಿ). ಪನ್ನಾದಾಸಿ ರಾಜಸ್ಥಾನದ ಸಂಸ್ಥಾನವೊಂದರ

ರಾಜರರಮನೆಯ ಓರ್ವ ಸೇವಕಿ. ರಾಜಕುಮಾರನ ಲಾಲನೆ ಪಾಲನೆಯಲ್ಲಿ ಆಸಕ್ತಳು. ಹೀಗಿರುವಾಗ ಓರ್ವ ದುಷ್ಟ ಸಂಬಂಧಿಯು ರಾಜ-ರಾಣಿಯರನ್ನು ಸೆರೆಮನೆಗೆ ದೂಡಿ, ಅವರ ಮಗ ರಾಜಕುಮಾರನನ್ನು ಕೊಲ್ಲಲು ಸಂಚು ಹೂಡಿದನು. ಈ ದುರಂತದ ಮುನ್ಸೂಚನೆ ಹೊಂದಿದ ಪನ್ನಾದಾಸಿ ಆ ರಾಜಕುಮಾರನನ್ನು ತನ್ನ ಬಡಮನೆಗೆ ಕೊಂಡೊಯ್ದಳು. ಬಹಳ ಹೃದಯ ಸ್ಪರ್ಶಿಯಾದ ಪ್ರಸಂಗ ಏನೆಂದರೆ ಅವಳಿಗೆ ರಾಜಕುವರನ ವಯಸ್ಸಿನ 5-6 ವರ್ಷಗಳ ಮಗನಿದ್ದ. ಆ ದುಷ್ಟ ಆಕ್ರಮಣಕಾರಿಯು ಅರಮನೆಯಲ್ಲಿ ರಾಜಪುತ್ರನನ್ನು ಹುಡುಕಿ ದೊರೆಯದಾಗ ಊರಲ್ಲೆಲ್ಲ ಹುಡುಕಿಸುವನು ಎಂದು ಊಹಿಸಿ ತನ್ನ ಮಗನಿಗೆ ರಾಜಕುಮಾರನ ಬಟ್ಟೆ ತೊಡಿಸಿ, ಮಲಗಿಸಿ, ರಾಜಕುಮಾರನಿಗೆ ತನ್ನ ಮಗನ ಹರಕುಬಟ್ಟೆ ತೊಡಿಸಿ ಓರ್ವ ನಿಷ್ಠಾವಂತ ಸೇವಕನನ್ನು ಕರೆದುಕೊಂಡು ರಾತ್ರೋರಾತ್ರಿ ಊರು ಬಿಟ್ಟಳು.

ಇಲ್ಲಿ ನಾವು ಗಮನಿಸಬೇಕಾದ ಸಂಗತಿ ಎಂದರೆ ಪನ್ನಾದಾಸಿಯ ಸ್ವಾಮಿನಿಷ್ಠೆ, ದೇಶಪ್ರೇಮ, ತ್ಯಾಗ, ಕರ್ತವ್ಯ ಪ್ರಜ್ಞೆಯನ್ನು. ದುಷ್ಟ ಆಕ್ರಮಣಕಾರಿಯು ತನ್ನ ಮಗನನ್ನು ಕೊಲ್ಲುವನೆಂಬ ಅರಿವಿದ್ದರೂ ತನ್ನ ಕರುಳಿನ ಕಂದನಿಗೆ ರಾಜಕುಮಾರನ ಬಟ್ಟೆ ತೊಡಿಸಿ ರಾಜಪುತ್ರನನ್ನು ರಕ್ಷಿಸಿದಳು. ಬೇರೆ ಸ್ವಾರ್ಥಿಗಳಾಗಿದ್ದಿದ್ದರೆ ತನ್ನ ಮಗನಿಗೇ ರಾಜಕುಮಾರನ ಪೋಷಾಕು ತೊಡಿಸಿ ಕರೆದೊಯ್ದು ಸಿಂಹಾಸನವನ್ನು ಆಕ್ರಮಿಸಿಕೊಳ್ಳುವ ಸಂಚು ಮಾಡಬಹುದಿತ್ತು. ದೇಶದ ಹಿತರಕ್ಷಣೆಗಾಗಿ ತನ್ನ ಕರುಳಿನ ಕುಡಿಯನ್ನು ಬಲಿಕೊಟ್ಟ ತ್ಯಾಗಮೂರ್ತಿ ಪನ್ನಾದಾಸಿ. ದುಷ್ಟ ಆಕ್ರಮಣಕಾರಿಯು ಅರಮನೆಯಲ್ಲಿ ರಾಜಕುಮಾರನನ್ನು ಹುಡುಕಿದ ; ಸಿಗದಾಗ ಪನ್ನಾದಾಸಿಯ ಮನೆಗೆ ನುಗ್ಗಿ, ಮಲಗಿ ನಿದ್ರಿಸುತ್ತಿದ್ದ ಮಗುವನ್ನೇ ರಾಜಕುಮಾರನೆಂದು ಭಾವಿಸಿ ಕೊಂದನು.

ಪನ್ನಾದಾಸಿ ರಾಜಕುಮಾರನನ್ನು ಕರೆದುಕೊಂಡು ಓರ್ವ ಸೇವಕನೊಡನೆ ಕಾಲು ನಡಿಗೆಯಲ್ಲಿ ಸಾಗಿ ರಾಜಕುಮಾರನ ಸೋದರಮಾವನ ಮನೆಯನ್ನು, ಅರ್ಥಾತ್ ಅಜ್ಜಿಯ ಮನೆ ತಲುಪಿ ನಡೆದ ಸಂಗತಿ ತಿಳಿಸಿದಳು. ಆ ಬಾಲಕನಿಗೆ ಶಸ್ತ್ರಾಸ್ತ್ರ ತರಬೇತಿ ನೀಡಲು ಮುತುವರ್ಜಿ ವಹಿಸಿದಳು. ಅವನು ಪ್ರೌಢನಾದಾಗ ಎಲ್ಲ ಸಂಗತಿ ವಿವರಿಸಿ ತನ್ನ ರಾಜ ಸಂಸ್ಥಾನವನ್ನು ಆಕ್ರಮಣಕಾರಿಯಿಂದ ರಕ್ಷಿಸಿ ಪಟ್ಟವೇರಲು ಸ್ಫೂರ್ತಿ ತುಂಬಿದಳು. ರಾಜಕುಮಾರನು ತನ್ನ ಸೋದರ ಮಾವನ ಸಹಾಯ ಪಡೆದು ಸೈನ್ಯದೊಡನೆ ಸಾಗಿ ಆ ದುಷ್ಟನನ್ನು ಸದೆ ಬಡಿದು, ರಾಜ್ಯವನ್ನು ಬಿಡಿಸಿಕೊಂಡನು. ರಾಜಕುಮಾರನು ಪಟ್ಟಾಭಿಷೇಕವಾಗುವಾಗ ಪನ್ನಾದಾಸಿಯಿಂದಲೇ ಕಿರೀಟ-ಧಾರಣೆಯಾಗಬೇಕೆಂದು ಬಯಸಿದನು. ಆಕೆಯೋ ದಾಸಿ, ವಿಧವೆ, ಶೂದ್ರಳು. ರಾಜನಿಗೆ ಕಿರೀಟವಿಡಲು ಸಾಂಪ್ರದಾಯಿಕವಾಗಿ ಅರ್ಹಳಲ್ಲ. ವಿನೀತಳಾಗಿ ನಿರಾಕರಿಸಿದಳು. ಆದರೆ ರಾಜಕುಮಾರ ಒಪ್ಪಲಿಲ್ಲ. ಅವಳ ತ್ಯಾಗದ ಮುಂದೆ ಬೇರೇನೂ ಸಾಟಿಯಾಗಲಾರದು ಎಂದು ಹಟ ತೊಟ್ಟು ಅವಳಿಂದಲೇ ಕಿರೀಟಧಾರಣೆ ಮಾಡಿಸಿಕೊಂಡ. ಪನ್ನಾದಾಸಿಯ ತ್ಯಾಗದ ಕಥೆ ರಾಜಸ್ಥಾನದಲ್ಲಿ ಜನಜನಿತ. ಮನೆಮನೆಗಳಲ್ಲೂ ಅವಳ ಹೆಸರನ್ನಿಡುವರು.

ಚಿಕ್ಕವಳಿದ್ದಾಗಲೇ ಈ ಕಥೆಯನ್ನು ನಮ್ಮ ತಾಯಿಯವರ ಬಾಯಿಂದ ಕೇಳಿ, ಈ ಬಗ್ಗೆ ಒಂದು ಪುಸ್ತಕ ಓದಿದ ನನ್ನ ಮನದಲ್ಲಿ ಪನ್ನಾದಾಸಿ ಅಚ್ಚಳಿಯದ ಮುದ್ರೆ ಒತ್ತಿದಳು. ಈ ಕಥೆಯನ್ನು ಇಂದೂ

ಬಹುಮುಖಿಯಾಗಿ ನಾನು ಬಳಸಿಕೊಳ್ಳುತ್ತೇನೆ. ದೇಶಭ್ರಷ್ಟನಾಗಿದ್ದ ರಾಜಕುಮಾರನನ್ನು ರಕ್ಷಿಸಿ ಪಟ್ಟಕ್ಕೇರಿಸಿ, ಆ ಸಂಸ್ಥಾನವನ್ನು ದುಷ್ಟನ ಕೈಯಿಂದ ಪಾರು ಮಾಡುವುದು ಪನ್ನಾಳ ಏಕಮೇವ ಗುರಿಯಾದಂತೆ ಗುರು ಬಸವಣ್ಣನವರನ್ನು ಜನರ ಹೃದಯ ಸಿಂಹಾಸನದ ಮೇಲೆ ಕೂರಿಸಿ, ಬಸವ ಪ್ರಣೀತ ಲಿಂಗಾಯತ ಧರ್ಮ ಸಾಮ್ರಾಜ್ಯವನ್ನು ಜಾತಿವಾದಿ, ಸಂಪ್ರದಾಯವಾದಿಗಳಿಂದ ಬಿಡುಗಡೆ ಮಾಡಲು ನಾವು-ನೀವೆಲ್ಲರೂ ಪನ್ನಾದಾಸಿಯಂತೆ ಆಗಬೇಕು ಎಂದು ಪ್ರವಚನಗಳಲ್ಲಿ ಹೇಳುತ್ತಿರುತ್ತೇನೆ.

ಲಿಂಗೈಕ್ಯ ಪೂಜ್ಯ ಅಪ್ಪಾಜಿಯವರ 71ನೆಯ ಜಯಂತಿಯನ್ನು ಇದೇ ದಿನಾಂಕ 22-8-2001ರಂದು ಆಚರಿಸಲಿದ್ದು ಅವರ ಮಹಾನ್ ತ್ಯಾಗದ ನೆನಪಾಯಿತು. ಈ ನೆನಪಿಗೆ ಸಾಧಕ ಮಲ್ಲಪ್ಪನ ಪ್ರಸಂಗವು ಪ್ರೇರಣೆ ನೀಡಿತು. ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಯ ಸಜ್ಜಲಗುಡ್ಡದಲ್ಲಿ ಪೂಜ್ಯ ಶರಣಮ್ಮ ಇದ್ದರು. ಸೊಲ್ಲಾಪುರದಲ್ಲಿ ರುದ್ರಮ್ಮನವರು ಇದ್ದರು. ಇವರ ಬಗ್ಗೆ ನಾನು ತಿಳಿದುದೂ ಪೂಜ್ಯ ಅಪ್ಪಾಜಿಯವರ ಸನ್ನಿಧಿಗೆ ಬಂದ ನಂತರವೆ. ನಾನು ಪೂಜ್ಯರ ಆಶ್ರಯಕ್ಕೆ ಬಂದ ನಂತರ ಈ ಶರಣೆಯರನ್ನು ಪರಿಚಯ ಮಾಡಿಸಿ ಆಶೀರ್ವಾದ ಪಡೆಯಲು ಪೂಜ್ಯ ಅಪ್ಪಾಜಿ ಕರೆದೊಯ್ದರು. ಮಹಿಳಾ ಸಾಧಕಿಯಾಗಿ ಯಾರಾದರೂ ಮಹಿಳಾ ಗುರುಗಳ ಆಶ್ರಯ ಪಡೆಯೋಣವೆಂದರೆ ಯಾರ ಬಗ್ಗೆಯೂ ಗೊತ್ತಿರಲಿಲ್ಲ. ಅಲ್ಲದೆ ಮೊದಲಿನಿಂದಲೂ ಶ್ರೀ ರಾಮಕೃಷ್ಣ ಪರಮಹಂಸ, ಶ್ರೀ ವಿವೇಕಾನಂದರ ಸಾಹಿತ್ಯ ಓದಿ ಓದಿ ವೇದಾಂತ ಮಾತ್ರ ತಿಳಿದಿದ್ದ ನನಗೆ 1965ರಲ್ಲಿ ಪೂಜ್ಯ ಅಪ್ಪಾಜಿಯವರ ಬಾಯಲ್ಲಿ ಅನುಭವ ಮಂಟಪದ ಬಗ್ಗೆ ಒಂದು ಉಪನ್ಯಾಸ ಕೇಳಿ ಅಗಾಧವೆನಿಸಿ, ವಚನ ಸಾಹಿತ್ಯದ ಮಹತ್ವ ತಿಳಿಯತೊಡಗಿತ್ತು. ಹೀಗಾಗಿ ತ್ಯಾಗ ಮಾಡುವ ಬಯಕೆ ಉತ್ಕಟವಾದಾಗ ಬೇರಾವ ದಾರಿ ತೋಚದೆ ಪೂಜ್ಯ ಗುರುಗಳ ಆಶ್ರಯಕ್ಕೆ ಹೋದೆ. ಗುರುಗಳು ಆಶ್ರಯ ನೀಡಿದರು. ಅವರಿಗೆ ತಮ್ಮ ಸಂಕಲ್ಪ ಸಿದ್ಧಿಸಿದ ಅಪೂರ್ವ ಆನಂದವಾಗಿತ್ತು. ಏಕೆಂದರೆ ವಿಶ್ವಗುರು ಬಸವಣ್ಣನವರಿಂದ ಪ್ರಾರಂಭವಾದ ಚಲನ ಶೀಲ ಜಂಗಮ ಧರ್ಮ (missionary religion) ಈಗ ಜಡಗಟ್ಟಿ ಹೋಗಿತ್ತು. ಶರಣ ಸಾಹಿತ್ಯ ಕುರಿತು ಸ್ವಲ್ಪ ಚಟುವಟಿಕೆಯನ್ನು ಧಾರವಾಡದ ಪೂಜ್ಯ ಕುಮಾರ ಸ್ವಾಮಿಗಳು ಆರಂಭಿಸಿದ್ದರಾದರೂ ಅವರು ಎಲ್ಲೆಡೆ ಸಂಚರಿಸಿ ಧರ್ಮಪ್ರಚಾರ ಮಾಡುವ ಆಕಾಂಕ್ಷೆ (zeal), ವ್ಯವಸ್ಥೆ (system) ಹೊಂದಿರಲಿಲ್ಲ. ತೋಂಟದ ಸಿದ್ಧಲಿಂಗೇಶ್ವರರು ಹರಿವ ನದಿಯಂತೆ ಸಂಚರಿಸಿ ಬಸವ ಧರ್ಮವನ್ನು ಪುನರುತ್ಥಾನ ಮಾಡಿದಂತೆ ತಾವೂ ಮಾಡಬೇಕೆಂಬ ಉತ್ಕಟ ಆಕಾಂಕ್ಷೆ ಹೊಂದಿ, ಶ್ರೀ ರಾಮಕೃಷ್ಣ ಪರಮಹಂಸರು ಸಾಧಕರ ಬರುವಿಗಾಗಿ ತಪಿಸಿದಂತೆ ಪೂಜ್ಯ ಅಪ್ಪಾಜಿ ಸಾಧಕರ ಬರುವಿಗಾಗಿ ಕಾಯುತ್ತಿದ್ದರು. ಉತ್ಕಟ ಹಂಬಲದಿಂದ ಬಂದ ನನ್ನ ಆಕಾಂಕ್ಷೆ ಗುರುತಿಸಿದರು. ವಚನ ಸಾಹಿತ್ಯ ವಲಯವನ್ನು ನಾನು ಪ್ರವೇಶಿಸಿದ್ದರೂ ಇನ್ನೂ ಅದರ ಆಳಕ್ಕೆ ಇಳಿದಿರಲಿಲ್ಲ. ಪೂರ್ವಾಶ್ರಮದ ನನ್ನ ಹೆಸರನ್ನು ಬದಲಿಸಿಕೊಳ್ಳಬೇಕೆಂಬ ಹಂಬಲ ವ್ಯಕ್ತಪಡಿಸಿದಾಗ ಯಾವ ಹೆಸರು ನಿಮಗೆ ಇಷ್ಟ ? ಎಂದು ಗುರುಗಳು ಕೇಳಿದಾಗ ನಾನು ಲಲ್ಲೇಶ್ವರಿ ಎಂದು ಹೇಳಿದೆ. ಆಗ ನನ್ನ ದೃಷ್ಟಿಯಲ್ಲಿ ಅಕ್ಕನಿಗಿಂತಲೂ ಕಾಶ್ಮೀರದ ಲಲ್ಲೇಶ್ವರಿ ಹೆಚ್ಚಿನವಳೆನಿಸಿದ್ದಳು. ನನ್ನ ಅಜ್ಞಾನಕ್ಕೆ ನಕ್ಕ ಗುರುಗಳು, " ನೀವು ಸಾಮಾನ್ಯ


ಮಹಿಳೆಯಲ್ಲ ; ಆದಿ ಶರಣರ ಆಶೋತ್ತರ ಪೂರೈಸಲು ಬಂದವರು ; ಅಕ್ಕನ ಅನುಗ್ರಹ ಪಡೆಯಬೇಕು" ಎಂದು ಮಾತೆ ಮಹಾದೇವಿ ಎಂದು ಹೆಸರಿಟ್ಟರು. ಸಾಮಾನ್ಯ ವ್ಯಕ್ತಿಯಂತೆಯೇ ಇದ್ದಿರಬಹುದಾದ ನನ್ನಲ್ಲಿನ ವಿಶೇಷತೆ ಗುರುತಿಸಿ, ಗ್ರಹಿಸಿ, ಪ್ರೇರಣೆ ನೀಡಿ, ಆಶೀರ್ವದಿಸಿದರು, ಹರಸಿದರು.

ಅಧ್ಯಾತ್ಮಿಕ ಮನೋವೃತ್ತಿಯ ಬಹುಪಾಲು ಶರಣರು, ಸದ್ಭಕ್ತರು ನನ್ನನ್ನು ಸ್ವಾಗತಿಸಿದರು. ಉತ್ಕಟ ಭಕ್ತಿಯಿಂದ ಕಂಡರು. ನಾನು ಬರೆಯುತ್ತಿದ್ದ ವಚನಗಳನ್ನು ಪೂಜ್ಯ ಗುರುಗಳು ಹಾಡಿಸಿ, ಓದಿ ವ್ಯಾಖ್ಯಾನ ಮಾಡುತ್ತಿದ್ದರೆ ಸಹೃದಯರು ಕೇಳಿ ಹರ್ಷಿಸುತ್ತಿದ್ದರು. ಅಧ್ಯಾತ್ಮಿಕ ಸಾಧನೆ ಮುಂದುವರಿಯುತ್ತ ಸಾಕಷ್ಟು ಸಾಹಿತ್ಯ ರಚನೆಯಾಗುತ್ತಿತ್ತು. ಯೋಗ ಮಾರ್ಗದಲ್ಲಿಯೂ ಕ್ಷಿಪ್ರಗತಿಯ ಪ್ರಗತಿ ಆಗುತ್ತಿತ್ತು.

ವೀರಶೈವ ಸಮಾಜ, ವೀರಶೈವ ಗುರುಗಳಲ್ಲಿ ಬೇರಾವ ಸಮಾಜದಲ್ಲಿಯೂ ಕಾಣಬರದ, ಕಂಡವರ ಆಸ್ತಿಗಳನ್ನು ದೌರ್ಜನ್ಯದಿಂದ ವಶಪಡಿಸಿಕೊಳ್ಳುವ ವಿಶೇಷ ಗುಣ ಬೆಳೆದಿದೆ. ಗೃಹಸ್ಥರನ್ನೂ ಮೀರಿಸುವಂತೆ ಆಸ್ತಿ-ಪಾಸ್ತಿಗಾಗಿ ಕೋರ್ಟಿಗೆ ಅಲೆದಾಡುವುದರಲ್ಲಿ ವೀರಶೈವ ಸ್ವಾಮಿಗಳನ್ನು ಮುಂಚೂಣಿಯಲ್ಲಿ ಕಾಣಬಹುದು. ಪೂಜ್ಯ ಗುರುಗಳು ಪರಿಶ್ರಮದಿಂದ, ತಮ್ಮ ಪ್ರವಚನ ಕಾಯಕದಿಂದ ತಂದ ಹಣದಿಂದ ಕಟ್ಟಿದ ಮಠವನ್ನು ವಶಪಡಿಸಿಕೊಳ್ಳುವ ದೌರ್ಜನ್ಯ ಕೆಲವರಿಂದ ಪ್ರಾರಂಭವಾಗಿ, ಅದಕ್ಕೆ ನೆಪವಾಗಿ ಮಹಿಳಾ ಸಾಧಕಿಗೆ ಆಶ್ರಯ ಕೊಡಬಾರದೆಂಬ ಸುದ್ದಿ ಎಬ್ಬಿಸತೊಡಗಿದರು. ಕೆಲವು ಕಾಲ ನಾನು ವಿದ್ಯಾಭ್ಯಾಸ ದೃಷ್ಟಿಯಿಂದ ಬೇರೆ ಊರಲ್ಲಿ ಇರಬಹುದಿತ್ತು. ಆದರೆ ದುರ್ಜನರ ಯೋಜನೆ ಪೂಜ್ಯ ಗುರುಗಳ ಜೀವಕ್ಕೆ ಧಕ್ಕೆ ತರುವ ಮಟ್ಟಕ್ಕೂ ಹೋಗಬಹುದೆಂಬ ಸೂಚನೆ ನಮಗೆಲ್ಲ ದೊರೆಯತೊಡಗಿತು. ಪೂಜ್ಯ ಅಪ್ಪಾಜಿ ಬಹಳ ಛಲವಾದಿ. ಮರಣವೇ ಮಹಾನವಮಿ. ನಾನು ಇಲ್ಲೆ ಇದ್ದು ಹೋರಾಡುತ್ತೇನೆ ಎಂದರು. ಆಗ ಊರಿನ ಓರ್ವ ಗಣ್ಯರು ಬಂದು ನಿಷ್ಠಾವಂತ ಶಿಷ್ಯರಾದ ನಾವು ಕೆಲವರನ್ನು ಕರೆದು, "ಸ್ವಾಮೀಜಿ ಬಹಳ ಛಲವಾದಿ. ಅವರಿಂದ ಈ ಸಮಾಜಕ್ಕೆ ಆಗಬೇಕಾದ ಕಾರ್ಯ ಬಹಳವಿದೆ. ಇಂಥಾ ಪ್ರತಿಭಾವಂತರನ್ನು ರಕ್ಷಿಸಿಕೊಳ್ಳುವುದು ಅತ್ಯಗತ್ಯ. ನೀವೆಲ್ಲ ಅವರನ್ನು ಒಪ್ಪಿಸಿ ಕೆಲವು ಕಾಲವಾದರೂ ದೂರ ಹೋಗಲು ಒತ್ತಾಯಿಸಿ" ಎಂದರು. ಅದರಂತೆಯೇ ಕೆಲವು ನಿಷ್ಠಾವಂತ ಶಿಷ್ಯರು ಪೂಜ್ಯ ಅಪ್ಪಾಜಿಯವರನ್ನು ಒತ್ತಾಯಿಸಿ ಋಷಿಕೇಶದ ಕಡೆಗೆ ಕರೆದೊಯ್ದೆವು. ಈ ನಿರ್ಗಮನಕ್ಕೆ ನನಗೆ ಆಶ್ರಯ ನೀಡಿದ್ದು ನೆಪವಾದರೂ, ಮುಖ್ಯ ಉದ್ದೇಶ ಆಸ್ತಿ ಕಬಳಿಕೆ, ದೌರ್ಜನ್ಯ. ಆದರೆ ಆ ಪ್ರಭಾವಶಾಲಿ ಜನರು ಪ್ರಚಾರ ಮಾಡಿದ್ದು ಏನೆಂದರೆ ಓರ್ವ ಹುಡುಗಿಯೊಡನೆ ಓಡಿ ಹೋದರು ಎಂದು. ಕುತಂತ್ರಿಗಳು ಅಂದು ಜನರ ದಿಕ್ಕು ತಪ್ಪಿಸಲು ಏನೇನೇ ಅಪಪ್ರಚಾರ ಮಾಡಿರಲಿ, ಇಂದು ಜೀವನದ ಸಿಂಹಾವಲೋಕನ ಮಾಡಿದಾಗ ಅಪಾರ ಸಂತೋಷ-ಸಮಾಧಾನ ಉಂಟಾಗುತ್ತದೆ. 1966ರಿಂದ ನಡೆದ ಘಟನೆ, ಸಾಧಿಸಿದ ಕಾರ್ಯಗಳ ಸಮೀಕ್ಷೆ ಮಾಡಿದಾಗ ಪೂಜ್ಯ ಅಪ್ಪಾಜಿಯವರದ್ದು ಎಂಥಾ ಸಾಧನೆ ಎನಿಸಿ ವಿಸ್ಮಯವಾಗುತ್ತದೆ.

ಪೂಜ್ಯ ಅಪ್ಪಾಜಿಯವರ ತ್ಯಾಗ ಪನ್ನಾಳ ನೆನಪನ್ನು ತರುತ್ತದೆ. ಅವರ ಅಂತರಾತ್ಮ ಎಂಥಾ

26ನೆಯ ಪುಟಕ್ಕೆ ....


ವೀರಶೈವ
ಲಿಂಗಾಯತ

23 ನೆಯ ಪುಟದಿಂದ

ಪ್ರಖರವಾಗಿ ಕೆಲಸ ಮಾಡಿತು ಎನಿಸಿ ಸೋಜಿಗವೆನಿಸುತ್ತದೆ. ಏಕೆಂದರೆ, ನನ್ನನ್ನು ಓರ್ವ ಸಾಮಾನ್ಯ ಹೆಣ್ಣು ಎಂದೇ ಭಾವಿಸಿದ್ದರೆ ಅವರಿಗೆ ಬಹುದೊಡ್ಡ ತ್ಯಾಗ ಮಾಡಬೇಕು ಎನ್ನಿಸುತ್ತಿರಲಿಲ್ಲವೇನೋ ? ಜನಾಪವಾದವನ್ನು ಹೊತ್ತುದಲ್ಲದೆ ದುರ್ಜನರ ದೌರ್ಜನ್ಯಕ್ಕೆ ಈಡಾಗಿ ಬೆಲೆ ಬಾಳುವ ಆಸ್ತಿಯನ್ನು ಕಳೆದುಕೊಳ್ಳಬೇಕಾಗಿ ಬಂದರೂ ಪೂಜ್ಯರು ವಿಚಲಿತರಾಗಿಲಿಲ್ಲ. "ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ. ಮಾತಾಜಿ ಜಂಗಮಮೂರ್ತಿ. ಇವರು ಆದಿ ಶರಣರ ಆಶೋತ್ತರ ಪೂರೈಸಲು ಬಂದವರು. ಇವರನ್ನು ರೂಪುಗೊಳಿಸಿದರೆ ಇಂಥ ಹತ್ತು ಮಠ ಕಟ್ಟಬಹುದು" ಎಂದೇ ಆ ದುರಾಗ್ರಹಿಗಳಿಗೆ ಉತ್ತರ ನೀಡಿದರು. ನನ್ನ ವ್ಯಕ್ತಿತ್ವದ ಬಗ್ಗೆ ಇನ್ನೂ ನನಗೇ ಹೆಚ್ಚಿನ ಅರಿವು ಮೂಡಿರಲಿಲ್ಲ. ಆದರೆ ಗುರುಗಳ ದಿವ್ಯದೃಷ್ಟಿ ಅದನ್ನು ಗುರುತಿಸಿದ್ದು ಜ್ಞಾಪಿಸಿಕೊಂಡರೆ ನನಗೆ ಆಶ್ಚರ್ಯ ಎನಿಸುತ್ತದೆ. ಪನ್ನಾ ರಾಜಕುಮಾರನನ್ನು ಉಳಿಸಲು ತನ್ನ ಕುಮಾರನನ್ನು ಬಲಿಗೊಟ್ಟಂತೆ ಪೂಜ್ಯ ಅಪ್ಪಾಜಿ ತಮ್ಮ ಕೀರ್ತಿಯನ್ನು, ಆಸ್ತಿಯನ್ನು ನಮ್ಮ ಸಂರಕ್ಷಣೆಗಾಗಿ ಬಲಿಕೊಟ್ಟರು. ದೇಶಭ್ರಷ್ಟ ರಾಜಕುಮಾರನಿಗೆ ಪಟ್ಟಗಟ್ಟುವ ಏಕೈಕ ಧ್ಯೇಯ ಹೊತ್ತು ಶ್ರಮಿಸಿದಂತೆ ಧರ್ಮಗುರು ಬಸವಣ್ಣನವರಿಗೆ ಪಟ್ಟಗಟ್ಟಿ, ಬಸವ ಸಾಮ್ರಾಜ್ಯವನ್ನು ಮುಕ್ತಗೊಳಿಸಲು ಹೋರಾಡಿದರು. ಅವರ ಬದುಕು, ಹೋರಾಟ ನಿಜಕ್ಕೂ ಧನ್ಯ. ಮೊದಲ ಹೆಜ್ಜೆ (ಮಠವೊಂದನ್ನು ಕಳೆದುಕೊಂಡುದು) ಸೋಲಿನಂತೆ ಕಂಡರೂ ಅಂದಿನ ಆ ದೃಢ ಹೆಜ್ಜೆಗಳು ಗೆಲುವಿನ ಉತ್ತುಂಗ ಶಿಖರಕ್ಕೆ ಏರಿಸಿದವು. ಪೂಜ್ಯ ಅಪ್ಪಾಜಿ ಧೈರ್ಯ ಮಾಡಿ ನಮಗೆ ಆಶ್ರಯ ಕೊಟ್ಟುದರಿಂದ ಮಹಿಳಾಗುರುಗಳ ಒಂದು ಪರಂಪರೆ ಬೆಳೆಯಲು ಅವಕಾಶ ದೊರೆಯಿತು. ಈಗ ಸ್ತ್ರೀ ಸಾಧಕಿಯರು ಯಾವುದೇ ಅಪವಾದವಿಲ್ಲದೆ, ಅಪಾಯವೂ ಇಲ್ಲದೆ ಆಶ್ರಯಪಡೆದು ಸುರಕ್ಷಿತವಾಗಿ ಇರಬಲ್ಲರು. ವೃಕ್ಷವೊಂದು ಬಿಸಿಲಲ್ಲಿ ನಿಂತು ಕೆಳಗಿದ್ದವರಿಗೆ ನೆರಳನ್ನು ಕೊಡುವಂತೆ ಪೂಜ್ಯ ಗುರುಗಳು ಅಪವಾದ ಹೊತ್ತು ನಮಗೆಲ್ಲ ಆಶ್ರಯ ನೀಡಿದರು. ಅವರ ಧೈರ್ಯ, ಸ್ಪಷ್ಟ ಚಿಂತನೆ, ದೂರದೃಷ್ಟಿ, ಗುಣಗ್ರಾಹಕ ಸಹೃದಯತೆ ಕುರಿತು ಚಿಂತಿಸಿದಾಗ ಅಪಾರ ಮೆಚ್ಚುಗೆ ಮೂಡುತ್ತದೆ. ಪೂಜ್ಯ ಅಪ್ಪಾಜಿಯವರ ಪ್ರವಚನ ಕೇಳಿದ ಜನ ಅವರ ಬಗ್ಗೆ ಎಂಥ ಭಕ್ತಿ, ಅಭಿಮಾನ, ಆತ್ಮೀಯತೆ ಹೊಂದಿದ್ದಾರೆಂಬುದನ್ನು ವಿವರಿಸಲು ಶಬ್ದ ಸಾಲವು. ಮಹಾರಾಷ್ಟ್ರದ ಗಡಹಿಂಗ್ಲಾಜದಲ್ಲಿ ಪೂಜ್ಯ ಗಂಗಾ ಮಾತಾಜಿಯವರ ಪ್ರವಚನ 60ದಿನ ನಡೆಯಿತು. ಆರಂಭದಿಂದಲೇ ಉತ್ತಮ ಸಂಖ್ಯೆಯಲ್ಲಿ ಜನ ಸೇರಿ, ತನು ಮನ ಧನಗಳಿಂದ ಸಹಕರಿಸಿದರು. ಪೂಜ್ಯ ಅಪ್ಪಾಜಿಯವರ ಪ್ರವಚನ ಮುಕ್ತಾಯಕ್ಕೆ ಒಂದು ದಿನ ಆಗ ನಾನು ಹೋಗಿದ್ದೆ. ಅದೇ ರೀತಿ ಈಗಲೂ ಹೋದೆ. ವೈಭವಪೂರ್ವಕವಾಗಿ ಬರಮಾಡಿಕೊಂಡರು. ಸಂಭ್ರಮದ ಮೆರವಣಿಗೆ ಮಾಡಿದಾಗ ನಾನು ಅಂತರಂಗದಲ್ಲಿ ಅಂದುಕೊಂಡೆ, "ಇದೆಲ್ಲ ಪೂಜ್ಯ ಗುರುಗಳಿಗೆ ಸಲ್ಲಬೇಕಾದುದು. ಪ್ರವಚನ ಮಾಡಿ ಭಕ್ತಿಯ ಬೀಜವನ್ನು ಬಿತ್ತಿ ಹೋದವರು ಗುರುಗಳು. ಅದರ ಪ್ರತಿಫಲ ನಮಗೆ ಸಿಗುತ್ತಿದೆ". ಪೂಜ್ಯ ಗಂಗಾ ಮಾತಾಜಿ ಉದ್ಗರಿಸಿದರು, "ತಾನು ಬಡವನಾಗಿದ್ದು ಪರಿಶ್ರಮದಿಂದ ಆಸ್ತಿ ಗಳಿಸಿ ಶ್ರೀಮಂತನಾದವನ ಹೊಟ್ಟೆಯಲ್ಲಿ ಹುಟ್ಟಿದವರು ಆಗರ್ಭ ಶ್ರೀಮಂತರು ಎನಿಸಿಕೊಂಬಂತೆ ಪೂಜ್ಯ ಅಪ್ಪಾಜಿಯವರು ಗಳಿಸಿದ ಸ್ಥಾವರ, ಜಂಗಮಾತ್ಮಕವಾದ ಆಸ್ತಿ ಕೀರ್ತಿ, ಭಕ್ತವೃಂದ ನಮಗೆ ಅನಾಯಾಸವಾಗಿ ಲಭಿಸುತ್ತದೆ."

ಪೂಜ್ಯ ಅಪ್ಪಾಜಿಯವರ ಮಹಾನ್ ತ್ಯಾಗಕ್ಕಾಗಿಯೇ ನನ್ನಲ್ಲಿ ಅಪಾರ ಕೃತಜ್ಞತೆ ತುಂಬಿ ತುಳುಕುವುದು. ನಂತರ ಬರಬರುತ್ತ ನನ್ನ ಪ್ರವಚನಗಳು ಹೆಚ್ಚು ಪ್ರಭಾವ ಬೀರುತ್ತ ಸಾಗಿದಾಗ ಕೆಲವು ಜನರು ಹಿತೈಷಿಗಳಂತೆ ನಟಿಸುತ್ತ, "ನೀವು ಸ್ವಾಮೀಜಿಯವರಿಗಿಂತ ಪ್ರತಿಭಾವಂತರು. ನೀವೇ ಏಕೆ ಸ್ವತಂತ್ರವಾಗಿ ಮಠ ಕಟ್ಟಬಾರದು ? ಅವರನ್ನು ಬಿಟ್ಟು ನೀವು ಸ್ವತಂತ್ರರಾಗಿರಿ. ನಾವೇ ದೊಡ್ಡ ಮಠ ಕಟ್ಟಿ ಕೊಡುತ್ತೇವೆ. ನೀವು ಹೆಚ್ಚು ಕೀರ್ತಿಶಾಲಿಗಳಾಗುವಿರಿ." ಎಂದು ಸಲಹೆ ಕೊಡತೊಡಗಿದರು. ನಾನು ಒಂದೇ ಮಾತು ಹೇಳಿದೆ, "ನಾನು loyalty ನಿಯತ್ತು, ನಿಷ್ಠೆ ಎಂಬ ಮೌಲ್ಯಕ್ಕೆ ಬಹಳ ಒತ್ತುಕೊಡುತ್ತೇನೆ. ದೇವರಲ್ಲಿ ನಿಷ್ಠೆ, ರಾಷ್ಟ್ರದಲ್ಲಿ ನಿಷ್ಠೆ, ಗುರುವಿನಲ್ಲಿ ನಿಷ್ಠೆ ಇವುಗಳಲ್ಲಿ ಎಂದೂ ಚ್ಯುತಿ ತಂದುಕೊಳ್ಳುವುದಿಲ್ಲ. ನಾನು ಅನಾಮಿಕಳಾಗಿದ್ದಾಗ ಗುರುತಿಸಿ ಬೆಳೆಸಿದ ಗುರುಗಳಿಗೆ ಬೆಳೆದು ನಿಂತ ಬಳಿಕ ನಾನು ದ್ರೋಹ ಮಾಡಲೆ ? ಇಂಥ ಆಸೆ-ಆಮಿಷ ಎಂದೂ ತೋರಿಸಬೇಡಿರಿ" ಎಂದು ಅಂಥ ಕುತಂತ್ರಿಗಳಿಗೆ ಸ್ಪಷ್ಟವಾಗಿ ಹೇಳಿದೆ. ಈಗ ನನ್ನ ಆ ನಿರ್ಧಾರದ ಬಗ್ಗೆ ಪುನರಾಲೋಚಿಸಿದರೆ ಹೆಮ್ಮೆ ಎನಿಸುತ್ತದೆ. ಏಕೆಂದರೆ ಅಂಥ ಯಾವ ಆಸೆ- ಆಮಿಷ-ಬೆದರಿಕೆ-ಅಪವಾದಗಳೂ ನನ್ನನ್ನು ಧೈರ್ಯಗೆಡಿಸಲಿಲ್ಲ, ಪಥ ಬಿಡಿಸಲಿಲ್ಲ ಎಂದು. ಕೆಲವು ಕುತಂತ್ರಿಗಳ ಪ್ರಚೋದನೆ ಆಮಿಷಗಳಿಗೆ ಬಲಿಯಾದ ಎಷ್ಟೋ ಸಾಧಕ-ಸಾಧಕಿಯರು ಸಂಸ್ಥೆಯನ್ನು ತೊರೆದು ಹೋಗಿ ಎಷ್ಟು ಬೆಳೆಯಬೇಕಾಗಿತ್ತೋ ಅಷ್ಟು ಬೆಳೆಯದೆ ಮೂಲೆಗುಂಪಾಗಿರುವುದನ್ನು ನೋಡಿದಾಗ ಅವರ ಅದೃಷ್ಟ ಇಷ್ಟೇ ಇತ್ತೇನೋ ಎನ್ನಿಸಿ ವಿಷಾದವಾಗುತ್ತದೆ. ಸಂಸ್ಥೆ ಒಂದು ವೃಕ್ಷದಂತೆ, ವ್ಯಕ್ತಿ ಒಂದು ಬಳ್ಳಿಯಂತೆ. ವೃಕ್ಷದ ಆಸರೆ ತೊರೆದ ಬಳ್ಳಿಯನ್ನು ತುಳಿಯಲು ಹಲವರು ಹೊಂಚುಹಾಕುತ್ತಿರುತ್ತಾರೆ. ಸಂಸ್ಥೆ ಎಂಬ ವೃಕ್ಷ ಬಲವಾಗಿ ಬೆಳೆದಾಗ ಹೊಸ ಹೊಸ ಬಳ್ಳಿಗಳು ಆವರಿಸಿಕೊಳ್ಳುವಂತೆ ಹೊಸ ಹೊಸ ತ್ಯಾಗಿಗಳು, ಸಾಧಕರು ಬರುವರು. ಆದರೆ ಸಂಸ್ಥೆ ಎಂಬ ವೃಕ್ಷದ ಆಸರೆ ಕಳೆದುಕೊಂಡ ಸಾಧಕರನ್ನು ಮುಖ್ಯವಾಗಿ ಮಹಿಳಾ ಸಾಧಕಿಯರನ್ನು ಬೆಳೆಯದಂತೆ ಮಾಡಲು ಅನೇಕರು ಕಾಯುತ್ತಿರುತ್ತಾರೆ. ಈ ಸಂಚನ್ನು ಅರ್ಥಮಾಡಿಕೊಳ್ಳಲಾರದೆ ಅನೇಕರು ಎಡಹುತ್ತಾರೆ.

ಅದರಲ್ಲಿಯೂ ಲಿಂಗಾಯತ ಸಮಾಜದ ಗಣ್ಯರು ಬಹಳ ಅದ್ಭುತ ಜನರು. ಸಮಾಜದ ಬಂಧುಗಳು, ಶ್ರೀ ಸಾಮಾನ್ಯರು ಗುಣಗ್ರಾಹಿಗಳು ಮತ್ತು ಸಹೃದಯರು. ಆದರೆ ವಿವಿಧ ಕ್ಷೇತ್ರಗಳಲ್ಲಿನ ರಾಜಕೀಯ, ಸಾಮಾಜಿಕ, ಧಾರ್ಮಿಕ ನೇತಾರರು ಯಾರೂ ಮುಂದೆ ಬರದಂತೆ ಅಡ್ಡತಡೆಗಳನ್ನು ಹಾಕುವುದರಲ್ಲಿ ನಿಸ್ಸೀಮರು. ಮತ್ಸರ ಎನ್ನುವುದಂತೂ ರಕ್ತಗತ ಗುಣವಾಗಿ ಬಿಟ್ಟಿದೆ. ಇಂದೇನಾದರೂ ಬಸವ ಧರ್ಮ ಮತ್ತು ಇದರ ಮೌಲ್ಯಗಳು ಉಳಿಯಬೇಕಾದರೆ ಶ್ರೀಸಾಮಾನ್ಯರ ತ್ಯಾಗ, ಛಲ, ಪರಿಶ್ರಮಗಳಿಂದ ಮಾತ್ರ ಸಾಧ್ಯ. ಅಂತೂ ಅಂಥ ಕೆಲವು ನಿಷ್ಠಾವಂತ ಶರಣರನ್ನಾದರೂ ಪೂಜ್ಯ ಅಪ್ಪಾಜಿ ತಮ್ಮ ಪ್ರವಚನಗಳ ಮೂಲಕ ನಾಡಿನಾದ್ಯಂತ ಬಿತ್ತಿ ಬೆಳೆಸಿ ಹೋಗಿರುವುದು ಅಭಿನಂದನಾರ್ಹ ಮತ್ತು ಸಮಾಧಾನ ತರುವ ಸಂಗತಿ.

ಇನ್ನು ಮಲ್ಲಪ್ಪನ ಕಥೆಗಷ್ಟು ಬಂದು ಸಮಾರೋಪ ಮಾಡೋಣ. ಮಲ್ಲಪ್ಪ ಸಾಧಕ ಜೀವಿಯಾಗ ಬಯಸಿ ಬಂದ, ಹಠಯೋಗ ಸಾಧನೆ ಮಾಡಿದ, ಮಠ ಕಟ್ಟಿದ ಸುತ್ತಣ ಪರಿಸರದಲ್ಲಿ ಪರಿವರ್ತನೆ ತಂದ. ಯಾರೋ ಓರ್ವ ಸಾಧಕಿ ಬಂದಳು. ಆಕೆ ನಿಷ್ಠಾವಂತ ಸಾಧಕಿಯಾಗಿದ್ದರೂ

ಆಗಿದ್ದಿರಬಹುದು. ಸ್ತ್ರೀ-ಪುರುಷರ ನಡುವೆ ಒಂದೇ ಬಗೆಯ ಸಂಬಂಧ ಏಕೆ ಊಹಿಸಬೇಕು ? ಒಂದೇ ಮನೆಯಲ್ಲಿ ತಾಯಿ-ಮಕ್ಕಳು, ತಂದೆ-ಮಗಳು, ಅಣ್ಣ-ತಂಗಿ, ಅಕ್ಕ-ತಮ್ಮ ಇರುವುದಿಲ್ಲವೆ ? ಆಗಲೆ ಪತ್ರಿಕೆಯ ವರದಿಗಾರ ಬರೆದಂತೆ "ಅಡಿ ಹಿಡಿದವರು ಮುಡಿ ಹಿಡಿದರು" ಅಂದರೆ ಕಿರುಕುಳ ಶುರು ಮಾಡಿದರು. ಒಂದು ವೇಳೆ ಪವಿತ್ರ ಸಂಬಂಧ ತೊರೆದು ಸ್ತ್ರೀ-ಪುರುಷ ಸಂಬಂಧ ಬೆಳೆಸಿಕೊಂಡರು ಎಂದೇ ಭಾವಿಸೋಣ, ಶ್ರೀ ಸಿದ್ಧರಾಮೇಶ್ವರರು ಹೇಳುವಂತೆ,

ಭಕ್ತನ ಮನ ಹೆಣ್ಣಿನೊಳಗಾದರೆ, ವಿವಾಹವಾಗಿ ಕೂಡುವುದು
ಭಕ್ತನ ಮನ ಹೊನ್ನಿನೊಳಗಾದಡೆ ಕೊಂಡು ಆಲಯವ ಮಾಡುವುದು
ಭಕ್ತನ ಮನ ಮಣ್ಣಿನೊಳಗಾದಡೆ ಬಳಲಿ ದೊರಕಿಸುವುದು ನೋಡಾ, ಯೋಗಿನಾಥ.


ಸಾಧಕ ಜೀವಿಯಾಗಿ ಬಂದ ಯಾರೇ ಇರಲಿ, ಅವರಲ್ಲಿ ಕೆಲವು ಸದ್ಗುಣಗಳಿರುತ್ತವೆ. ಅಂತರಾತ್ಮಕ್ಕೆ ಭಯಪಡುತ್ತಾರೆ, ಪಾಪ-ಪುಣ್ಯಗಳಿಗೆ ಹೆದರುತ್ತಾರೆ. ಆಗ ಮಲ್ಲಪ್ಪನು ಆ ಹುಡುಗಿಯನ್ನು ವಿವಾಹವಾಗಿ ಆ ಆಶ್ರಮವನ್ನು ನಡೆಸಿಕೊಂಡು ಹೋಗಲು ಬಿಟ್ಟಿದ್ದರೆ ಧಾರ್ಮಿಕ ವಾತಾವರಣ ಮುಂದುವರಿಯುತ್ತಿತ್ತು. ಆಶ್ರಮವೂ ಅನಾಥವಾಗದೆ ಬೆಳೆಯುತ್ತಿತ್ತು. ಹಿಂದೆ ಅನೇಕ ಋಷಿ, ಮುನಿಗಳು, ಗೃಹಸ್ಥರಾಗಿದ್ದೇ ಧರ್ಮೋತ್ಥಾನ ಮಾಡಲಿಲ್ಲವೆ ? ಶ್ರೀ ವಿದ್ಯಾಭೂಷಣ ಸ್ವಾಮಿಗಳೆಂಬ ಓರ್ವರು ಧರ್ಮಪೀಠದ ಅಧಿಕಾರ ತೊರೆದು ವಿವಾಹವಾದರು. ಅವರದ್ದು ಪ್ರಾಮಾಣಿಕ ಚಿಂತನೆ, ಅಂತರಾತ್ಮನಿಗೆ ಅಂಜುವ ನಡೆ. ಇವೆಲ್ಲವನ್ನೂ ಮೀರಿ ಕಾಷಾಯ ಲಾಂಛನ ಧರಿಸಿಯೂ ಮಾಡಬಾರದ ಕುಕರ್ಮಗಳನ್ನು ದಿನ ನಿತ್ಯ ಮಾಡುವ ಎಷ್ಟೋ ಸಂಪ್ರದಾಯ ಮಠಾಧಿಕಾರಿಗಳನ್ನು ಕೆಲವರು ಅಡ್ಡ ಉದ್ದ ಬಿದ್ದು ಗೌರವಿಸುವರಲ್ಲ. ಅಲ್ಲೇಕೆ ಅದು ಸಹ್ಯ ?

ನಮ್ಮ ಪರಿಚಯದ ಓರ್ವ ಸನ್ಯಾಸಿ ಕಾವಿ ತೊಟ್ಟು ಭಾರಿ ಭಾಷಣ ಮಾಡುತ್ತ ಅತ್ತ ಗುಟ್ಟಾಗಿ ಸಂಸಾರವನ್ನು ಸಾಕುತ್ತಿದ್ದಾನೆ ಎಂದು ತಿಳಿಯಿತು. ಆಗ ನಾನು ಕರೆದು ಹೇಳಿದೆ. "ನೋಡು ಮಾನವ ಸಹಜ ದೌರ್ಬಲ್ಯದಿಂದ ನೀನು ವರ್ತಿಸಿದ್ದೀಯೆ ಆದರಿಷ್ಟೆ ಕಾವಿ ಲಾಂಛನಕ್ಕೆ ತಕ್ಕುದಲ್ಲದ ನಡತೆ ಬೇಡ. ಈಗ ನಿನ್ನ ಹೆಂಡತಿ ಮಕ್ಕಳನ್ನು ಕೈಬಿಟ್ಟು ಬೀದಿಪಾಲು ಮಾಡು ಎಂಬ ಅಮಾನವೀಯ ಸಲಹೆ ನಾನು ಕೊಡುವುದಿಲ್ಲ. ಕಾವಿಯನ್ನು ತ್ಯಜಿಸಿ ಬಿಳಿ ಬಟ್ಟೆ ತೊಡು, ಕಾವಿಗೆ ಸಿಗುವ ಗೌರವ ಬೇಕು ಎಂಬ ಆಸೆ ಇಟ್ಟುಕೊಂಡು ಅದಕ್ಕೆ ತಕ್ಕುದಲ್ಲದ ನಡತೆ ಏಕೆ ಹೊಂದಿರುವೆ ? ನಾವೇ ಕಾಯಕ ಕೊಡುತ್ತೇವೆ ; ಸಂಬಳಕೊಡುತ್ತೇವೆ. ಕಾಯಕ ಜೀವಿಯಾಗು ಅವರನ್ನೂ ಸಾಕು. ನೀನು ಇದೇ ತರಹ ಕದ್ದು ಮುಚ್ಚಿ ವ್ಯವಹರಿಸಿದರೆ ನಾಳೆ ನಿನ್ನ ಮಕ್ಕಳು ಸಮಾಜದಲ್ಲಿ ಅವಮಾನಿತರಾಗಿ ಬದುಕಬೇಕಾಗುತ್ತದೆ." ಆತ ಕಾವಿ ತೆಗೆಯಲು ನಿರಾಕರಿಸಿದ. "ಹಾಗಿದ್ದರೆ ಹೀಗೆ ಆತ್ಮವಂಚನೆ ಮಾಡಿಕೊಂಡು ಲಾಂಛನ ದ್ರೋಹ ಮಾಡುವುದಾದರೆ ನೀನು ನಮ್ಮ ಸಂಸ್ಥೆಯ ಸಂಪರ್ಕ ಇಟ್ಟುಕೊಳ್ಳಬೇಡ" ಎಂದು ಕಟುವಾಗಿ ಹೇಳಿದೆ. "ಕುದುರೆ ಮುಗ್ಗರಿಸಿದರೆ ಕಾಲು ಕಡಿಯಬಾರದು, ಅದು ಮೇಲೆದ್ದು ಚೇತರಿಸಿಕೊಂಡು ಮುನ್ನಡೆಯಲು ಅವಕಾಶ ಮಾಡಿಕೊಡಬೇಕು" ಎಂಬ ಘನವಾದ ಒಂದು ಮಾತನ್ನು ಜಗನ್ಮಾತಾ ಅಕ್ಕಮಹಾದೇವಿ ಹೇಳುವಳು. ಪ್ರತಿಯೊಂದು ಸಮಸ್ಯೆಯನ್ನು ಸಹಜವಾಗಿ, ಶಾಂತಿ-ಸಹನೆಯಿಂದ ಚಿಂತಿಸಿ ಸೂಕ್ತವಾದ ಪರಿಹಾರವನ್ನು

ಕಂಡುಕೊಂಡರೆ ಉತ್ತಮ ಸಮಾಜವನ್ನು ನಿರ್ಮಾಣಮಾಡಬಹುದು. ವ್ಯಕ್ತಿಯು ಮಾಡುವುದು ಪಾಪವೋ ಪುಣ್ಯವೋ ಎಂಬುದನ್ನು ನಿರ್ಧರಿಸುವುದು ಬಹು ಜಟಿಲವಾದುದು.

ಹಾವಿನ ಡೊಂಕು ಹುತ್ತಕ್ಕೆ ಸಸಿನ
ನದಿಯ ಡೊಂಕು ಸಮುದ್ರಕ್ಕೆ ಸಸಿನ
ಲಿಂಗದೇವನ ಶರಣರ ಡೊಂಕು ಲಿಂಗಕ್ಕೆ ಸಸಿನ. -ಬ.ವ.ದೀ 146

ಧರ್ಮಪಿತರು ಹೇಳುವಂತೆ ಶರಣರ ಕೆಲವು ಡೊಂಕುಗಳು ಅಂದರೆ ವಿಲಕ್ಷಣ ನಡೆಗಳು ಲೋಕಕ್ಕೆ ಡೊಂಕಾಗಿ ಕಂಡರೂ ದೇವರಿಗೆ ಪ್ರಿಯವಾಗುವ ಸಾಧ್ಯತೆ ಇದೆ. ಆದರೆ ಜನರು ತಾವೇ ನ್ಯಾಯ ನಿರ್ಣಯ ಮಾಡುವವರು ಎಂಬಂತೆ ಎಲ್ಲರ ಬಗ್ಗೆ ತೀರ್ಪು ಕೊಡುವ ಆತುರ ತೋರುವರು. ಇದರಿಂದ ಎಷ್ಟೋ ವ್ಯಕ್ತಿತ್ವಗಳು, ಪ್ರತಿಭೆಗಳು ವಿಕಾಸಗೊಳ್ಳುವ ಮೊದಲೇ ಬಾಡಿ ಹೋಗುವ ಸಂಭವವಿರುವುದು. ನಿಜವಾದ ತೀರ್ಪುಗಾರ ದೇವರು, ಅವನ ದೃಷ್ಟಿಯಲ್ಲಿ ತಪ್ಪಿತಸ್ಥರಾಗಿ ಲೋಕದ ದೃಷ್ಟಿಯಲ್ಲಿ ಜನರು ಎಷ್ಟೇ ಸಂಭಾವಿತರಂತೆ ಕಂಡರೂ ಆ ಜನರು ಜೀವನದಲ್ಲಿ ಪ್ರಗತಿಯನ್ನು ಸಾಧಿಸರು. ಜನರು ತಾವೇ ತೀರ್ಪುಗಾರರಾಗಿ ದುಡುಕಿನ ಕ್ರಮಗಳಿಗೆ ಮುಂದಾಗುವ ಸೂಚನೆ ಕಂಡೋ ಏನೋ ಮಲ್ಲಪ್ಪ ಪರಾರಿಯಾಗಿರಬೇಕು. ತಮ್ಮ ಆಂತರಿಕ ಸಾತ್ವಿಕತೆ, ವೈರಾಗ್ಯ ಕಾಪಾಡಿಕೊಂಡು ಅವರು ಮುಂದೆ ದೊಡ್ಡ ವ್ಯಕ್ತಿಗಳಾದರೂ ಆಗಬಹುದು. ಇಲ್ಲವೇ ವೈರಾಗ್ಯ ಜೀವನ ನಡೆಸಲು ಅಸಮರ್ಥರಾಗಿ ಗೃಹಸ್ಥ ಜೀವನ ಅನುಸರಿಸಬಹುದು. ಇಲ್ಲವೇ ದುಡುಕುವ ಅಮಾನವೀಯ ಜನರ ಕ್ರೌರ್ಯಕ್ಕೆ ಬಲಿಯಾಗಿ ಸತ್ತರೂ ಸಾಯಬಹುದು. ಅದು ಭವಿಷ್ಯದಲ್ಲಿ ಹುದುಗಿರುವ ಸತ್ಯ. ಆದರೆ ಎಲ್ಲರ ಪಾಪ-ಪುಣ್ಯಗಳನ್ನು ತಾವೇ ಅಳೆಯುವ, ನ್ಯಾಯ ನಿರ್ಣಯಿಸುವ ಹಕ್ಕುಳ್ಳವರಂತೆ ವರ್ತಿಸುವ ಆಕ್ರಮಣಕಾರಿ ಭಕ್ತರ ಆಲೋಚನಾ ಸರಣಿ ಬದಲಾಗಬೇಕಾದುದು ಅವಶ್ಯವಿದೆ. ◆



☹ ಸಮಸ್ಯೆ ? - ಸಮಾಧಾನ ! ☺

✉ ಈರಣ್ಣ ಕಂಠಿ, ಹುಬ್ಬಳ್ಳಿ. - ಮುಸಲೀಮರಲ್ಲಿ ಬರುವ ಶಿಯಾ - ಸುನ್ನಿ, ಕ್ರೈಸ್ತರಲ್ಲಿ ಬರುವ ಕ್ಯಾಥೋಲಿಕ್- ಪ್ರಾಟಸ್ಟೆಂಟ್ ಅವರಿಗೆ ವೀರಶೈವವಾದಿ ಅರ್ಥಾತ್ ಪಂಚಾಚಾರ್ಯವಾದಿ ಮತ್ತು ಲಿಂಗಾಯತ ಅರ್ಥಾತ್ ಬಸವವಾದಿಗಳನ್ನು ಹೋಲಿಸಬಹುದೆ ?

★ ಖಂಡಿತಾ ಇಲ್ಲ. ಶಿಯಾ - ಸುನ್ನಿಗಳಲ್ಲಿ ಅಲ್ಲಹ ಏಕಮೇವ ದೇವರು, ಮೊಹಮ್ಮದರು ಕಡೆಯ ಪ್ರವಾದಿ, ಕುರಾನ್ ಧರ್ಮಗ್ರಂಥ ಎಂಬಲ್ಲಿ ವ್ಯತ್ಯಾಸವಿಲ್ಲ. ಬೇರೆ ವಿಚಾರಗಳಲ್ಲಿ ವ್ಯತ್ಯಾಸವಿದೆ. ಅದೇ ರೀತಿ ಕ್ರೈಸ್ತರಲ್ಲಿ ಏಸುವು ಧರ್ಮಗುರು, ಬೈಬಲ್ ಧರ್ಮಗ್ರಂಥ ಎಂಬಲ್ಲಿ ಭಿನ್ನಾಭಿಪ್ರಾಯವಿಲ್ಲ. ಬೇರೆ ಕೆಲವೊಂದು ವಿಚಾರಗಳಲ್ಲಿ ವ್ಯತ್ಯಾಸವಿದೆ. ಆದ್ದರಿಂದ ವೀರಶೈವ - ಪಂಚಾಚಾರ್ಯವಾದ ಯಹೂದಿ ಧರ್ಮದಂತಾದರೆ, ಲಿಂಗಾಯತ ಅರ್ಥಾತ್ ಬಸವವಾದ ಕ್ರೈಸ್ತ - ಇಸ್ಲಾಂಗಳಂತೆ. ಬಸವವಾದಿಗಳಲ್ಲಿ ಕೂಡಲ ಸಂಗಮ ಗುಂಪು ಮತ್ತು ಲಿಂಗದೇವ ಗುಂಪು ಎಂಬುವವರನ್ನು ಬೇಕಾದರೆ ಕ್ಯಾಥೋಲಿಕ್ ಮತ್ತು ಪ್ರಾಟಸ್ಟೆಂಟರಿಗೆ ಹೋಲಿಸಬಹುದು. ಬಸವವಾದಿಗಳಾಗಿದ್ದರೂ ಕೆಲವು ವಿರಕ್ತರು ಸ್ಥಾವರ ಸೂಚಕವಾದ ಕೂಡಲ ಸಂಗಮ ಪದವನ್ನು ಹಿಡಿದುಕೊಂಡು ಸೆಣಸುತ್ತಿರುವರು. ಆದರೆ ಇವರು(ಕೆಲವರಿಗೆ ಒಳಗೆ ಮನಸ್ಸಿನಲ್ಲಿ ಇಲ್ಲದಿದ್ದರೂ) ಹೊರಗಡೆ ಧರ್ಮಪಿತ ಬಸವಣ್ಣನವರನ್ನು ಗುರುವೆಂದು, ಮಂತ್ರಪುರುಷರೆಂದು ಒಪ್ಪಿ ಶ್ರೀಗುರು ಬಸವ ಲಿಂಗಾಯನಮಃ ಮಂತ್ರವನ್ನು ಕಷ್ಟಪಟ್ಟು ಬಳಸುವರು. ಅದೇ ನಮಗೂ ಅವರಿಗೂ ಸಾಮಾನ್ಯ ಅಂಶ (Common point).

✉ ಮಹಾದೇವ ಪ್ರಸಾದ, ಬಸವೇಶ್ವರ ನಗರ, ಬೆಂಗಳೂರು. -ಕೆಲವು ವೀರಶೈವ ಮುಖಂಡರಿಗೆ ನಿಮ್ಮ ಮೇಲೆ ತೀವ್ರ ಆಕ್ರೋಶ. ಅನೇಕ ಸ್ವಾಮಿಗಳ ಬಗ್ಗೆ ಅವರು ಸೌಜನ್ಯಯುತ ಸಂಬಂಧ ಹೊಂದಿದ್ದಾರೆ. ಹೀಗೇಕೆ ?

★ ಕೆಲವು ಗಣ್ಯರೆನ್ನಿಸಿಕೊಂಡವರು ಮಾಡುವ ಧಾರ್ಮಿಕ, ಸಾಮಾಜಿಕ, ರಾಜಕೀಯ ಅಕ್ರಮಗಳಿಗೆ ತುಟಪಿಟಕ್ ಎನ್ನದೆ ಮೌನವಾಗಿದ್ದುಕೊಂಡು ಬೆಂಬಲ ನೀಡುವ ಗುರುಗಳು ಅವರಿಗೆ ಪ್ರಿಯ. ನಮಗೆ ಸ್ವತಂತ್ರ ವಿಚಾರ ಶಕ್ತಿ ಇದೆ. ಅಸತ್ಯವನ್ನು ಪ್ರತಿಭಟಿಸುವ, ಅನ್ಯಾಯವನ್ನು ಎತ್ತಿತೋರುವ ಆತ್ಮಬಲ ಇದೆ. ಆ ಮುಖಂಡರು ಎಳೆದುಕೊಂಡು ಹೋದಲ್ಲೆಲ್ಲ ಮೂಕ ಕುರಿಗಳಂತೆ ಹಿಂಬಾಲಿಸುವ ಪುಕ್ಕಲುತನವಿಲ್ಲ; ಅದಕ್ಕಾಗಿ ನಮ್ಮ ಬಗ್ಗೆ ಆಕ್ರೋಶ ಇರಬಹುದೇನೋ?!

✉ ದೇವಿಕಾ ಶರಣಪ್ಪ, ಬಸವೇಶ್ವರ ನಗರ, ಬೆಂಗಳೂರು. - ಒಂದು ದಿನ ಒಬ್ಬರು ಪರಿಚಿತರು ಬಂದರು. ಇದ್ದಕಿದ್ದ ಹಾಗೆ ಒಂದು ಪ್ರಶ್ನೆ ಕೇಳಿದರು. ಮಾತಾಜಿಯವರ ಶಿಷ್ಯರು ಮಾತಾಜಿಯವರನ್ನು ಮೂಲೆಗುಂಪು ಮಾಡಿದ್ದಾರಂತಲ್ಲ; ಅವರ ಮಾತಿಗೆ ಬೆಲೆ ಕೊಡುವುದಿಲ್ಲವಂತೆ ಎಂಬ ವದಂತಿ ಹಬ್ಬಿದೆ ಎಂದರು. ಇದೇಕೆ ಹೀಗೆ ?

★ ಆ ದೃಷ್ಟಿಯಲ್ಲಿ ನಾವು ಬಹಳ ಅದೃಷ್ಟವಂತರು. ಏಕೆಂದರೆ, ನಮ್ಮಲ್ಲಿ ಗುರು - ಶಿಷ್ಯ ಸಂಬಂಧ ತಾಯಿ ಮತ್ತು ಮಕ್ಕಳಂತೆ. ಅಲ್ಲದೆ ತ್ಯಾಗದ ಮೇಲೆ ನಿಂತುದು. ನಮ್ಮ ಶಿಷ್ಯರು ಮಾತ್ರವಲ್ಲ ಭಕ್ತರು ಸಹ ತ್ಯಾಗಿಗಳೇ ವಿನಾ ಸ್ವಾರ್ಥಿಗಳಲ್ಲ. ಕೆಲವು ಮಠಗಳಲ್ಲಿ ಭಕ್ತರು ಹೆಗ್ಗಣಗಳಂತೆ

ಸೇರಿಕೊಂಡು ಕೊರೆಯುತ್ತಾರೆ. ನಮ್ಮಲ್ಲಿಯ ಭಕ್ತರು ತನು - ಮನ - ಧನ ಮಾತ್ರವಲ್ಲ ಸಮಯ - ಅಭಿಮಾನಗಳನ್ನು ಧರ್ಮಕ್ಕಾಗಿ ಮೀಸಲಿಡುತ್ತಾರೆ. ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬರಲಿ ಎಂದು ನಾವು ತಟಸ್ಥವಾಗಿ ಉಳಿಯ ಬಯಸಿದರೂ ನಮ್ಮ ಶಿಷ್ಯರು ಅನುಮತಿ ಪಡೆಯದೆ ಮುಂದೆ ಹೆಜ್ಜೆ ಇಡುವುದಿಲ್ಲ. ''ಲಿಂಗದೇವ''ಪದವನ್ನು ಅನುಷ್ಠಾನಕ್ಕೆ ತರುವಾಗ ನೋಡಿರಿ ನಮ್ಮ ಶಿಷ್ಯರು ಎಷ್ಟೂ ಕದಲಲಿಲ್ಲ. ಮಾವಿನ ಕಾಯಿಯ ಬುಟ್ಟಿಯಲ್ಲಿ ಒಂದೆರಡು ಎಕ್ಕಿಯ ಕಾಯಿಯಂಥವು ಇದ್ದರೂ ಅವು ತಾವಾಗಿಯೇ ಬುಟ್ಟಿಯಿಂದ ಹೊರಬಿದ್ದವು.

✉ ವೀರಣ್ಣ ಕೊರ್ಲ್ಹಳ್ಳಿ, ಕೊಪ್ಪಳ. -ವಿರಕ್ತ ಮಠಾಧೀಶರಾಗಿ ಬಸವ ತತ್ತ್ವಕ್ಕೆ ಬದ್ಧರಾಗಬೇಕಾದುದು ಅವರ ಕರ್ತವ್ಯವಾಗಿದ್ದರೂ ಅದನ್ನು ಮಾಡದೆ, ಈಗ ಕೂಡಲ ಸಂಗಮದೇವ ವಚನಾಂಕಿತದ ಬದಲಿಗೆ ಲಿಂಗದೇವ ವಚನಾಂಕಿತವನ್ನು ಬಸವಣ್ಣನವರ ವಚನಗಳಲ್ಲಿ ನೀವು ಹಾಕಿರುವುದರಿಂದ ಲಿಂಗಾಯತ ಧರ್ಮಕ್ಕೆ ಅಪಚಾರವಾಗುತ್ತಿದೆ ಎಂದು ಕೆಲವು ಮಠಾಧೀಶರು ತೀರಾ ಕಳವಳ ಪಡುತ್ತಿದ್ದಾರಲ್ಲ ! ಅಂತೂ ಈಗಲಾದರೂ ಅವರಲ್ಲಿ ಕರ್ತವ್ಯ ಪ್ರಜ್ಞೆ ಮೂಡಿದಂತೆ ತೋರುತ್ತಿದೆಯಲ್ಲವೆ ?

★ ಜಾಗೃತಗೊಂಡಿರುವುದು ಕರ್ತವ್ಯ ಪ್ರಜ್ಞೆಯಲ್ಲ ನಮ್ಮ ಮೇಲೆ ಮಾತ್ಸರ್ಯ ಪ್ರಜ್ಞೆ ಅಷ್ಟೆ. ಬಹುಪಾಲು ವಿರಕ್ತಮಠಾಧೀಶರು (ಬೆರಳ ಮೇಲೆಣಿಸುವಷ್ಟನ್ನು ಬಿಟ್ಟರೆ) ಬಸವ ಪಥಕ್ಕೆ ಸಲ್ಲದ ಆಚರಣೆಗಳನ್ನೇ ರೂಢಿಸಿಕೊಂಡಿರುವುದು; ಭಕ್ತರಲ್ಲಿ ಬೆಳೆಸುತ್ತಿರುವುದು. ಬಹುದೇವತೋಪಾಸನೆ, ರುದ್ರಾಭಿಷೇಕ, ತಾಯಿತ, ಕರಿದಾರ ಕಟ್ಟುವುದು ಜಂಗಮ ಜಾತಿವಾದ, ಜಾತಿ ಪರಂಪರೆಯ ಮೇಲೆ ಮಠಾಧೀಶರ ಆಯ್ಕೆ - ಹೀಗೆ ಒಂದೇ ಎರಡೇ ? ಹಲವಾರು ತಪ್ಪು ಆಚರಣೆಗಳು ಅವರಲ್ಲಿವೆ. ಇವರಿಗೆ ಸ್ಥಾವರ ಸೂಚಕವಾದ ಕೂಡಲ ಸಂಗಮದೇವದ ಬದಲು ಜಂಗಮ(ಚೈತನ್ಯ) ಲಿಂಗ ಸೂಚಕವಾದ ಲಿಂಗದೇವ ಬರುವುದು ಖಂಡಿತಾ ಇಷ್ಟವಿಲ್ಲದ ಸಂಗತಿ. 'ಲಿಂಗದೇವ' ಏಕದೇವೋಪಾಸನೆ ತರಲು ಅನುಕೂಲವಾದ ಬುಲ್‌ಡೋಜರ್ ನಂತಹ ಪದ. ಇನ್ನು ಕೆಲವರು ವಿರಕ್ತರು, ಶರಣ ಮಾರ್ಗಿಗಳು ಸ್ಥಾವರೋಪಾಸನೆ ಬಿಟ್ಟು ಏಕದೇವೋಪಾಸನೆಗೆ ಬದ್ಧರಾಗಿ ಇಷ್ಟಲಿಂಗ ನಿಷ್ಠರಾಗಿದ್ದಾರೆ. ಅವರು ನಡೆಯುತ್ತಿರುವ ಮಾರ್ಗಕ್ಕೆ ಹೊಂದುವ ಶ್ರೇಷ್ಠ ಪದ ಲಿಂಗದೇವ. ಇದು ಬಸವ ಧರ್ಮವನ್ನು ಉಜ್ವಲಗೊಳಿಸುವ ಪದ ಎಂದು ತಿಳಿದಿದ್ದರೂ, ಇಂಥ ಅದ್ಭುತ ಐತಿಹಾಸಿಕ ಕೊಡುಗೆ ನೀಡಿದ ನನ್ನ ಪ್ರಯತ್ನವನ್ನು ಮೆಚ್ಚಿಕೊಳ್ಳಲಾರದ ಮಾತ್ಸರ್ಯದಿಂದ ಕೂಡಲಸಂಗಮ ದೇವ ಪದಕ್ಕೆ ಜೋತು ಬೀಳುತ್ತ ನಮ್ಮನ್ನು ಟೀಕಿಸುತ್ತಾರೆ ಅಷ್ಟೆ.

✉ ಹೆಸರು ಬೇಡ, ಊರು ಬೇಡ, ಪ್ರಶ್ನೆಗೆ ಉತ್ತರಬೇಕು. - ನಮ್ಮ ಪ್ರದೇಶದಲ್ಲಿ ಓರ್ವ ಸ್ವಾಮಿಗಳಿದ್ದಾರೆ. ಅವರ ಕೆಟ್ಟತನ ಜಗಜ್ಜಾಹೀರಾಗಿದೆ. ಅವರ ಪಾದ ತೊಳೆದು ನೀರು ಕುಡಿಯುವುದಿರಲಿ ಪಾದ ಮುಟ್ಟಿದರೆ, ಮುಖ ನೋಡಿದರೆ ಪಾಪ ಬರುತ್ತದೆ ಎಂದು ಜನಸಾಮಾನ್ಯರು ಆಡಿಕೊಳ್ಳುತ್ತಾರೆ. ಇಷ್ಟಿದ್ದು ಕೆಲವು ಶ್ರೀಮಂತರು ಅವರನ್ನು ಓಲೈಸಿ, ಪಾದಪೂಜೆ ಮಾಡಿ ಗೌರವಿಸುತ್ತಾರೆ. ಹೇಗೇಕೆ ?

★ ಹಿಂದುಗಳಲ್ಲಿ ಶನಿಯನ್ನು ಪೂಜಿಸುವ ಕೆಟ್ಟ ಸಂಪ್ರದಾಯವಿದೆ. ಶನಿಯು ಸಾತ್ವಿಕನು,

ಕರುಣಾಳುವು ಎಂದಲ್ಲ. ಆ ದುಷ್ಟನು ಸಂಪ್ರೀತನಾಗಿರಲಿ ತಮ್ಮ ಮೇಲೆ ಅವನ ಶನಿದೃಷ್ಟಿ ಬೀಳದಿರಲಿ ಎಂಬ ಭಯದಿಂದ, ಭ್ರಾಂತಿಯಿಂದ ಪೂಜಿಸುವಂತೆ ; ಶ್ರೀಮಂತರಿಗೆ ಸಾಮಾನ್ಯವಾಗಿ ಆತ್ಮಬಲ ಕಡಿಮೆ ; ಆ ಸ್ವಾಮಿಗಳ ಶನಿದೃಷ್ಟಿ ಬೀಳದಿರಲಿ ಎಂದು ಭಯ ಪ್ರೇರಿತರಾಗಿ ಗೌರವಿಸುವಂತೆ ಕಾಣುತ್ತದೆ.

✉ ಸಿದ್ದಲಿಂಗಪ್ಪ, ನಿವೃತ್ತ ವಿಜ್ಞಾನಿ. ಎನ್.ಎ.ಎಲ್., ಬೆಂಗಳೂರು. - ನಾವು ಸಂಪ್ರದಾಯಿಕ ಮನೆತನದಲ್ಲಿ ಹುಟ್ಟಿ, ಧಾರ್ಮಿಕ ವಾತಾವರಣದಲ್ಲಿ ಬೆಳೆದವರು. ಶ್ರಾವಣ ಮಾಸದಲ್ಲಿ ಸೋಮವಾರ ಜಂಗಮರನ್ನು ಕರೆಸಿ ಲಿಂಗಾರ್ಚನೆ ಮಾಡಿಸಿ, ಜಂಗಮ ಪೂಜೆ ಮಾಡಿ ಪಾದೋದಕ ಪ್ರಸಾದ ಪಡೆಯುತ್ತಿದ್ದೆವು. ಬೇರೆ ಬೇರೆ ಮನೆಗಳ ಪೂಜೆ ಮುಗಿಸಿ ಅವರು ಬರುವವರೆಗೂ ಮನೆಯಲ್ಲಿ ಯಾರೂ ಏನೂ ತಿನ್ನುತ್ತಿರಲಿಲ್ಲ. ಈಗ ಈ ಪದ್ಧತಿಯು ನಶಿಸಿ ಹೋಗುತ್ತಿದೆ. ಇದಕ್ಕೆ ಏನಾದರೂ ಪರ್ಯಾಯ ವ್ಯವಸ್ಥೆ ಅಗತ್ಯವಲ್ಲವೆ ?

★ ಈ ಬಗ್ಗೆ ನಾವು ಸುದೀರ್ಘ ಚಿಂತನೆ ಮಾಡಿ ಪರ್ಯಾಯ ವ್ಯವಸ್ಥೆ ಕಂಡುಕೊಂಡಿದ್ದೇವೆ. ಹಿಂದಿನ ಕಾಲದಲ್ಲಿ ಜೀವನ ಬಹಳ ಸೀಮಿತವಾಗಿರುತ್ತಿತ್ತು. ಈಗ ಸೋಮವಾರ ರಜಾ ದಿನ ಇರುವುದಿಲ್ಲ. ಬೆಳಿಗ್ಗೆ ಎದ್ದ ತಕ್ಷಣ ಶಾಲೆ, ಕಾಲೇಜು, ಕಛೇರಿಗೆ ಓಡುವವರ ತರಾತುರಿ ಬೇರೆ. ಹೀಗಿರುವಾಗ ಜಂಗಮರನ್ನು ಕರೆದು ಕಾಯುತ್ತ ಕುಳಿತು ಕೊಳ್ಳುವುದು ಸಾಧ್ಯವಿಲ್ಲ. ಎರಡನೆಯದಾಗಿ ವಿಸ್ತಾರಗೊಳ್ಳುತ್ತಿರುವ ನಗರಗಳಲ್ಲಿ ಜಂಗಮರು ಸಿಗುವುದೂ ಕಷ್ಟಕರ ; ಅವರೂ ಉದ್ಯೋಗಿಗಳಾಗಿರುತ್ತಾರೆ. ಮೂರನೆಯದಾಗಿ ತಾವು ಜಾತಿಯಿಂದ ಲಿಂಗಾಯತರಲ್ಲೇ ಶ್ರೇಷ್ಠರೆಂದು ಹೇಳಿಕೊಳ್ಳುತ್ತಿದ್ದ ಅವರು ತಾವೀಗ ಪ್ರತ್ಯೇಕ ಜಾತಿ ಗುಂಪು ಎಂದು ಹೇಳಿ ಕೊಳ್ಳುತ್ತ ಪರಿಶಿಷ್ಟ ಜಾತಿಯವರಾಗಲು ಸುಳ್ಳು ಪ್ರಮಾಣಪತ್ರ ಮಂಡಿಸುತ್ತಿದ್ದಾರೆ. ಆದ್ದರಿಂದ ಈಗ ನಾವು ಕಂಡುಕೊಂಡ ಪರ್ಯಾಯ ವ್ಯವಸ್ಥೆ ಎಂದರೆ, ಧರ್ಮಗುರು ಬಸವಣ್ಣನವರನ್ನೇ ಮನೆಯಲ್ಲಿನ ಹಿರಿಯರು ಮಹಾಜಂಗಮ ಎಂದು ಪರಿಗಣಿಸಿ ಬಸವೇಶ್ವರ ಭಾವ ಚಿತ್ರ ಇಟ್ಟು ಪೂಜಾವ್ರತ ಮಾಡಿ, ಸಾಮೂಹಿಕ ಇಷ್ಟಲಿಂಗ ಪೂಜೆ ಮಾಡಿ ತಾವೇ ಕರುಣೋದಕವನ್ನು ಸಿದ್ಧಪಡಿಸಿ ಮನೆಮಂದಿಗೆಲ್ಲ ವಿತರಿಸಿ ಧಾರ್ಮಿಕ ನಂಬಿಕೆ ಪೂರೈಸಬೇಕು. ಅನುಕೂಲವಾದ ದಿನ ದಾಸೋಹ ಏರ್ಪಡಿಸಿ ಗುರುಗಳು ಸಿಕ್ಕರೆ ಕರೆದು ಪೂಜೆ ಮಾಡಿಸಿ ಇನ್ನಿತರ ಶರಣ ಬಂಧುಗಳಿಗೆ ಪ್ರಸಾದ ದಾಸೋಹ ಮಾಡಿಸಬೇಕು ; ಇಲ್ಲವೇ ಬಸವ ಮಂಟಪ, ಮಠ ಮುಂತಾದಲ್ಲಿ ದಾಸೋಹ ಮಾಡಿಸಬೇಕು.

✉ ಮಂಜುನಾಥ ನಂದಿಹಳ್ಳಿ, ಹಿರಿಯೂರು. -ಕಲ್ಯಾಣ ಕಿರಣದ ಇತ್ತೀಚಿನ ಸಂಚಿಕೆಗಳಲ್ಲಿ ಚಿತ್ರದುರ್ಗದ ಬೃಹನ್ಮಠದ ಶ್ರೀಗಳನ್ನು ಕುರಿತು ನೇರವಾಗಿ ವಿಮರ್ಶಿಸಲಾಗುತ್ತಿದೆ. ಮೊದಲೆಲ್ಲ ಅಪ್ರತ್ಯಕ್ಷವಾಗಿ ಬರೆಯಲಾಗುತ್ತಿತ್ತು ಎಂದು ನನ್ನ ಮಿತ್ರರು ಪ್ರಶ್ನಿಸುತ್ತಾರೆ. ಏಕೆ ಹೀಗೆ ?

★ ಮೊದಲು ಅವರು ಬೇರೆ ಬಾಡಿಗೆ ಭಂಟರನ್ನು ಮುಂದೆ ಬಿಟ್ಟು ತಾವು ಅಹಿಂಸಾ ವ್ರತ ಸ್ವೀಕರಿಸಿದ ಬೆಕ್ಕಿನಂತೆ ಉದಾತ್ತ ಮಾತುಗಳನ್ನು ಆಡುತ್ತಿದ್ದರು. ಉದಾಹರಣೆಗೆ ಚಿತ್ರದುರ್ಗದ ಬಸವ ಮಂಟಪವನ್ನು ಗುಂಡಾಗಿರಿ ಮಾಡಿ ಕಬ್ಜಾ ಮಾಡಿಕೊಳ್ಳುವಾಗ ಮಲ್ಲಣ್ಣ, ತಾರಾನಾಥ, ವೀರಭದ್ರಪ್ಪ

ಅವರನ್ನು, ದಾವಣಗೆರೆ ಪ್ರವಚನ ಕೆಡಿಸುವಾಗ ಹಿರೇಮಠ ದ್ವಯರು, ಕೊಟ್ರಬಸಪ್ಪ ಎಂಬುವವರನ್ನು, ಮೈಸೂರು ಪ್ರವಚನ ಕೆಡಿಸುವಾಗ ಓರ್ವ ಹುಚ್ಚು ಮುದುಕನನ್ನು ಮತ್ತು ಷಡಕ್ಷರಿ ಎಂಬ ಅನಾಮಿಕನನ್ನು ಮುಂದೆ ಬಿಟ್ಟು, ಹಿಂದೆ ಸೂತ್ರಧಾರರಾಗಿ ಇದ್ದರು. ಆದರೆ ಧಾರವಾಡ - ಹುಬ್ಬಳ್ಳಿಯ ನವನಗರದ ಪ್ರವಚನದ ಕಾಲದಲ್ಲಿ ತಾವೇ ಬಂದು ನೇರವಾಗಿ ಶಸ್ತ್ರಧಾರಣೆ ಮಾಡಿ ನಿಂತು, ಪತ್ರಿಕಾ ಹೇಳಿಕೆ ಕೊಟ್ಟರು. ಹೀಗಾಗಿ ನಮಗೂ ಸ್ಪಷ್ಟವಾಗಿ ಬಾಣ ಬಿಡುವವರು ಯಾರು ಎಂಬುದು ತಿಳಿದು, ನೇರವಾಗಿಯೇ ಅವರ ಬಗ್ಗೆ ಬರೆಯಲು ಸಾಧ್ಯವಾಯಿತು. ನಾವು ಖಚಿತವಾದಲ್ಲದೆ ಯಾರ ಬಗ್ಗೆಯೂ ಆರೋಪ ಮಾಡಲು ಇಷ್ಟಪಡುವುದಿಲ್ಲ.

✉ ರಾಜಶೇಖರಪ್ಪ ಪಾಟೀಲ್, ಧಾರವಾಡ

★ ನಾವು ಗಣಲಿಂಗ ಸ್ಪರ್ಶನ ಮಾಡಿ ಏಕದೇವೋಪಾಸನೆ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದೇವೆ. ಕೆಲವೊಮ್ಮೆ ಮಿತ್ರರ, ಮೇಲಧಿಕಾರಿಗಳ ದಾಕ್ಷಿಣ್ಯಕ್ಕೆ ಒಳಗಾಗಿ ಯಾವ್ಯಾವ ಗುಡಿಗಳಿಗೋ ಹೋಗಬೇಕಾಗುತ್ತದೆ. ಅಲ್ಲಿ ನಮಸ್ಕಾರ ಮಾಡಬಾರದಲ್ಲವೆ ? ನಮ್ಮ ಶರಣರ ಗದ್ದುಗೆಗಳಿಗೆ ಹೋಗಬೇಕಾಗುತ್ತದೆ, ಆಗ ನಮಸ್ಕಾರ ಮಾಡಬೇಕೇ ಬೇಡವೆ ?

★ ಬಹಳ ಉಪಯುಕ್ತ ಪ್ರಶ್ನೆ ಕೇಳಿದ್ದೀರಿ. ದಾಕ್ಷಿಣ್ಯಕ್ಕೆ ಒಳಗಾಗಿ ತಾತ್ತ್ವಿಕ ಚ್ಯುತಿ ತಂದುಕೊಳ್ಳಬಾರದು. ನೀವು ಮೊದಲೇ, ಕರೆದೊಯ್ಯುತ್ತಿರುವವರಿಗೆ ನಮ್ಮ ಧರ್ಮದ ಏಕದೇವೋಪಾಸನೆಯ ಮರ್ಮ ಕುರಿತು ಹೇಳಲು ಶುರು ಮಾಡಿರಬೇಕು. ಅನ್ಯ ದೇವತೆಗಳ ಗುಡಿಗಳಿಗೆ ಹೋದಾಗ ನೀವು ಹೊರಗೇ ಉಳಿಯಬೇಕು. ನೀವು ಏಕದೇವೋಪಾಸನೆಯ ದೀಕ್ಷೆಯನ್ನು ತೆಗೆದುಕೊಂಡಿರುವುದಾಗಿ ಅವರಿಗೆ ಸ್ಪಷ್ಟವಾಗಿ ಹೇಳಿರಬೇಕು. ಲಿಂಗಾಯತ ಧರ್ಮದ ಏಕದೇವೋಪಾಸನೆ ತ್ರಿತತ್ತ್ವಗಳಿಗೆ ಸಂಬಂಧಿಸಿದೆ. ಗುರು - ಲಿಂಗ - ಜಂಗಮ ಆ ಮೂರು ತತ್ತ್ವಗಳು. ನಿರಾಕಾರನಾದ ಲಿಂಗದೇವನು ಸಾಕಾರ ರೂಪವನ್ನು ಗುರು ಬಸವ ರೂಪದಲ್ಲಿ ತಾಳ್ದು ಬಂದು ನಮಗೆ ಧಾರ್ಮಿಕ ಪಥವನ್ನು ಹಾಕಿಕೊಟ್ಟನು. ಅದೇ ದೇವನು ಇಷ್ಟಲಿಂಗವಾಗಿ ಅಂಗದ ಮೇಲೆ ನೆಲೆಸಿ ಪೂಜೆಗೊಳ್ಳುತ್ತಿದ್ದಾನೆ, ಜಂಗಮವಾಗಿ ಸಂಚರಿಸಿ ಭಕ್ತರಿಗೆ ಮಾರ್ಗ ದರ್ಶನ ಮಾಡುತ್ತಾನೆ ಎಂಬುದೇ ತ್ರಿತತ್ತ್ವದ ಸಾರ. ಆದ್ದರಿಂದ ಗುರು ಬಸವಣ್ಣ - ಕರದ ಇಷ್ಟಲಿಂಗ - ಜಂಗಮ ಮೂರ್ತಿಗಳಾದ ಗುರುಗಳು, ಮಹಾತ್ಮರಿಗೆ ನಮಸ್ಕರಿಸ ಬೇಕು. ಲಿಂಗೈಕ್ಯರಾದಾಗ ಜಂಗಮ ಮೂರ್ತಿಗಳು ಜಂಗಮ ಜ್ಯೋತಿಗಳಾಗುತ್ತಾರೆ. ಅವರಿಗೆ ಗದ್ದುಗೆ ಎಂಬ ಸ್ಥಾವರ ರಚಿಸಲಾಗುತ್ತದೆ. ಅಂಗದ ಮೇಲೆ ಲಿಂಗಧಾರಣೆ ಮಾಡಿಕೊಂಡು ಲಿಂಗಾಂಗಯೋಗಿಗಳಾಗಿ ನಂತರ ಲಿಂಗೈಕರಾದವರ ಗದ್ದುಗೆಗೆ ನಮಸ್ಕಾರ ಮಾಡುವಾಗ ಎದೆಯ ಮೇಲಿನ ಇಷ್ಟಲಿಂಗವನ್ನು (ಅಂದರೆ ಕರಡಿಗೆಯನ್ನು) ಹೊರಗೆ ತೆಗೆದು ಎರಡೂ ಅಂಗೈ ಮಧ್ಯ ಇಟ್ಟು ಅದನ್ನು ಎತ್ತಿ ನಮಸ್ಕರಿಸಬೇಕು. ಗದ್ದುಗೆಗೆ ಗೌರವ ಕೊಟ್ಟಂತೆ ಆಗುತ್ತದೆ, ಇಷ್ಟಲಿಂಗಕ್ಕೆ ನಮಿಸಿದಂತೆ ಆಗುತ್ತದೆ. ಅದನ್ನೇ ಮುಪ್ಪಿನ ಷಡಕ್ಷರಿಗಳು, "ಎಲ್ಲ ಶರಣರ ನೆನೆದು ಇಲ್ಲಿ ನಾ ನತನಾಗಿ ಎಲ್ಲರೊಳು ಒಂದೊಂದು ಬೇಡಿಕೊಂಬೆ" ಎಂದಿರುವರು.

✉ 2. ಧರ್ಮಪಿತ ಬಸವಣ್ಣನವರು ಭವಿಗಳಿಗೆ ನಮಸ್ಕರಿಸಬಾರದೆಂದು ಕೈ ಬೆರಳಲ್ಲಿ ನಂದಿ ಉಂಗುರ ಹಾಕಿಕೊಂಡಿದ್ದರೆಂದು, ಬಿಜ್ಜಳನಿಗೆ ನಮಸ್ಕರಿಸುವ ಬದಲು ಆ ನಂದಿ ಉಂಗುರಕ್ಕೆ

ನಮಸ್ಕಾರ ಮಾಡುತ್ತಿದ್ದರೆಂದು ನಮ್ಮೂರಲ್ಲಿ ಬಸವ ಪುರಾಣ ಹೇಳಿದ ಶಾಸ್ತ್ರಿಗಳು ಹೇಳುತ್ತಿದ್ದರು, ಇದು ನಿಜವೇ ?

★ ಇಂಥ ಮತಾಂಧ ಕಥೆಗಳಿಂದ ಬಸವಣ್ಣನವರ ವ್ಯಕ್ತಿತ್ವ ಮತ್ತು ವಿಶಾಲತೆಗೆ ಚ್ಯುತಿ ಬರುತ್ತದೆ. ಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರ 'ಭವಿ' ಎಂಬ ಪರಿಕಲ್ಪನೆಯೇ ಬೇರೆ. ನಂದಿ ಉಂಗುರ ಅವರ ಮುದ್ರೆಯುಂಗುರವಾಗಿತ್ತು. ಪತ್ರಗಳಿಗೆ ಆ ಮುದ್ರೆಯುಂಗುರದಿಂದ ಮುದ್ರೆ ಒತ್ತುತ್ತಿದ್ದರು. ಮಾನವ ಚೇತನದಲ್ಲಿ ಪರಮಾತ್ಮನು ಅಡಗಿರುವ ಕಾರಣ ಮಾನವಾತ್ಮರಿಗೆ ಬಸವಣ್ಣನವರು ಬಹಳಷ್ಟು ಗೌರವ ಕೊಡುತ್ತಿದ್ದರು. ಬಹಿರಂಗದ ಅನ್ಯ ದೇವತಾ ವಿಗ್ರಹಗಳಿಗೆ ವಂದಿಸುವುದು ನಿಷಿದ್ಧವಾದರೆ ಮಾನವರೆಲ್ಲರಿಗೆ ವಂದಿಸುವುದು ಶರಣ ಧರ್ಮದ ಶಿಷ್ಟಾಚಾರ ! ಅದಕ್ಕೇ ಒಬ್ಬರಿಗೊಬ್ಬರು ಶರಣೆಂಬುದೇ ಸರ್ವತೀರ್ಥ ಎಂದು ವಚನ ಸಾಹಿತ್ಯವು ನುಡಿಯುತ್ತದೆ. "ಬಾಗಿದ ತಲೆ ಮುಗಿದ ಕೈಯಾಗಿರಿಸು" ಎಂಬುದು ಪ್ರಸಿದ್ಧ ಬಸವೋಕ್ತಿ

⊠ ಎಂ. ಶಾಂತಮೂರ್ತಿ, ಬಸವೇಶ್ವರ ನಗರ, ಬೆಂಗಳೂರು

★ ಮಾನವರೆಲ್ಲ ಒಂದೇ, ಪೂಜಿಸುವ ದೇವರ ಹೆಸರು ಬೇರೆ ಬೇರೆ, ಗುರಿ ಒಂದೇ ಪರಮಾತ್ಮನಲ್ಲಿ ಐಕ್ಯ ! ಇದಕ್ಕಾಗಿ ಏಕೆ ತಿಕ್ಕಾಟ ?

★ ಇಂಥ ಆದರ್ಶದ ಮಾತುಗಳು ಕೇಳಲಿಕ್ಕೆ ಬಲು ಪ್ರಿಯ. ವಾಸ್ತವಿಕವಾಗಿ ಪ್ರಯೋಗಶೀಲವಲ್ಲ, ಎಲ್ಲ ಧರ್ಮ, ಮತ, ಪಂಥಗಳ ಗುರಿಯೂ ಒಂದೇ ಇಲ್ಲ ; ಪರಮಾತ್ಮನಲ್ಲಿ ಐಕ್ಯವೇ ಎಲ್ಲ ಮಾರ್ಗಗಳ ಗುರಿಯಲ್ಲ. ಕೆಲವರಿಗೆ ಸ್ವರ್ಗ ಪ್ರಾಪ್ತಿಯೇ ಗುರಿ ; ಮತ್ತೆ ಕೆಲವರಿಗೆ ಕೈಲಾಸ, ವೈಕುಂಠ ಪ್ರಾಪ್ತಿಯೇ ಗುರಿ. ಧರ್ಮಗಳು ವಿವಿಧ ಚಿಕಿತ್ಸೆಗಳಂತೆ ; ಸೂಕ್ತವೆನಿಸಿದುದನ್ನು ಆಯ್ಕೆ ಮಾಡಿಕೊಳ್ಳ ಬೇಕು. ತೌಲನಿಕವಾಗಿ, ವಿಮರ್ಶಾತ್ಮಕವಾಗಿ ಅಧ್ಯಯನ ಮಾಡಿ ಯೋಗ್ಯವಾದುದನ್ನು ಸ್ವೀಕರಿಸಿ, ಅಳವಡಿಸಿಕೊಳ್ಳಬೇಕು. "ಎಲ್ಲ ನದಿಗಳೂ ಸಮುದ್ರ ಸೇರುವಂತೆ ಕ್ಷುದ್ರ ದೇವತೋಪಾಸನೆಯಿಂದ ಬ್ರಹ್ಮ ವಿದ್ಯೆಯವರಿಗೆ ಎಲ್ಲವೂ ದೇವರಲ್ಲಿ ಅಂತ್ಯಗೊಳ್ಳುತ್ತವೆ." ಎಂದು ಭಗವದ್ಗೀತೆ ಹೇಳುವುದು ಭ್ರಾಂತ್ಯಾತ್ಮಕ. ಶ್ರೇಷ್ಠವಾದ ಚಿಂತನಶೀಲವಾದ ಧರ್ಮವನ್ನು ಎಲ್ಲರಿಗೂ ಕೊಡುವ ಮನಸ್ಸಿಲ್ಲದೆ "ನೀನು ಏನು ಮಾಡುತ್ತೀಯೋ ಅದರಲ್ಲೇ ಇರು". ಎಂಬ ನಂಬಿಕೆ ಹುಟ್ಟಿಸುವ ತಂತ್ರವಿದು. ಓರ್ವ ಚಿಂದಿ ಉಟ್ಟಿದ್ದಾನೆ, ಇನ್ನೋರ್ವ ಉತ್ತಮ ಬಟ್ಟೆ ಹಾಕಿದ್ದಾನೆ."ಯಾವ ಬಟ್ಟೆಯಾದರೇನು ಮೈ ಮುಚ್ಚುತ್ತಿದೆ ನೀನು ತೊಟ್ಟಿರುವುದರಲ್ಲೇ ಸಮಾಧಾನ ಪಟ್ಟುಕೋ" ಎಂಬ ಸಾಂತ್ವನದಂತಿದೆ ಇದು. "ತಗೋ, ನಿನಗೂ ಒಳ್ಳೆಯ ಬಟ್ಟೆ ತೊಡುವ ಹಕ್ಕಿದೆ. ಗಿಡಗಂಟೆ, ಗೊಂಬೆ ಏನೇನೋ ಪೂಜೆ ಮಾಡಿ ವ್ಯರ್ಥವಾಗಿ ಸಮಯ ಕಳೆಯಬೇಡ. ಇದು ಶ್ರೇಷ್ಠವಾದ ಉಪಾಸ್ಯ ವಸ್ತು; ಪೂಜಿಸಲು ನಿನಗೂ ಹಕ್ಕಿದೆ." ಎಂದು ಚಿಂದಿ ಬಟ್ಟೆ ಬಿಡಿಸಿ ಉತ್ತಮ ಬಟ್ಟೆ ಕೊಡುವುದೇ ಬಸವ ಧರ್ಮದ ಶ್ರೇಷ್ಠ ಗುರಿ.

⊠ ಪಾರ್ವತಿ ಪಾಟೀಲ್, ಬೆಂಗಳೂರು. - ಸ್ವತಃ ಬಸವಣ್ಣನವರು ದೇವನೊಬ್ಬ ನಾಮ ಹಲವು ಎಂದು ಹೇಳಿದ್ದಾರೆ. ಯಾವ ಹೆಸರಿನಿಂದ ಯಾವ ರೂಪದಿಂದ ದೇವರನ್ನು ಪೂಜಿಸಿದರೆ ಏನು ? ಎಂದಿದ್ದಾರೆ. ಆದ್ದರಿಂದ ವಿವಿಧ ಆಕಾರಗಳಲ್ಲಿ ದೇವರನ್ನು ಪೂಜಿಸಿದರೆ ತಪ್ಪೇನು ಎನ್ನುತ್ತಾರೆ

ಕೆಲವರು (ಲಿಂಗಾಯತರು).

★ ಧರ್ಮಪಿತ ಬಸವಣ್ಣನವರ ಈ ವಚನವನ್ನು ತಪ್ಪುತಪ್ಪಾಗಿ ಅರ್ಥ ಮಾಡಲಾಗುತ್ತಿದೆ. ಅಲ್ಲಿ ಅವರು "ದೇವನೊಬ್ಬ ನಾಮ ಹಲವು ?! ಎಂದು ಪ್ರಶ್ನಾರ್ಥಕ ಮತ್ತು ಆಶ್ಚರ್ಯಭಾವದಿಂದ ಹೇಳಿ, ಅದಕ್ಕೆ ಉತ್ತರಿಸಿದಂತೆ ತೋರುತ್ತದೆ. ಸಾಮಾನ್ಯ ಜನರು "ದೇವನೊಬ್ಬ ನಾಮ ಹಲವು" ಎನ್ನುವುದನ್ನು ಉಲ್ಲೇಖಿಸಿ, ಪ್ರಶ್ನಿಸಿ, ನಂತರ ಉತ್ತರಿಸಿದಂತೆ ತೋರುತ್ತದೆ. ಇದು ಏಕದೇವೋಪಾಸನೆ ಪ್ರತಿಪಾದಿಸುವ ವಚನ. "ದೇವನೊಬ್ಬ ನಾಮ ಹಲವು" ಎಂಬುದು ಪ್ರಶ್ನಾರ್ಥಕವಲ್ಲ Statement of fact ವಸ್ತುಸ್ಥಿತಿಯ ಉಲ್ಲೇಖ ಎಂದು ಒಪ್ಪಿಕೊಂಡರೂ ಇದರ ಅರ್ಥ ಹೀಗಾಗುತ್ತದೆ."ಸೃಷ್ಟಿಕರ್ತನಾದ ಲಿಂಗದೇವ ಒಬ್ಬನು. ಆದರೆ ನಾಮವಿಲ್ಲದ ಅವನನ್ನು ಬಗೆಬಗೆಯ ಹೆಸರುಗಳಿಂದ ಕರೆಯುವುದುಂಟು. "ಧರ್ಮಪಿತರು ದೇವನೊಬ್ಬ ನಾಮ ಹಲವು" ಎಂದಿದ್ದಾರೆಯೇ ವಿನಾ ರೂಪ ಹಲವು ಎಂದಲ್ಲ. ಬಗೆಬಗೆಯ ರೂಪಗಳನ್ನು ದೇವರಿಗೆ ಆರೋಪಿಸಿ ಆ ರೂಪಗಳನ್ನೇ ದೇವರು ಎಂದರೆ ಸೃಷ್ಟಿಕರ್ತನಿಗೆ ಚ್ಯುತಿಯು ಬರುತ್ತದೆ. ಹೇಗೆಂದರೆ ದೇವರನ್ನು ಬ್ರಹ್ಮ ಬೃಹತ್ತಾದವನು ಎನ್ನಬಹುದು ; ಆದರೆ ಬ್ರಹ್ಮನನ್ನೆ ದೇವರು ಎನ್ನಬಾರದು. ದೇವರನ್ನು ವಿಷ್ಣು ಅರ್ಥಾತ್ ಸರ್ವವ್ಯಾಪಿ ಎನ್ನಬಹುದು. ಆಕಾರವುಳ್ಳ ವಿಷ್ಣುವನ್ನೇ ದೇವರು ಎನ್ನಬಾರದು. ದೇವರನ್ನು ಶಿವ ಅರ್ಥಾತ್ ಮಂಗಲ ಸ್ವರೂಪ ಎನ್ನಬಹುದು, ಜಟಾಧಾರಿಯಾದ ಶಿವನನ್ನೇ ಸೃಷ್ಟಿಕರ್ತ ಎನ್ನಬಾರದು. ಹೇಗೆ ಪರಮ ಪತಿವ್ರತೆಗೆ ಗಂಡನೊಬ್ಬನೋ, ಅವಳ ತನು - ಮನ - ಧನ ಎಲ್ಲವೂ ಅವನದೋ ಹಾಗೆ ನಿಜಭಕ್ತನ ಸರ್ವಸ್ವವೂ ಸೃಷ್ಟಿಕರ್ತನಾದ ದೇವನು. ಅವನನ್ನು ಬಿಟ್ಟು ನಿಜಭಕ್ತ ದೇವನಲ್ಲದುದನ್ನು ಆರಾಧಿಸನು. ಓರ್ವ ವ್ಯಕ್ತಿಗೆ ಕಾಯಿಲೆಯಾಗಿರುತ್ತದೆ, ಆಗ ವೈದ್ಯರು ಔಷಧ ಕೊಡುತ್ತಾರೆ. ಜೊತೆಗೆ ಪಥ್ಯವನ್ನು ಹೇಳುತ್ತಾರೆ. ಪಥ್ಯವನ್ನು ಮಾಡದೆ ಅಪಥ್ಯಮಾಡಿ ಎಷ್ಟು ಔಷಧಿಯನ್ನು ತಿಂದರೆ ಏನಂತೆ. ಮೂಢ ನಂಬಿಕೆ ಎಂಬ ರೋಗ ಬರಲಿಕ್ಕೆ ಬಹುದೇವತೋಪಾಸನೆ ಎಂಬ ವಿಷಮ ಆಹಾರವೇ ಕಾರಣ, ಅದನ್ನು ಬಿಟ್ಟು (ಅಂದರೆ ಪಥ್ಯ ಮಾಡಿ) ಏಕದೇವೋಪಾಸನೆಯ ಔಷಧಿ ತಿಂದು ಬೌದ್ಧಿಕವಾಗಿ ಸಬಲರಾಗಬೇಕು. ಅದು ಬಿಟ್ಟು ಎಲ್ಲಾ ದಾರಿಗಳು ಒಂದೇ ಗುರಿಗೆ ಒಯ್ಯುತ್ತವೆ, ಎಲ್ಲ ನದಿಗಳು ಸಮುದ್ರ ಸೇರುತ್ತವೆ. ಕ್ಷುದ್ರ ದೈವ ಉಪಾಸನೆಯಿಂದ ಹಿಡಿದು ಬ್ರಹ್ಮವಿದ್ಯೆಯ ತನಕ ಎಲ್ಲ ದೇವರಲ್ಲಿಗೆ ಕರೆದೊಯುತ್ತವೆ ಎನ್ನುವುದು ಹಾಸ್ಯಾಸ್ಪದ. ಕ್ಷುದ್ರದೈವ ಉಪಾಸಕ ಕಡೆಯವರೆಗೂ ಅರಿವಿನ ಮಹಂತನಾಗುವುದೇ ಇಲ್ಲ.

⊠ ಕೆ. ವೀರೇಶ, ತಿಮ್ಮಪ್ಪಯ್ಯಹಳ್ಳಿ, ಚಳ್ಳಕೆರೆ

★ ಬಸವ ಪಂಚಮಿ ದಿನ ಬೆಂಗಳೂರು ಪುರಭವನದಲ್ಲಿ ನಡೆದ ಕಾರ್ಯಕ್ರಮಕ್ಕೆ ನಾನು ಬಂದಿದ್ದೆ. ಸಂಗಮಕ್ಕೆ ಬರಲು ಹೊರಟ ತಾಯಿ ನೀಲಾಂಬಿಕೆಯವರು ಅತ್ತ ಕಡೆಯ ದಂಡೆಯಲ್ಲಿ ಬೀಡುಬಿಟ್ಟಿದ್ದರು. ಇತ್ತ ಕಡೆ ಅಪ್ಪನವರು ಲಿಂಗೈಕ್ಯರಾಗಿದ್ದರು. ಅಂತಿಮ ದರ್ಶನ ಪಡೆಯಲು ನದಿಯ ಪ್ರವಾಹವು ತೀವ್ರವಾಗಿ ಇದ್ದುದರಿಂದ ನದಿಯನ್ನು ನೀಲಾಂಬಿಕಾ ತಾಯಿಯವರಿಗೆ ದಾಟಲು ಆಗಲಿಲ್ಲ ಎಂದು ತಾವು ತಿಳಿಸಿದಿರಿ. ಈಗಿರುವ ಐಕ್ಯಮಂಟಪ ನೀರಿನ ಪ್ರವಾಹ ಇರುವ ಸ್ಥಳದಲ್ಲಿದೆ, ಅಲ್ಲಿ ಹೇಗೆ ಅಪ್ಪನವರ ಸಮಾಧಿ ಮಾಡಲು ಸಾಧ್ಯ ?

★ ನೀವು ಇಂದಿನ ಸ್ಥಿತಿ ನೋಡಿ ಅಂದಿನ ಪರಿಸರ ಕಲ್ಪಿಸಬಾರದು. ನಾವು ಮೊದಲೇ ನೋಡಿದುದರಿಂದ ಎಷ್ಟೋ ಸಂಗತಿ ಪುನರ್ ಚಿಂತನೆ ಮಾಡಲು ನಮಗೆ ಸಾಧ್ಯವಾಯಿತು. ನಾರಾಯಣಪುರ ಆಣೆಕಟ್ಟಿನಿಂದ ಬಸವ ಸಾಗರ ಜಲಾಶಯ ನಿರ್ಮಾಣವಾಗಿ ನೀರು ಐಕ್ಯಮಂಟಪವನ್ನು ಮುಳುಗಿಸುತ್ತದೆ. ಮೊದಲು ನದಿಗಳು ಇನ್ನು ಮುಂದಕ್ಕೆ ಸೀಮಿತಗೊಂಡಿದ್ದವು. ಮಹಾಪ್ರವಾಹವು ಬಂದರೆ ಮಾತ್ರ ಐಕ್ಯಮಂಟಪ ಮುಳುಗುತ್ತಿರಬಹುದು. ನೂರು ವರ್ಷಗಳ ಅವಧಿಯಲ್ಲಿ ಒಮ್ಮೆ ಮಹಾಪ್ರವಾಹ ಬಂದು ಸಂಗಮೇಶ್ವರ ದೇವಾಲಯದ ಅಡಿಪಾಯಕ್ಕೆ ತಾಗಿದ್ದರಿಂದ ಗುಡಿಯ ಗೋಪುರ ವಾಲಿತಂತೆ. ಇನ್ನೂ ಮುಂದೆ ಹೋದರೆ ಒಂದು ನಡುಗಡ್ಡೆ ಇತ್ತು. ಅಲ್ಲಿ ಪುನಃ ನದಿ ಎರಡು ಟಿಸಿಲಾಗಿ ಒಡೆದು, ನಡುಗಡ್ಡೆ ಸುತ್ತಿ ನಂತರ ಒಂದುಗೂಡುತ್ತಿತ್ತು. ಹಿನ್ನೀರಿನಲ್ಲಿ ಆ ನಡುಗಡ್ಡೆ ಮುಳುಗಿ, ಕರಗಿ ಹೋಗಿದೆ. ಅದೇ ರೀತಿ ನೀಲಾಂಬಿಕಾ ತಾಯಿ ಮತ್ತು ಅಪ್ಪಣ್ಣನವರ ಸಮಾಧಿಗಳು ಪೂರ್ಣ ಹೊರಗಿದ್ದವು. ಅವೆಲ್ಲ ಈಗ ಮುಳುಗಿವೆ. ಮಲಪ್ರಭಾ ಬತ್ತಿದಾಗ ನದಿಯ ದಂಡೆಯಲ್ಲಿ ಅನೇಕ ಗುಡಿಗಳು, ಗವಿಗಳು ಕಾಣುತ್ತಿದ್ದವು. ಹಿನ್ನೀರಿನಲ್ಲಿ ಅವೆಲ್ಲ ಮುಳುಗಿವೆ. ಅಪ್ಪನವರ ಕಾಲದಲ್ಲಿ ನದಿಯು ಸಾಕಷ್ಟು ದೂರದಲ್ಲೇ ಹರಿಯುತ್ತಿದ್ದಿರಬೇಕು. ಐಕ್ಯ ಮಂಟಪದ ಬಳಿ ಮಣ್ಣಿನ ದಿಬ್ಬಗಳು ಬಹಳಷ್ಟು ಇದ್ದುದು ನೋಡಿದ್ದೇವೆ ಮತ್ತು ಧರ್ಮಪಿತರ ಪೂಜಾಮಂದಿರವಾದ ಒಂದು ಕಲ್ಲಿನ ಗವಿ ಸಹ ಮಲಪ್ರಭಾ ನದಿಯ ದಂಡೆಯಲ್ಲಿದ್ದು ಅದೀಗ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ.

✉ ಎಸ್. ಯೋಗೀಶ್, ಗಣಪತಿಹಳ್ಳಿ, ತಾ-ಕಡೂರು. -ಶರಣರು ಕೆಲವು ವಚನಗಳಲ್ಲಿ ದೇವರು ಎಂದು ಬಳಸುತ್ತಾರೆ, ಉದಾ : "ಪ್ರಣವ ಷಡಂಗ ಸಮರಸ ನಮ್ಮ ಲಿಂಗದೇವರು." ಮತ್ತೆ ಕೆಲವು ವಚನಗಳಲ್ಲಿ ದೇವನು ಎನ್ನುತ್ತಾರೆ. ಉದಾ : ಕಲಿದೇವರ ದೇವನ ಹೃದಯಕಮಲವ ಹೊಕ್ಕು; ದೇವರು - ದೇವನು ಈ ಎರಡು ಪದಗಳಲ್ಲಿ ಏನು ವ್ಯತ್ಯಾಸ ? ಕಲಿದೇವರು ಯಾರು ? ಅವರ ದೇವನು ಯಾರು ?

★ ರು - ನು ಅಷ್ಟೇ ವ್ಯತ್ಯಾಸ! ಅರ್ಥದಲ್ಲಿ ಏನೂ ವ್ಯತ್ಯಾಸವಿಲ್ಲ. ಮಾತಾಜಿ ಬಂದರು, ಮಾತಾಜಿಯವರು ಬಂದರು, ಇದರಲ್ಲಿ ಏನೂ ಅರ್ಥವ್ಯತ್ಯಾಸವಿಲ್ಲವಷ್ಟೆ? ದೇವನು - ಏಕ ವಚನ ; ಇಲ್ಲಿ ಆತ್ಮೀಯತೆ ಇದೆ. ದೇವರು ಗೌರವ ಸೂಚಕ ಪ್ರಯೋಗ, ತಾತ್ತ್ವಿಕ ಪರಿಕಲ್ಪನೆಯಲ್ಲಿ ಏನೂ ವ್ಯತ್ಯಾಸವಿಲ್ಲ. ಕಲಿ (ಶೂರ) ದೇವರೆಂದರೆ ಮಾಡಿವಾಳ-ಮಾಚಯ್ಯನವರು ; ಅವರ ದೇವನೆಂದರೆ ಸೃಷ್ಟಿಕರ್ತ ಲಿಂಗದೇವ.

✉ ಮಹಾಂತಪ್ಪ ಪಾಟೀಲ್, ಕಲಬುರ್ಗಿ ಜಿಲ್ಲೆ. -ಶ್ರಾವಣ ಮಾಸದ ವಿಶೇಷ ಆಚರಣೆ "ಶ್ರವಣ ಮಾಡಬೇಕು" ಎಂದು ನೀವು ಬರೆದಿದ್ದೀರಿ. ನಮ್ಮಲ್ಲಿನ ಕೆಲವು ಮಠಾಧೀಶರು ಪ್ರವಚನ ಹೇಳಿ ನಮಗೆ ಶ್ರವಣ ಮಾಡಿಸುವುದು ಬಿಟ್ಟು ಶ್ರಾವಣ ಪ್ರತಿಪದೆಯಂದು ಮೌನವ್ರತ ಸ್ವೀಕಾರ ಮಾಡಿ ಶ್ರಾವಣ ಮುಗಿದಾಗ ಮೌನವ್ರತ ಮುಗಿಸುತ್ತಾರೆ. ಬರೀ ಕೈಸನ್ನೆ ಬಾಯಿ ಸನ್ನೆಯಲ್ಲೇ ವ್ಯವಹಾರ. ಇದೆಂಥ ವಿಚಿತ್ರ ?

★ ಗುರುವು ಪ್ರವಚನದ ಮೂಲಕ ಜಗತ್ತಿಗೆ ಜ್ಞಾನ ನೀಡಬೇಕು ಅದೇ ಅವನ ಕರ್ತವ್ಯ.

ಅಂಥ ಪ್ರತಿಭೆ ಇಲ್ಲದವರು ಜನರಿಂದ ಹೇಗಾದರೂ ಗೌರವವನ್ನು ಪಡೆದುಕೊಳ್ಳಬೇಕೆಂದು ಪೂರ್ವಾಶ್ರಮದಲ್ಲಿ ಕಾಳಿದಾಸ ಇದ್ದಂತೆ, "ಹೇಳುವುದಕ್ಕೆ ಕೇಳುವುದಕ್ಕೆ ಇದು ಸಮಯವಲ್ಲ" ಎಂದು ಎಲ್ಲಕ್ಕೂ ಒಂದೇ ಉತ್ತರ ನೀಡಿ, ಮೌನವಹಿಸುತ್ತಾರೆ. ಆದರೂ ಅಂಥ ಗುರುಗಳ ಬಗ್ಗೆ ನನ್ನ ಮೆಚ್ಚಿಗೆ ಇದೆ. ಏಕೆಂದರೆ ಇನ್ನಿತರ ಕೆಲವು ಸ್ವಾಮಿಗಳಂತೆ ತಮಗೆ ಪ್ರವಚನದಿಂದ ಜನರನ್ನು ಆಕರ್ಷಿಸಲು ಸಾಧ್ಯವಿಲ್ಲ ಎಂದು ಇನ್ನಿತರರ ಪ್ರವಚನಗಳನ್ನು ಕೆಡಿಸಲು ಹೋಗುತ್ತಾರಲ್ಲ ಅವರಿಗಿಂತಲೂ ಇವರು ಸಾತ್ವಿಕರು, ಸಜ್ಜನರು ಶ್ರೇಷ್ಠರು ! Nothing is better than non-sense.

✉ ದೊಡ್ಡ ಬಸಪ್ಪ, ಬಳ್ಳಾರಿ

★ ಗೂಂಡಾಗಿರಿ ಮತ್ತು ಧಾರ್ಮಿಕ ಬದುಕು ಒಂದಕ್ಕೊಂದು ವಿರೋಧಾಭಾಸವಲ್ಲವೆ ? ಅಂತೆಯೇ ಬುದ್ಧ ಅಂಗುಲಿ ಮಾಲನನ್ನು, ಬಸವಣ್ಣನವರು ಕೊಲೆಗಡುಕ ಭದ್ರನನ್ನು ತಿದ್ದಿ ತೀಡಿದರು. ಆದರೆ ಈ ಕಾಲದಲ್ಲಿ ಕೆಲವು ಮಠಾಧೀಶರೇ ಗೂಂಡಾಗಿರಿಯನ್ನು ಪ್ರೋತ್ಸಾಹಿಸುವುದು ಕಂಡು ನಮಗೆ ನಾಚಿಕೆಯಾಗುತ್ತಿದೆ !

★ ಭಾರತ ದೇಶದಲ್ಲಿ ಕಾಲಚಕ್ರ ತೀವ್ರಗತಿಯಲ್ಲಿ ಓಡುತ್ತಿದೆ. ಅದಕ್ಕಾಗಿ ನಮ್ಮ ಕೆಲವು ಮಠಾಧೀಶರು ಆ ಕಾಲಚಕ್ರದ ವೇಗವನ್ನನುಸರಿಸಿ ಓಡುತ್ತಿದ್ದಾರೆ. ಸಾಮಾನ್ಯ ಗೂಂಡಾ ಕಾನೂನಿನ ಕೈಗೆ ಸಿಕ್ಕಿಕೊಳ್ಳುತ್ತಾನೆ. ವೀರಪ್ಪನ್ ನಂತಹವರು ಹಿರೋಗಳಾಗುತ್ತಾರೆ ; ರಾಜಕಾರಣಿಯ ವೇಷ ತೊಟ್ಟ ಗೂಂಡಾ ಗಣ್ಯನಾಗಿ ಕಾನೂನಿನ ಕೈಯಿಂದ ತಪ್ಪಿಸಿಕೊಂಡು (ಖೈದಿಗಳ ಸಾಲಿನಲ್ಲಿ ಕೂರದೆ) ಧರ್ಮಗುರುಗಳ ಜೊತೆಗೆ ಕುಳಿತುಕೊಳ್ಳಲು ಅರ್ಹನಾಗುತ್ತಾನೆ ; ಧಾರ್ಮಿಕ ಕೇಂದ್ರಗಳನ್ನು ಉದ್ಘಾಟಿಸುವಷ್ಟು ಶುದ್ಧನಾಗುತ್ತಾನೆ. ಕಾವಿ ತೊಟ್ಟ ಗೂಂಡಾ ಇನ್ನೊಬ್ಬರನ್ನು ಆಶೀರ್ವದಿಸುವಷ್ಟು, ಗೃಹ ಮಂತ್ರಿಗಳನ್ನೇ ತನ್ನ ಬಳಿ ಕರೆಸಿಕೊಳ್ಳುವಷ್ಟು, ಕಾನೂನಿನ ಎಲ್ಲ ಬಲೆಯಿಂದ ಪಾರಾಗುವಷ್ಟು ಸಮರ್ಥನಾಗುತ್ತಾನೆ. ಇದನ್ನರಿತೇ ನೀವು ಕಂಡಿರುವ, ಕಾಣುತ್ತಿರುವ ಕೆಲವು ಮಠಾಧೀಶರು ಬುದ್ಧ ಬಸವರಂತೆ ಗೂಂಡಾಗಳನ್ನು ಪರಿವರ್ತಿಸಲು ಹೋಗದೆ ತಮ್ಮ ರಾಜಕೀಯ ಬಲ, ಧನ ಬಲದಿಂದ ಒಳ್ಳೆಯ ಜನರನ್ನು ಗೂಂಡಾಗಳನ್ನಾಗಿ ಪರಿವರ್ತಿಸುತ್ತ ಅವರ ಸಂಖ್ಯೆ ವರ್ಧಿಸುವಲ್ಲಿ ಆಸಕ್ತರಾಗಿದ್ದಾರೆ. ಕಾಲಾಯ ತಸ್ಮೈ ನಮಃ ಎಂದು ಒಪ್ಪಿಕೊಳ್ಳಿ.

✉ 1. ಶರಣ. ಲಿಂಗಬಸಪ್ಪ ಅಂಗಡಿ, ರಾಯಚೂರು. -ರಾಯಚೂರು ನಗರದಲ್ಲಿ ಕಾಶೀಪೀಠದ ಜಗದ್ಗುರುಗಳ ಕಾರ್ಯಕ್ರಮವು 15 ದಿವಸಗಳ ಕಾಲ ನಡೆಯಿತು. ಅವರು ವಚನಗಳನ್ನು ಕಡಿಮೆ ಸಂಖ್ಯೆಯಲ್ಲಿ ಬಳಸಿದರಲ್ಲದೆ ಶರಣರ ಹೆಸರು ಹೇಳದೆ ವಚನಕಾರರು ಹೀಗೆ ಹೇಳುತ್ತಾರೆ ಹಾಗೆ ಹೇಳುತ್ತಾರೆ ಎಂದು ಹೇಳುತ್ತಿದ್ದರು. ರಾಯಚೂರಿನ ವೀರಶೈವ ಭಕ್ತ ವೃಂದವು 15 ಪ್ರಶ್ನೆಗಳನ್ನು ಮುದ್ರಿತ ರೂಪದಲ್ಲಿ ಸಲ್ಲಿಸಿತು. ಆದರೆ ಒಂದಕ್ಕೂ ಉತ್ತರಿಸದೆ ಅವರು ಹಾಗೆಯೇ ಹೋದರು. ಹೀಗೇಕೆ ?.

★ ನಾನು ಅವರ ಬಗ್ಗೆ ಬರೆಯುವ ಬದಲು ನಿಮಗೇ ಕೆಲವೊಂದು ಸಲಹೆ ನೀಡಬಯಸುತ್ತೇನೆ. ವೀರಶೈವ ಮತ್ತು ಲಿಂಗಾಯತ ಪದಗಳನ್ನು ಸಮೀಕರಿಸಿ ಬಳಸಬೇಡಿರಿ.

ಎರಡರ ಮಧ್ಯೆ ಪಾಕಿಸ್ತಾನ ಮತ್ತು ಭಾರತ ದೇಶದ ದೃಷ್ಟಿಕೋನದಲ್ಲಿರುವ ಅಂತರದಂತಿದೆ. ಇವೆರಡೂ ಸಮಾನಾಂತರ (Parallel) ಹಳಿಗಳು ; ಎಂದೂ ಕೂಡುವುದಿಲ್ಲ. ವೀರಶೈವರೆಂದು ಕರೆದುಕೊಳ್ಳುವ ಪಂಚಪೀಠಾಧೀಶರು ವಚನಗಳನ್ನು ಸ್ವಲ್ಪವೂ ಬಳಸಿಕೊಳ್ಳದೆ ಇದ್ದಾಗ ನಮಗೆ ಅತೀವ ಆನಂದವಾಗುತ್ತದೆ. ನೀವು ಕೇಳಿದ ಪ್ರಶ್ನೆಗಳೆಲ್ಲವೂ (ಪ್ರತ್ಯೇಕವಾಗಿ ಆ ಕರಪತ್ರ ಮತ್ತು ಉತ್ತರ ಮುದ್ರಿಸಲಾಗುವುದು.) ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದವು. ಇವಕ್ಕೆ ಉತ್ತರವನ್ನು ವೀರಶೈವರಿಂದ ನಿರೀಕ್ಷಿಸುವಿರೇಕೆ ?. ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಈ ಪ್ರಶ್ನೆಗಳನ್ನು ವಿರಕ್ತ ಸಂಪ್ರದಾಯದ ಸ್ವಾಮಿಗಳಿಗೆ ಕೇಳಿರಿ. ಕೇಳಲು ನಿಮಗೆ ಹಕ್ಕುಂಟು, ಉತ್ತರಿಸಬೇಕಾದುದು ಅವರ ಕರ್ತವ್ಯವಾಗಬೇಕಾಗಿದೆ.

☒ 2. ಪಂಚಪೀಠಾಧೀಶರು ಜಾತಿ ಜಂಗಮ, ಮಹೇಶ್ವರ ಸಮಾವೇಶ ಮಾಡಿಕೊಂಡು ಬೇಡ ಜಂಗಮರೆಂದು ಕೇಂದ್ರ ಸರ್ಕಾರದಿಂದ ಮಂಜೂರು ಪಡೆಯಲು ಹೊರಟಿದ್ದಾರೆ. ಇದರಿಂದ ನಮ್ಮ ಲಿಂಗಾಯತ ಜನರಿಗೆ ದಿಗ್ಭ್ರಾಂತರಾಗಿದ್ದಾರೆ.

★ ಈ ಎಲ್ಲ ದೃಷ್ಟಿಯಿಂದ ನಿಮಗೆ ಮನವರಿಕೆ ಯಾಗುತ್ತಿರಬಹುದು-ವೀರಶೈವವಾದಿಗಳು (ಜಾತಿ) ಜಂಗಮವಾದಿಗಳು ಮತ್ತು ಬಸವ ತತ್ತ್ವವನ್ನು ಇಷ್ಟಪಡರು ಎಂದು. ಒಳಗಿದ್ದು ತಪ್ಪು ತಪ್ಪು ಆಚರಣೆ ಮಾಡಿ ಇಡೀ ಧರ್ಮಕ್ಕೆ ಕಲಂಕ ತರುವರು. ಆದ್ದರಿಂದ ನೀವು ಎರಡೂ ಬುಟ್ಟಿಯಲ್ಲಿ ಕಾಲಿಡುವುದು ಬಿಟ್ಟು ದೃಢವಾಗಿ ಒಂದನ್ನು, ಬಸವ ತತ್ತ್ವವನ್ನು ಹಿಡಿಯಿರಿ. ತತ್ತ್ವನಿಷ್ಠರಾದ ಜನ ಸ್ವಲ್ಪವೇ ಸಂಖ್ಯೆಯಲ್ಲಿದ್ದರೂ ಪರವಾಗಿಲ್ಲ, ಒಳ್ಳೆಯ ಸಮೂಹ ತಯಾರಾಗುವುದು. ಸ್ವಂತ ಲಾಭಕ್ಕಾಗಿ ಜಾತಿವಾದಿಗಳಾಗಿ ತತ್ತ್ವವನ್ನು, ಧರ್ಮವನ್ನು ಬಲಿಕೊಡುವವರನ್ನು ಬಿಟ್ಟು ತತ್ತ್ವ-ಧರ್ಮಗಳಿಗಾಗಿ ತಮ್ಮನ್ನು ತಾವು ಸಮರ್ಪಿಸಿಕೊಂಡು ದುಡಿವ ಜನರಾಗಿ ತಯಾರಾಗಿರಿ. ಮತ್ತು ಧಾರ್ಮಿಕ ವಿಧಿ-ವಿಧಾನಗಳನ್ನು ನೆರವೇರಿಸುವ ಕ್ರಿಯಾಮೂರ್ತಿಗಳನ್ನು ತಯಾರು ಮಾಡದೆ ಇದ್ದರೆ ಸಮಾಜದ ಭವಿಷ್ಯ ಚೆನ್ನಾಗಿರುವುದಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳಿರಿ.

☒ ಮಲ್ಲಿಕಾರ್ಜುನ ಹೆಚ್ ಗುಡಿಮನಿ, ರಾಯಚೂರು.

ರಾಯಚೂರಿನಲ್ಲಿ ದಿ.22-6-2001ರಿಂದ ದಿ.5-7-2001ರವರೆಗೆ ಕಾಶಿ ಜಗದ್ಗುರು ಡಾ॥ ಚಂದ್ರಶೇಖರ ಸ್ವಾಮಿಗಳ ಪ್ರವಚನ ನಡೆಯಿತು. ಅವರ ಆಚರಣೆ ಬಸವ ತತ್ತ್ವಕ್ಕೆ ಸಂಪೂರ್ಣ ವಿರುದ್ಧವಾಗಿದ್ದವು. ಮೂಢನಂಬಿಕೆ. ಕಂದಾಚಾರಗಳನ್ನು ಬೆಳೆಸುವಂತೆ ಪ್ರವಚನದಲ್ಲೂ ಹೇಳಿ, ಆಚರಣೆ ಮಾಡಿದರು. ಆದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಕೋರುತ್ತೇನೆ.

★ ಯಾವ ರೀತಿ ಕ್ರಮ ಕೈಗೊಳ್ಳಲು ಸಾಧ್ಯ ? ಇದು ಸೆಕ್ಯುಲಾರ್ ದೇಶ. ಯಾರು ತಮಗೆ ಏನು ಬೇಕೋ ಅದನ್ನು ಮಾಡುವಂಥ ಮೂಢತ್ವಕ್ಕೂ ಅವಕಾಶ ನೀಡುತ್ತದೆ. ಅಂದು 12ನೆಯ ಶತಮಾನದಲ್ಲಿ ಮೂಢನಂಬಿಕೆ ಜಾತೀಯತೆಯ ವಿರುದ್ಧ ಚಳುವಳಿ ನಡೆದಂತೆ ಪುನಃ 19-20ನೆಯ ಶತಮಾನಗಳಲ್ಲಿಯೂ ಕೆಲವು ಚಳುವಳಿ ನಡೆದವು. ಬಂಗಾಲದಲ್ಲಿ ಬ್ರಹ್ಮ ಸಮಾಜದವರು, ಕೇರಳದಲ್ಲಿ ನಾರಾಯಣ ಗುರು, ರಾಮಮನೋಹರ್ ಲೋಹಿಯಾ, ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಮುಂತಾದ ಸಾಮಾಜಿಕ-ಧಾರ್ಮಿಕ ಸುಧಾರಕರು ಕೆಲವು ಪ್ರಗತಿಪರ

ಚಳುವಳಿಗಳನ್ನು ಹುಟ್ಟುಹಾಕಿ ಮುನ್ನಡೆಸಿದರು. ಬ್ರಿಟಿಷರ ಆಡಳಿತವೂ ಸ್ವಲ್ಪ ಪೂರಕವಾಗಿ ಕೆಲಸ ಮಾಡಿತು. ಈಗ ಅಧ್ವಾನದ ಪರಿಸ್ಥಿತಿ. ಬರೀ ಮೂಢರೇ ಆಳುವ ಈ ದೇಶದಲ್ಲಿ ಸುಧಾರಕರ ಸೊಲ್ಲಡಗಿ ಮಾನ್ಯ ಡಾ॥ ಹೆಚ್.ನರಸಿಂಹಯ್ಯರಂಥವರ ಭಾಷಣ ಕೇಳಿ ನಕ್ಕು ಮರೆತು ಬಿಡುವ ಹವ್ಯಾಸ ಜನರದು. ಸಮಾಜವಾದಿ ಚಳುವಳಿಯ ಉಸಿರು ಸಹ ಈಗ ಇಲ್ಲ. ಯಜ್ಞ-ಯಾಗ, ಅಡ್ಡಪಲ್ಲಕ್ಕಿ ಮಾನವೀಯತೆಗೆ ಎಸಗುವ ಅಪಚಾರ ಎಂದು ಅನೇಕರು ಹಿಂದೆ ಲೇಖನ ಬರೆಯುತ್ತಿದ್ದರು. ಆದರೆ ಈಗ ನಮಗ್ಯಾಕೆ ? ಯಜ್ಞ-ಯಾಗ ಬ್ರಾಹ್ಮಣರಿಗೆ ಸಂಬಂಧ, ಅಡ್ಡಪಲ್ಲಕ್ಕಿ ವೀರಶೈವರಿಗೆ ಸಂಬಂಧ ಎಂದು ಆಲೋಚಿಸುವರು. ಹೀಗಿರುವಾಗ ಪಂಚಾಚಾರ್ಯರು ಬೆಳೆಸುವ ಮೂಢನಂಬಿಕೆ, ಕಂದಾಚಾರಗಳ ವಿರುದ್ಧ ಚಳುವಳಿ ಮಾಡಲು ಸಾಧ್ಯವಿಲ್ಲ. ಇನ್ನು ಅಂಥ ಕಾರ್ಯಕ್ರಮಗಳ ವಿರುದ್ಧ ಕೆಲಸ ಮಾಡುವುದು, ಪ್ರತಿಭಟನೆ ಶರಣ ಸಂಸ್ಕೃತಿಗೆ ಸಲ್ಲದ್ದು. ಮುಸಲ್ಮಾನ್ ಧರ್ಮದಲ್ಲಿರುವಂತೆ ಜೆಹಾದ್ (ಧರ್ಮಯುದ್ಧ)ದ ಹೆಸರಿನಲ್ಲಿ ಹೊಡಿ, ಬಡಿ ಎಂಬುದು ಶರಣ ಸಂಸ್ಕೃತಿಗೆ ಸರಿಹೊಂದದ ನಡತೆ. ಈಗ ನಮ್ಮ ಮುಂದಿರುವುದು ಒಂದೇ ಸ್ಪಷ್ಟದಾರಿ. ನಿಜಧರ್ಮವನ್ನು ಬೋಧಿಸುವುದು. ಸತ್ಯ ಸಂಗತಿಯನ್ನು ಬಿಂಬಿಸುತ್ತಾ ಪ್ರಜಾಪ್ರಭುತ್ವ ಸಂವಿಧಾನ ಒದಗಿಸಿರುವ ಸ್ವಾತಂತ್ರ್ಯ ಬಳಸಿಕೊಂಡು ಜನರ ಮನಸ್ಸನ್ನು ಬಸವ ತತ್ತ್ವದ ಕಡೆಗೆ ತಿರುಗಿಸುವುದು. ಇದಕ್ಕಾಗಿ ನಾವು-ನೀವೆಲ್ಲರೂ ಪಣ ತೊಟ್ಟು ನಿಲ್ಲಬೇಕು.

☒ ರತ್ನಮ್ಮ ಚಲಿಮಪ್ಪ, ಚಳ್ಳಕೆರೆ. -ಓಂ ಗುರು ಬಸವ ಪ್ರಭು'' ಎಂಬ ಮಂಗಲಾರತಿ ಪದ್ಯದಲ್ಲಿ ತಾವು ಕೊನೆಯಲ್ಲಿ ಶಾಂತಿಯ ಹೊನಲನು ಹರಿಸಲು ಬಂದ ಸಚ್ಚಿದಾನಂದನು ನೀ ಎಂದು ಬರೆದಿದ್ದಿರಿ. ನಂತರ ಸಚ್ಚಿದಾನಂದ ಕಂದ (ಸುತ) ನೀ ಎಂದು ತಿದ್ದಿ ಹಾಡುತ್ತಿದ್ದೀರಿ. ಓರ್ವ ಪ್ರವಚನಕಾರರು '' ಸಚ್ಚಿದಾನಂದನು ನೀ ಎಂಬುದೇ ಸರಿ'' ಎಂದು ವಾದಿಸಿದರು. ಯಾವುದು ಸರಿ ?

★ ಬಹಳ ಸೂಕ್ಷ್ಮವಾದ ತತ್ತ್ವಜ್ಞಾನ ಇಲ್ಲಿದೆ. ವೈಷ್ಣವ ವಿಚಾರಧಾರೆ ಪ್ರಕಾರ ದೇವರು (ವಿಷ್ಣುವು) 10 ಅವತಾರಗಳನ್ನು ಎತ್ತಿದನು. ಲಿಂಗಾಯತ ಧರ್ಮದ ಸಿದ್ಧಾಂತದ ಪ್ರಕಾರ ದೇವರು ಹುಟ್ಟು-ಸಾವುಗಳಿಗೆ ಒಳಗಾಗದವನು. ಆದರೆ ದೇವನು ತನ್ನ ಅನುಗ್ರಹವನ್ನು ಕೆಲವು ವಿಶೇಷಾತ್ಮರಲ್ಲಿ ಅವತೀರ್ಣಗೊಳಿಸಿ ಅವರನ್ನು ತನ್ನ ಪ್ರತಿನಿಧಿಗಳನ್ನಾಗಿ ನೇಮಿಸುವನು. ಅಂಥ ವಿಶೇಷ ಆತ್ಮರನ್ನು ಕಾರಣಿಕರೆಂದು ಕರೆಯಲಾಗುವುದು. ಏಸುವನ್ನು ದೇವರ ಮಗ ಎಂದು, ಪೈಗಂಬರರನ್ನು ದೇವರ ದೂತ ಎಂದು ಕರೆಯಲಾದಂತೆ ಧರ್ಮಪಿತ ಬಸವಣ್ಣನವರು ದೇವರ ಕರುಣೆಯ ಕಂದ. ಅದಕ್ಕೆ ಪ್ರಭುದೇವರು ಹೇಳಿರುವುದು, ''ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು ಕರ್ತನಟ್ಟಿದನಯ್ಯಾ ಶರಣನ (ಬಸವಣ್ಣನ)'' ಎಂದು. ಸಚ್ಚಿದಾನಂದನು ತಾನೇ ಅವತರಿಸುವುದಿಲ್ಲ ತನ್ನ ಪ್ರತಿನಿಧಿಯನ್ನಾಗಿ ಬಸವಣ್ಣನವರನ್ನು ಕಳಿಸಿದ್ದಾನೆ. ಅದಕ್ಕಾಗಿಯೇ ಸಚ್ಚಿದಾನಂದ ಕಂದ ನೀ ಎಂದು ಧರ್ಮಪಿತರನ್ನು ಮಂಗಲಗೀತೆಯಲ್ಲಿ ಸ್ಮರಿಸಲಾಗಿದೆ.

☒ ಹೆಸರು ಬೇಡ, ಊರು ಬೇಡ. -ಧರ್ಮಗುರು ಬಸವಣ್ಣನವರ ವ್ಯಕ್ತಿತ್ವ, ಕೊಡುಗೆ ಮುಂತಾದುವನ್ನು ಅರಿಯುವ ಮೊದಲು ಇನ್ನಿತರ ಅನೇಕ ಅಜ್ಞಾನಿಗಳಂತೆ ಬಸವಣ್ಣನವರನ್ನು ನಾನು

ನಿಂದಿಸಿದ್ದೆ. ನಂತರ ಪರಿವರ್ತನೆಯಾಗಿ, ಈಗ ಧರ್ಮಗುರುವಿನಲ್ಲಿ ಅಖಂಡ ಶ್ರದ್ಧೆ ಅಳವಟ್ಟಿದೆ. ಎಷ್ಟೇ ಜನ್ಮ ಬಂದರೂ ಧರ್ಮಗುರುವು ಕೊಟ್ಟಿರುವ ಈ ಮಾರ್ಗದ ಅನುಯಾಯಿಯಾಗಿಯೇ ನಡೆಯುವಂತಾಗಲೆಂದು ದಿನಾಲೂ ಪೂಜೆ ಮಾಡುವಾಗ ಬೇಡುತ್ತೇನೆ. ಆದರೆ ಹಿಂದೆ ಮಾಡಿದ ನಿಂದೆಯ ಮಾತು ನೆನಪಿಗೆ ಬಂದು ಆಘಾತವಾಗುತ್ತದೆ. ಮನಶ್ಶಾಂತಿ ಕೆಡುತ್ತದೆ. ಏನು ಮಾಡಲಿ ?

★ ಅಪ್ಪ ಬಸವಣ್ಣನವರು ಕರುಣಾಳು, ಕ್ಷಮಾಶೀಲರು. ಅಜ್ಞಾನದ ಸ್ಥಿತಿಯಲ್ಲಿ ಆಡಿದ ಮಾತನ್ನು ಎಂದೋ ಅವರು ಕ್ಷಮಿಸಿದ್ದಾರೆಂದೇ ನಿಮ್ಮ ಮನಸ್ಸು ಧರ್ಮಪಿತರ ಕಡೆಗೆ ಹರಿದಿದೆ. ಹೃದಯ ಪರಿವರ್ತನೆ ಆದ ಮೇಲೆ ಕಿಚ್ಚಿನೊಳಗೆ ಕೋಲ ಬೈಚಿಟ್ಟಂತೆ ಹಿಂದಿನ ಕರ್ಮಗಳು ನಿವೃತ್ತಿಯಾಗಿ ಪುನರ್ಜನ್ಮ ಪ್ರಾಪ್ತಿಯಾಗಿರುತ್ತದೆ. ಆದ್ದರಿಂದ ಹಿಂದಿನದು ನೆನಪಿಸಿಕೊಳ್ಳಬೇಡಿರಿ.

✉ಕೆ.ಎಸ್.ಯೋಗೀಶ್, ಕೊಮ್ಮನಾಳ, ಶಿವಮೊಗ್ಗ. -ಎಲ್ಲಾ ಜನರು ನಮ್ಮ ನಮ್ಮ ಹಣೆಯ ಬರಹ ಇದ್ದಂತೆ ಆಗುತ್ತದೆ. ವಿಧಿ ಲಿಖಿತ ಯಾರಿಗೂ ತಪ್ಪಿಸಲು ಆಗದು ಎನ್ನುತ್ತಾರೆ. ಹೀಗಿರುವಾಗ ನಾವು ದೇವರ ಮತ್ತು ಧರ್ಮಗುರುವಿನ ಪೂಜೆ ಮಾಡುವುದರಲ್ಲಿ ಅರ್ಥವೇನಿದೆ ?

★ ಎಲ್ಲವನ್ನೂ ಹಣೆಬರಹದ ಮೇಲೆ ಹಾಕಿ ಕೈಚೆಲ್ಲಿ ಕೂರುವುದಕ್ಕೆ ವಿಧಿವಾದ (Fatalism)ಎನ್ನುತ್ತಾರೆ. ವಿಧಿ, ಹಣೆಬರಹ, ಅದೃಷ್ಟ (fate) ದೈವ ಎಂದರೇನು? ಹಿಂದಿನ ಜನ್ಮದಲ್ಲಿ ವ್ಯಕ್ತಿಯು ಮಾಡಿರುವ ಕರ್ಮಗಳ ಮೊತ್ತದ ಒತ್ತಡವೇ ಅದೃಷ್ಟ, ಹೀಗಾಗಿ ಇದು ಪೂರ್ವ ನಿರ್ಧಾರಿತ (predestined) ಈ ಜನ್ಮದಲ್ಲಿ. ಆದರೆ ಇದನ್ನು ಮೀರಿದ್ದು ದೇವನ ಕಾರುಣ್ಯ ಶಕ್ತಿ. ದೇವರು ಕರ್ಮಾಧ್ಯಕ್ಷ. ಮಾನವನು ವಿಧಿಯ ಕೈಗೊಂಬೆಯಾದರೆ ವಿಧಿಯು ದೇವನ ಕೈಗೊಂಬೆ. ಆದ್ದರಿಂದ ಪೂಜೆ-ಧ್ಯಾನ, ಜಪ-ತಪಗಳ ಮೂಲಕ ವ್ಯಕ್ತಿಯು ದೇವನಿಗೆ ಶರಣಾದಾಗ, ದೇವನು ಹಣೆಯ ಬರಹವನ್ನು ಬದಲಿಸುವನು. ಅದನ್ನು "ನಶ್ವರ ಮಾಯಾ ಸಾಗರದೊಳಗೆ" ಎಂಬ ಪದ್ಯದಲ್ಲಿ ನಾನು ಹೀಗೆ ಚಿತ್ರಿಸಿದ್ದೇನೆ.

ತೂಗುವ ಕೈಯದು ವಿಧಿಯದ್ದಾಗಿರೆ, ಬಾಳಿನ ಬವಣೆ ತಪ್ಪದು ನೋಡಾ
ದೇವನ ಹಸ್ತವು ತೂಗುತಲಿರಲು ಮುಕುತಿಯ ಸಂತಸ ನಿನ್ನದು ನೋಡು ॥

✉ಕೆ.ಎಂ. ಬಸವಪ್ರಭು, ಬಳ್ಳಾರಿ. -1. "ಲಿಂಗದೇವ" ಪದ- ಧರ್ಮಗುರು ಬಸವಣ್ಣನವರ ವಚನಗಳಿಗೆ ಸೂಕ್ತ ವಚನಾಂಕಿತವಾಗಿದೆ ಎಂಬುದು ನಮಗೆ ಮನದಟ್ಟಾಗಿದೆ. ಆದರೆ ನಮಗೆ ಇರುವ ಭಯವೇನೆಂದರೆ ಲಿಂಗದೇವ ವಚನಾಂಕಿತ ಹಾಕಿ ಯಾರು ಬೇಕಾದರೂ ಹೊಸ ವಚನಗಳನ್ನು ಬರೆದು ಸೇರಿಸಿಬಿಡಬಹುದು ಎಂಬುದು. ಇದಕ್ಕೆ ನಿಮ್ಮ ಉತ್ತರವೇನು ?

★ ಈಗಾಗಲೇ ಕೂಡಲ ಸಂಗಮದೇವ ವಚನಾಂಕಿತದೊಡನೆ ಅಶ್ಲೀಲ, ಅಸಭ್ಯ, ಅನೀತಿ ಪ್ರೇರಕ ವಚನಗಳನ್ನು ಬರೆದು ಮುಕ್ತಿ ಕಂಠಾಭರಣ, ಲಿಂಗಚಿದಮೃತ ಬೋಧೆ ಎಂಬ ಸಂಕಲಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿತ್ತಲ್ಲ ; ನೀವು ಏನು ಮಾಡಿದಿರಿ ?

ಬರೆದು ಸೇರಿಸುವ ಧೂರ್ತರು ಇರುವಾಗ ಏನೂ ಮಾಡಲು ಸಾಧ್ಯವಿಲ್ಲ. ಈಗ ಮುದ್ರಣಗೊಂಡ ಅನೇಕ ಕೃತಿಗಳು ಖೋಟಾ ವಚನಗಳನ್ನು ಒಳಗೊಂಡಿವೆ. ಅದಕ್ಕಾಗಿಯೇ ಬಸವ ವಚನ ದೀಪ್ತಿ ಎಂಬ ಶುದ್ಧೀಕರಣಗೊಂಡ ಬಸವ ವಚನ ಗ್ರಂಥವನ್ನು ನಾನು ಸಂಪಾದಿಸಿ,

ಪ್ರಕಟಿಸಿರುವುದು. ಇಷ್ಟಂತೂ ನಿಜ, ಧರ್ಮಗುರು ಬಸವಣ್ಣನವರ ಪ್ರೌಢ ಮಟ್ಟದ ವಚನಗಳನ್ನು ಬರೆದು ಸೇರಿಸುವ ಸಾಮರ್ಥ್ಯ ಬೇರಿತರರಿಗೆ ಬರಲು ಸಾಧ್ಯವಿಲ್ಲ. ಅಂಥವು ಸೇರಿದರೆ ಸೈದ್ಧಾಂತಿಕ ಚೌಕಟ್ಟಿನ ಹಿನ್ನೆಲೆಯಲ್ಲಿ ಅವನ್ನು ಪರಿಶೀಲಿಸಿ ತೆಗೆದು ಹಾಕಲು ಸಾಧ್ಯವಿದೆ.

✉2. 1975ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸಿರುವ ಲಿಂಗಚಿದಮೃತ ಬೋಧೆ ಎಂಬ ವಚನ ಸಂಕಲನದಲ್ಲಿ ಭಕ್ತನು ಹೆಣ್ಣು-ಹೊನ್ನು-ಮಣ್ಣುಗಳಾದಿಯಾಗಿ ಎಲ್ಲ ವಸ್ತುಗಳನ್ನು ಪ್ರಥಮವಾಗಿ ಜಂಗಮನಿಗೆ ಅರ್ಪಿಸಿ, ತಾನು ಬಳಸಬೇಕೆಂದು ಹೇಳಲಾಗಿದೆ. ಇಂಥ ವಚನವು ಬಸವಣ್ಣನವರ ಹೆಸರನಲ್ಲಿ ಕೂಡಲಸಂಗಮದೇವ ಮುದ್ರಿಕೆಯೊಡನೆ ಬಂದಿದೆ. ಗಮನಿಸಿದ್ದೀರಾ ?

★ ಗಮನಿಸಿರುವುದು ಮಾತ್ರವಲ್ಲ ವಿಕೃತ ಮನಸ್ಸಿನ ವ್ಯಕ್ತಿಯೋರ್ವ ಬರೆದು ಸೇರಿಸಿರುವ ಇಂಥ 22 ವಚನಗಳು ಬಸವಣ್ಣನವರ ಷಟಸ್ಥಲ ವಚನಗಳ ಸಂಗ್ರಹದಲ್ಲಿ ಅಕ್ಕಿಯಲ್ಲಿ ಕಲ್ಲು ಬೆರೆತಂತೆ ಇದ್ದು, ಅವನ್ನು ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕಿ, ಬಸವ ದೀಪ್ತಿ ಮುದ್ರಿಸಲಾಗಿದೆ. ನೀವೂ ಗಮನಿಸಿ, ಬಸವ ವಚನ ದೀಪ್ತಿಯ ತಾಜಾತನ ಮತ್ತು ಶುದ್ಧಿಯನ್ನು ಮನಗಾಣಿರಿ.

✉3. ಬಸವ ಗುರು ಮತ್ತು ಅವರ ಸಮಕಾಲೀನ ಶರಣರು ಬೋಧೆ ಮಾಡಿದಂತೆ ನಡೆದು, ಸಮಾಜಕ್ಕೂ ಅದನ್ನೇ ಬೋಧಿಸಿ, ಅದೇ ರೀತಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸಿರಿ ಎಂದು ಜಂಗಮರನ್ನು, ಕಾವಿ ಧರಿಸಿದ ವಿರಕ್ತರನ್ನು ವಿನಂತಿಸಿಕೊಂಡಾಗ, "ಹಾಗೆ ಬೋಧಿಸಿ ನಾವು ಹೊಟ್ಟೆಗೇನು ಮಣ್ಣು ತಿನ್ನಬೇಕೆ ? " ಎಂದು ಮರುಪ್ರಶ್ನಿಸಿದರು. ಇವರಿಗೆ ಏನು ಹೇಳೋಣ ?

★ ನಾವು ಅಥವಾ ನಮ್ಮ ಸಂಸ್ಥೆಯ ಧರ್ಮಬೋಧಕರೆಲ್ಲರು ಅಪ್ಪಟ ಬಸವ ತತ್ತ್ವ ಬೋಧಿಸಿ ಅಮೃತವನ್ನೇ ಉಣ್ಣುತ್ತಿದ್ದೇವೆಯೇ ಹೊರತು ಮಣ್ಣು ತಿನ್ನುತ್ತಿಲ್ಲ. ಮೂಢ ಭಕ್ತರು ಪೂಜೆ ಮಾಡಿಸಿ ಒಂದೂ ಕಾಲು ರೂಪಾಯಿ, ಹನ್ನೊಂದು ರೂಪಾಯಿ ಕೊಟ್ಟರೆ ಬಸವ ತತ್ತ್ವ ತಿಳಿದ ಕಾಯಕ-ದಾಸೋಹಭಾವಿಗಳು ಕ್ರಿಯಾಮೂರ್ತಿಗಳಿಗೆ ಇನ್ನೂ ಹೆಚ್ಚಿನ ಕಾಣಿಕೆ ಕೊಡುವರು. ಬಸವ ಗುರುವಿನ ಅನುಗ್ರಹ ಶಕ್ತಿಯಲ್ಲಿ ಮೊದಲು ನಂಬಿಕೆ ಬೆಳೆಸಿಕೊಳ್ಳಲು ಆ ಜಂಗಮರಿಗೆ ಹೇಳಿರಿ, ಅವರ ಸಂಪತ್ತು ವೃದ್ಧಿಯಾಗುವುದು ಮತ್ತು ತಮ್ಮ ಹೊಟ್ಟೆಪಾಡಿಗಾಗಿ ಭಕ್ತರನ್ನು ಮೂಢತನದಲ್ಲಿಟ್ಟು ಶೋಷಿಸುವವರು ಎಂದೂ ಉದ್ಧಾರವಾಗರು ಎಂದೂ ಅವರಿಗೆ ಹೇಳಿರಿ.

✉4. ನಮ್ಮ ಧರ್ಮದ ಅವನತಿಗೆ ಕಾರಣ ಧರ್ಮದ ಗುರುಗಳೋ ಅಥವಾ ಭಕ್ತರೋ?

★ ಉಭಯತರೂ ಕಾರಣ ! ಒಂದೇ ಕೈಯಿಂದ ಎಂದೂ ಚಪ್ಪಾಳೆ ಬೀಳದು ; ಅದನ್ನೇ ಸರ್ವಜ್ಞನು "ಬಳ್ಳಿಗುರುಡರು ಸೇರಿ ಹಳ್ಳವನು ಬಿದ್ದಂತೆ" ಎಂದು ಹೇಳಿರುವುದು.

✉ಕಾ.ಶಿ. ಬಿರಾದಾರ, ಬಿಜಾಪುರ. -ಧರ್ಮಪಿತ ಬಸವಣ್ಣನವರು ಬದುಕಿದ್ದು 62 ವರ್ಷ, 3 ತಿಂಗಳು, 2 ದಿವಸ ಹೇಗೆ ? ಕಲ್ಯಾಣ ಕಿರಣದಲ್ಲಿ ಒಂದು ಕಡೆ ಜನನ 30-3-1134, ಲಿಂಗೈಕ್ಯ 2-7-1196 ಎಂದಿದೆ. ಇನ್ನೊಂದು ಕಡೆ 30-4-1134ಕ್ಕೆ ಜನನ ಲಿಂಗೈಕ್ಯ 30-7-1196 ಎಂದಿದೆ. ಯಾವುದು ಸರಿ ?

ಭಾರತೀಯ ತಿಂಗಳು, ದಿನಗಳನ್ನು ಕ್ರಿಸ್ತಶಕಕ್ಕೆ ಪರಿವರ್ತಿಸುವಾಗ ಕೆಲವು ವಿದ್ವಾಂಸರು ಬೇರೆ ಬೇರೆ ರೀತಿ ಲೆಕ್ಕ ಮಾಡುತ್ತಾರೆ. ಡಾ॥ ಬಾಡಾಲ ರಾಮಯ್ಯನವರು 2-7-1196 ದಿನಾಂಕ ಸೂಚಿಸಿದ್ದರು. ಅದನ್ನು ಒಪ್ಪಿ ನಾವು ಪ್ರಕಟಿಸಿದ್ದೆವು. ಆದರೆ ನಮಗೆ ತಿಳುವಳಿಕೆ ಬಂದಾಗಿನಿಂದ ನೋಡಿದರೆ ಮತ್ತು 50 ವರ್ಷಗಳ ಪಂಚಾಂಗ ಇಟ್ಟುಕೊಂಡು ನಾನು ಪರಿಶೀಲಿಸಿದಾಗ

ಮನದಟ್ಟಾದ ಸಂಗತಿ ಹೀಗಿದೆ. ವೈಶಾಖ ಮಾಸದ ಅಕ್ಷಯ ತೃತೀಯಾ-ಬಸವಣ್ಣನವರ ಜನನದ ದಿನ ಎಂದೂ ಮಾರ್ಚ್ ತಿಂಗಳಲ್ಲಿ ಬಂದಿಲ್ಲ. ಸಾಮಾನ್ಯವಾಗಿ ಏಪ್ರಿಲ್ ಕೊನೆಯಲ್ಲಿ, ಮೇ ಮೊದಲಲ್ಲಿ ಬರುತ್ತದೆ. ಅದೇ ರೀತಿ ಲಿಂಗೈಕ್ಯವು ಶ್ರಾವಣಶುದ್ಧ ಪಂಚಮಿಯಂದು ; ಅದು ಎಂದೂ ಜುಲೈ ಮೊದಲವಾರದಲ್ಲಿ ಬರುವುದಿಲ್ಲ; ಜುಲೈ ಕೊನೆಯವಾರ ಅಥವಾ ಆಗಸ್ಟ್‌ದಲ್ಲಿ ಬರುತ್ತದೆ. ನಂತರ ಡಾ|| ಕನ್ನುಸ್ವಾಮಿ ಪಿಳ್ಳೈ ಎಂಬ ವಿದ್ವಾಂಸರ ಈ ಕಾಲ ಪರಿವರ್ತನೆ ಪುಸ್ತಕ ಗಮನಿಸಿದಾಗ ಆ ವರ್ಷ ಅಧಿಕ ಮಾಸವೊಂದು ಬಂದಿದ್ದು ಒಂದು ಭಾರತೀಯ ತಿಂಗಳು ಸೇರ್ಪಡೆಯಾಗಿದೆ. ಜನನದ ದಿನಾಂಕವನ್ನು ಕುಂಡಲಿ ಸಹಿತವಾಗಿ ಹುಬ್ಬಳ್ಳಿ ಜ್ಯೋತಿಷ್ಯ ವಿದ್ವಾನ್ ಶ್ರೀ ಸಾಲಿಮಠ ಎಂಬುವವರು ಖಚಿತ ಪಡಿಸಿದರು. ಆದ್ದರಿಂದ ಜನನವು ದಿ. 30-4-1134 ಮತ್ತು ಲಿಂಗೈಕ್ಯ 30-7-1196 ಎಂದು ನಿರ್ಣಯಿಸಿ ಪ್ರಚಾರ ಮಾಡಲಾಗುತ್ತಿದೆ. ಆನಂದ ನಾಮ ಸಂವತ್ಸರದ ವೈಶಾಖ ಮಾಸದ ಅಕ್ಷಯ ತೃತೀಯಾದಿಂದ ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (ಭಾರತೀಯ ಲೆಕ್ಕಾಚಾರದ ಪ್ರಕಾರ)ವರೆಗೆ ಧರ್ಮಪಿತ ಬಸವಣ್ಣನವರ ಜೀವಿತಾವಧಿ 62 ವರ್ಷ, 3 ತಿಂಗಳು 2 ದಿವಸ.

☒ ದಿಗ್ಭ್ರಾಂತನಾಗಿರುವ ಬಸವ ಭಕ್ತ, ಇಳಕಲ್. -1. ಇಳಕಲ್‌ದಲ್ಲಿ ವಿಜಯ ಮಹಾಂತೇಶ್ವರ ಜಾತ್ರೆ ನಡೆಯಿತು. ದಿ.10-8-2001ರಂದು ಚಿತ್ರದುರ್ಗದ ಶ್ರೀ ಶಿವಮೂರ್ತಿ ಶರಣರು ರಚಿಸಿದ ರೂಪಕ 'ಬಸವ ಬೆಳೆ'ಯನ್ನು ಜಮೂರ ಕಲಾವಿದರು ಮನೋಜ್ಞವಾಗಿ ಅಭಿನಯಿಸಿದರು. ಧರ್ಮಪಿತ ಬಸವಣ್ಣನವರು ತಾಯಿ ನೀಲಾಂಬಿಕೆಯವರ ಬಂಗಾರದ ಮೋಹ ಬಿಡಿಸಿದ ಪ್ರಸಂಗ ಆ ರೂಪಕದ ಸಾರಾಂಶ. ಪ್ರೇಕ್ಷಕರ ಮೇಲೆ ಬಹಳ ಪರಿಣಾಮ ಬೀರಿತು. ಆದರೆ ನಂತರ ಗಣ್ಯ ವ್ಯಕ್ತಿಗಳಿಬ್ಬರಿಗೆ ಅದೇ ವೇದಿಕೆ ಮೇಲೆ ಸತ್ಕರಿಸುವಾಗ ಶಾಲು ಹೊದ್ದಿಸಿದ್ದಲ್ಲದೆ ಬಂಗಾರದ ಉಂಗುರವನ್ನು ನೀಡಲಾಯಿತು. ಇದೆಂಥಾ ವಿಪರ್ಯಾಸ ?!

★ ಅದಕ್ಕೇ ಧರ್ಮಪಿತರು ಹೇಳುವುದು, "ನುಡಿಯೊಳಗಾಗಿ ನಡೆಯದೆ ಇದ್ದರೆ ಲಿಂಗದೇವನು ಎಂತೊಲಿವನು ?" ಎಂದು. ಬಸವ ತತ್ತ್ವವನ್ನು ಸಾರುವ ಬಸವ ಮಹಿಮೆಯನ್ನು ಬೀರುವ ನೆನಪಿನ ಕಾಣಿಕೆಗಳನ್ನು (ಮೋಮೆಂಟೋ) ಮಾಡಿಸಿ ಕೊಡಬಹುದಿತ್ತಲ್ಲವೆ ? ಕಡೆಗೆ ಹಣದ ರೂಪದಲ್ಲೇ ಕೊಡುಗೆ ಕೊಡಬಹುದಿತ್ತು. ಲೋಹದ ಮೋಹ ಬೆಳೆಸುವ ಬಂಗಾರದ ಉಂಗುರ ಕೊಟ್ಟು ಆಶೀರ್ವದಿಸುವುದು ಬಸವ ತತ್ತ್ವಕ್ಕೆ ಸಲ್ಲದ್ದು.

☒ 2. ಅಂದಿನ ಆಶೀರ್ವಚನದಲ್ಲಿ ಶ್ರೀ ಶಿವಮೂರ್ತಿ ಶರಣರು "ಬಾಲ ಬಸವಕೇಂದ್ರ," ಮತ್ತು "ಮಹಿಳಾ ಬಸವ ಕೇಂದ್ರ," ತೆರೆಯುವುದಾಗಿ ಹೇಳಿದರು. ಇದು ಅಗತ್ಯವೆ ? ಧರ್ಮಗುರು ಬಸವಣ್ಣನವರು ಹೀಗೆ ಪ್ರತ್ಯೇಕವಾಗಿ ತೆರೆದಿದ್ದರೆ ? ಎಲ್ಲ ಶರಣರಿಗೂ ಒಂದೇ ಅನುಭವ ಮಂಟಪವಲ್ಲವೆ ?

★ ಮಕ್ಕಳಲ್ಲಿರುವ ಪ್ರತಿಭೆ ವಿಕಾಸಗೊಳ್ಳಲು, ಮಹಿಳೆಯರಿಗೆ ಆತ್ಮಬಲ -ಪ್ರತಿಭೆ ವೃದ್ಧಿಯಾಗಲು ಮಕ್ಕಳು, ಮಹಿಳೆಯರಿಗಾಗಿ ಕೇಂದ್ರಗಳನ್ನು ಆರಂಭಿಸಿದರೆ ತಪ್ಪಲ್ಲ. ಅದನ್ನು ಸ್ವಾಗತಿಸೋಣ. ಆದರೆ, ದಾವಣಗೆರೆಯಲ್ಲಿ ಹಾಸ್ಟೆಲ್ ವಿದ್ಯಾರ್ಥಿಗಳಿಗೆ "ನೀವು ಪ್ರವಚನ ಕೇಳಿಸಲು ಬರದಿದ್ದರೆ ಹಾಸ್ಟೆಲ್‌ದಿಂದ ಹೊರಗೆ ಹಾಕುತ್ತೇವೆ" ಎಂದು ಬೆದರಿಕೆ ಹಾಕಿ ಅವರನ್ನು ಕ್ರೂರ ಮತ್ತು ಅಸಭ್ಯ ವರ್ತನೆಗೆ ಪ್ರಚೋದಿಸಿದಂತೆ ಈ ಮಹಿಳೆಯರನ್ನು ಸಹ ಮಹಿಳಾ ಗುರುಗಳನ್ನು ನಿಂದಿಸಲು, ಪ್ರತಿಕೃತಿ ಸುಡಲಷ್ಟೇ ಬಳಸಿಕೊಳ್ಳುವಂತೆ, ಮತ್ತು ಆ ಮಕ್ಕಳಿಗೆ "ಬಾಲ" ಹಚ್ಚುವಂತಹ ಕೆಲಸಕ್ಕೆ ಪ್ರೇರೆಪಿಸಿದರೆ ಏನೂ ಪ್ರಯೋಜನವಾಗದು. ಮಾವು ನೆಡುವ ಬದಲು ಮುಳ್ಳುಜಾಲಿ ನೆಟ್ಟಂತಾಗುತ್ತದೆ. ಅಷ್ಟೆ !

ಬಸವ ಗಂಗೋತ್ರಿಯಲ್ಲಿ ಬಸವ ತತ್ತ್ವ ತರಬೇತಿ ಕಮ್ಮಟ
ಅಕ್ಟೋಬರ್ 14 ರಿಂದ 28ರ ವರೆಗೆ

ವಿಶ್ವ ಕಲ್ಯಾಣ ಮಿಷನ್ ಸಂಸ್ಥೆಯಿಂದ ಪ್ರತಿವರ್ಷವೂ ಬಸವ ತತ್ತ್ವ ತರಬೇತಿ ಕಮ್ಮಟವನ್ನು ಮೇ ತಿಂಗಳ ರಜೆ ಅಥವಾ ಅಕ್ಟೋಬರ್ ರಜೆಯಲ್ಲಿ ನಡೆಸಲಾಗುವದು. ಆರ್ಥಿಕ ಅನಾನುಕೂಲತೆಯಿಂದಾಗಿ ಈ ಸಲದ ಕಮ್ಮಟವನ್ನು 2001ರ ಏಪ್ರಿಲ್ / ಮೇ ತಿಂಗಳಲ್ಲಿ ನಡೆಸಲಾಗಲಿಲ್ಲ.

ತರಬೇತಿ ಶಿಬಿರಗಳಿಂದ ಸಿಕ್ಕುವ ಜ್ಞಾನ ಅಪಾರ. ಹೀಗಾಗಿ ಬಹಳ ಜನರು ಕಮ್ಮಟವನ್ನು ಏರ್ಪಡಿಸಬೇಕೆಂದು ಆಗ್ರಹಿಸುತ್ತಲಿದ್ದಾರೆ. ಶರಣ ಬಂಧುಗಳ ಆತ್ಮೀಯ ಆಗ್ರಹಕ್ಕೆ ಸ್ಪಂದಿಸಿ ಅಕ್ಟೋಬರ್ ತಿಂಗಳಲ್ಲಿ ತರಬೇತಿ ಕಮ್ಮಟ ಏರ್ಪಡಿಸಲು ನಿರ್ಧರಿಸಲಾಗಿದೆ.

1. ಅಕ್ಟೋಬರ್ 14, 2001 ಭಾನು(ದೇವ)ವಾರದಿಂದ ಅಕ್ಟೋಬರ್ 28 ಭಾನು(ದೇವ)ವಾರದ ವರೆಗೆ 15ದಿವಸಗಳ ತರಬೇತಿ ಕಮ್ಮಟ ಜರುಗುತ್ತದೆ; 27 ಮತ್ತು 28 ಎರಡು ದಿವಸ ಭಕ್ತಿಪಕ್ಷ ಸಮ್ಮೇಳನ ನಡೆದು, ದಿ.28-10-2001ರಂದು ಬೆಳಿಗ್ಗೆ 10-30ಕ್ಕೆ ಸಮಾರೋಪ ಸಮಾರಂಭ ನಡೆಯುವುದು

23. 15ದಿವಸಗಳ ಶಿಬಿರ ಶುಲ್ಕ ಒಬ್ಬರಿಗೆ 350ರೂ (ಮುನ್ನೂರ ಐವತ್ತು) ವಿದ್ಯಾರ್ಥಿಗಳಿಗೆ ಮತ್ತು ಆರ್ಥಿಕವಾಗಿ ಅಶಕ್ತರಿಗೆ ಒಬ್ಬರಿಗೆ 200(ಎರಡುನೂರು) ರೂಗಳು. ಉಚಿತವಾಗಿ ಭಾಗವಹಿಸಬೇಕೆಂಬ ಇಷ್ಟವುಳ್ಳ ಆರ್ಥಿಕ ದುರ್ಬಲರು ಮೊದಲೇ ಪತ್ರ ಬರೆದು ಒಪ್ಪಿಗೆ ಪಡೆದುಕೊಳ್ಳಬೇಕು. ಭಕ್ತಿಪಕ್ಷ ಸಮ್ಮೇಳನ ಶುಲ್ಕ ಒಬ್ಬರಿಗೆ 60ರೂ

ವಿಶೇಷ ಸೂಚನೆ : ಊಟ - ವಸತಿ - ಕಾರ್ಯಕ್ರಮಗಳ ವೆಚ್ಚ ಬಹಳ ಬರುವುದರಿಂದ ಆರ್ಥಿಕವಾಗಿ ಸಶಕ್ತರಾದ ಶಿಬಿರಾರ್ಥಿಗಳು ತಮ್ಮ ಶಿಬಿರ ಶುಲ್ಕವನ್ನು ಕೊಡುವುದಲ್ಲದೆ ಹೆಚ್ಚಿನ ಕಾಣಿಕೆಯನ್ನು ಕೊಟ್ಟು ಸಹಕರಿಸಬೇಕು. ಒಳ್ಳೆಯ ಕಾರ್ಯಕರ್ತರು, ಕ್ರಿಯಾಮೂರ್ತಿಗಳಾಗುವ ಪ್ರತಿಭೆ ಇದ್ದವರು ಆರ್ಥಿಕವಾಗಿ ದುರ್ಬಲರಿದ್ದರೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಮತ್ತು ಶಿಬಿರ ಶುಲ್ಕ ನೀಡಿ ಕಾರ್ಯಕರ್ತರನ್ನು ತರಬೇತಿಗೆ ಕಳಿಸಬೇಕು.

3. ಕ್ರಿಯಾಮೂರ್ತಿಗಳಾಗಿ ತರಬೇತಿ ಹೊಂದಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸುವವರ ಸಂಖ್ಯೆ ಬೆಳೆಯಬೇಕಾಗಿದೆ. ತರಬೇತಿ ಕಮ್ಮಟವು ಸರ್ವಾಂಗೀಣ ತರಬೇತಿ ನೀಡುತ್ತದೆ. ತರಬೇತಿಯ ಬಳಿಕ ಕ್ರಿಯಾಮೂರ್ತಿ ದೀಕ್ಷೆ ನೀಡಿ, ಪ್ರಮಾಣ ಪತ್ರ (certificate) ಕೊಡಲಾಗುವುದು

4. ತರಬೇತಿಯ ಸ್ಥಳ: ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ, ಬೆಂಗಳೂರಿನಿಂದ 21ಕಿ.ಮಿ ದೂರದ ಕುಂಬಳಗೋಡು ಗ್ರಾಮ ವ್ಯಾಪ್ತಿಯಲ್ಲಿ ಬರುವ ಬಸವ ಗಂಗೋತ್ರಿ.

5. ಅತ್ಯಂತ ಉಪಯುಕ್ತವಾದ ಈ ಬಸವ ತತ್ತ್ವ ತರಬೇತಿ ಕಮ್ಮಟದ ಏರ್ಪಾಡಿಗಾಗಿ ಉದಾರವಾದ ಧನ ಸಹಾಯ ಮಾಡುವವರಿಗೆ ಅವಕಾಶವಿದೆ

6. 2002ರ ಜನವರಿ 11ರಿಂದ 15ರ ವರೆಗೆ ನಡೆಯುವ 15ನೆಯ ಶರಣ ಮೇಳದ ಭಿತ್ತಿಪತ್ರ, ಕರಪತ್ರ, ರಸೀತಿ ಪುಸ್ತಕಗಳನ್ನು ಭಕ್ತಿ ಪಕ್ಷ ಸಮ್ಮೇಳನ ಸಮಯದಲ್ಲಿ ವಿತರಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ನಡೆಯುವ ಈ ಕಮ್ಮಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶರಣ ಬಂಧುಗಳು ಭಾಗವಹಿಸಿ ಬಸವ ತತ್ತ್ವ ತರಬೇತಿ ಕಮ್ಮಟದ ಸದುಪಯೋಗ ತೆಗೆದುಕೊಳ್ಳುವಿರಾಗಿ ಹಾರೈಸುತ್ತೇವೆ.

ಪೂಜ್ಯ ಶ್ರೀ ಸದ್ಗುರು ಅಲ್ಲಮಪ್ರಭು ಸ್ವಾಮಿಗಳು, ಪ್ರಧಾನ ಕಾರ್ಯದರ್ಶಿ
ವಿಶ್ವ ಕಲ್ಯಾಣ ಮಿಷನ್, ಬಸವ ಮಂಟಪ, 2035, 20ನೇ ಮೇನ್, ಕಾರ್ಡ್ ರಸ್ತೆ,
ರಾಜಾಜಿ ನಗರ, ಬೆಂಗಳೂರು-560 010, ☎ : 080- 3325335/3322790

ಪೂರ್ಣಯೋಗ ತರಬೇತಿ- ಆವಶ್ಯಕತೆ ಮತ್ತು ಉದ್ದೇಶ

ಮಾನವ ಜೀವನವು ಅತ್ಯಂತ ಅಮೂಲ್ಯವಾದುದು. ಸೃಷ್ಟಿಕರ್ತನಾದ ಪರಮಾತ್ಮನು ಪಂಚಭೂತಗಳಿಂದ ಕೂಡಿದ ಬ್ರಹ್ಮಾಂಡವನ್ನು ಮತ್ತು ಪಿಂಡಾಂಡವನ್ನು ಜೀವರಾಶಿಗೆ ವರವನ್ನಾಗಿ ಕೊಟ್ಟಿದ್ದಾನೆ. ಪ್ರಾಣಿಗಳು ಹುಟ್ಟುಗುಣಗಳಿಂದ ಪ್ರಚೋದಿತವಾಗಿ ಬದುಕುತ್ತವಾದರೂ ಮನುಷ್ಯನಷ್ಟು ಇಂದ್ರಿಯ ಚಾಪಲ್ಯದಿಂದ ಕೂಡಿಲ್ಲ. ಆದರೆ ಮನುಷ್ಯನು ವಿಷಮ ಆಹಾರ- ವಿಹಾರ- ವಿಚಾರ- ವ್ಯಸನಗಳಿಂದ ಕೂಡಿ ಆರೋಗ್ಯಭಾಗ್ಯದಿಂದ ವಂಚಿತನಾಗಿ ಜೀವನವನ್ನು ದುಃಖಮಯವಾಗಿ ಮಾಡಿಕೊಳ್ಳುವುದಲ್ಲದೆ ಇನ್ನಿತರರಿಗೂ ದುಃಖವನ್ನು ಕೊಡುವನು.

ಮಾನವನು ತನು-ಮನ-ಆತ್ಮ ಎಂಬ ಮೂರು ಘಟಕಗಳಿಂದ ಕೂಡಿರುವನು. ತನುವಿಗೆ ಆರೋಗ್ಯ, ಮನಸ್ಸಿಗೆ ಶಾಂತಿ, ಆತ್ಮನಿಗೆ ದಿವ್ಯಾನಂದ ಹೊಂದುವುದೇ ಪೂರ್ಣತ್ವ ಪ್ರಾಪ್ತಿ. ಇಂಥ ತ್ರಿವಿಧ ಭಾಗ್ಯವನ್ನು ಒದಗಿಸುವುದೇ ಪೂರ್ಣಯೋಗದ ತರಬೇತಿ ಕಮ್ಮಟದ ಗುರಿ. ಯೋಗಾಸನ, ಪ್ರಾಣಾಯಾಮ, ಸತ್ವಭರಿತ ಆಹಾರ ಸೇವನೆ ಇವುಗಳಿಂದ ಶರೀರದ ಸ್ವಾಸ್ಥ್ಯವನ್ನು ಕಾಪಾಡಿಕೊಂಡು, ಜ್ಞಾನ-ಭಕ್ತಿ-ಅಧ್ಯಯನಗಳಿಂದ ಮನಸ್ಸಿಗೆ ಜ್ಞಾನಾತ್ಮಕ ಶಾಂತಿಯನ್ನು ಪಡೆದುಕೊಂಡು, ಆತ್ಮನಿಗೆ ದಿವ್ಯಾನಂದವನ್ನು ಧ್ಯಾನದಿಂದ ಪಡೆದುಕೊಂಡು ವ್ಯಕ್ತಿಯು ಪೂರ್ಣತ್ವವನ್ನು ಸಂಪಾದಿಸುವಂತೆ ಪೂರ್ಣಯೋಗವು ತರಬೇತಿ ನೀಡುತ್ತದೆ. ಯೋಗವು ಒಂದು ದೈವೀವಿದ್ಯೆ ಮಾತ್ರವಲ್ಲ ಅತ್ಯಂತ ವೈಜ್ಞಾನಿಕವಾದುದು.

ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ ಎಂಬ ಅಧ್ಯಾತ್ಮಿಕ ಕೇಂದ್ರವು 15 ದಿವಸಗಳ ಅವಧಿಯ ತರಬೇತಿಯನ್ನು ಏರ್ಪಡಿಸುತ್ತದೆ. ಬೆಳಿಗ್ಗೆ 6-30ರಿಂದ 8-30ರವರೆಗೆ, ಸಂಜೆ 6-30ರಿಂದ 8-30ರವರೆಗೆ ಹೀಗೆ ಎರಡು ತಂಡಗಳಲ್ಲಿ ತರಬೇತಿ ನೀಡಲಾಗುವುದು. ಆಸಕ್ತರು ತಮಗೆ ಅನುಕೂಲವಾದ ಸಮಯವನ್ನು ಆರಿಸಿಕೊಳ್ಳಬಹುದು. 15ನೆಯ ದಿವಸ ಮಾತ್ರ ಬೆಳಗಿನ 6-30ರಿಂದ ಸಂಜೆ 8-30ರವರೆಗೆ ಎರಡೂ ತಂಡಗಳವರು ಒಟ್ಟಾಗಿ ಸೇರಿ ಪೂರ್ಣ ದಿವಸ ಪ್ರಾಯೋಗಿಕ ತರಬೇತಿ ಪಡೆಯಬೇಕು. ಕಮ್ಮಟದ ಸಮಯದಲ್ಲಿ ತಾವು ಪಡೆದುಕೊಂಡ ಜ್ಞಾನ ತರಬೇತಿ ಕುರಿತು ಅಭಿಪ್ರಾಯ ತಿಳಿಸಬೇಕು. ಪುರುಷರು ಮತ್ತು ಮಹಿಳೆಯರು ಉಭಯತರಿಗೂ ಪ್ರವೇಶವಿದೆ. ತರಬೇತಿ ಕಾಲದಲ್ಲಿ ಪಾಲಿಸಬೇಕಾದ ನಿಯಮ, ಉಡಬೇಕಾದ ಬಟ್ಟೆ, ಯೋಗಾಸನಕ್ಕೆ ನೆಲಹಾಸು- ಮುಂತಾದವುಗಳ ಬಗ್ಗೆ ಮೊದಲನೆಯ ದಿವಸ ವಿವರಗಳನ್ನು ನೀಡಲಾಗುವುದು. ಬೊಜ್ಜು, ಉಸಿರಾಟದ ತೊಂದರೆ, ಅಸ್ತಮಾ, ಕೀಲು ನೋವು, ಅಲರ್ಜಿ, ಮಧುಮೇಹ, ಉದ್ವಿಗ್ನತೆ, ರಕ್ತದೊತ್ತಡ ಇಂಥ ಅನೇಕ ಶಾರೀರಿಕ ಬಾಧೆಗಳಿಗೆ ಸೂಕ್ತ ಚಿಕಿತ್ಸೆಯನ್ನು ಸೂಚಿಸಲಾಗುವುದು.

ಜಾತಿ ಪಂಥ ಧರ್ಮ ಭೇದವಿಲ್ಲದೆ ಹೆಚ್ಚಿನ ಜನರು ಭಾಗವಹಿಸಿ ಈ ತರಬೇತಿ ಕಮ್ಮಟದ ಸದುಪಯೋಗವನ್ನು ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ತಮ್ಮ ತಮ್ಮ ಊರುಗಳಲ್ಲಿ ಪೂರ್ಣಯೋಗ ತರಬೇತಿ ಕಮ್ಮಟವನ್ನು ಏರ್ಪಡಿಸಬೇಕು ಎಂಬ ಅಪೇಕ್ಷೆಯುಳ್ಳವರು ಕೊಟ್ಟಿರುವ ವಿಳಾಸಕ್ಕೆ ಸಂಪರ್ಕಿಸಬಹುದು.

ಶರಣ. ಮಹಾಂತೇಶ ಹಿರೇಮಠ
ತರಬೇತಿದಾರರು

ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ
ಸಂಚಾಲಕರು

ಶ್ರೀ ಬಸವೇಶ್ವರ ದಿವ್ಯಜ್ಞಾನ ವಿದ್ಯಾಲಯ, 2035, 20ನೆಯ ಮುಖ್ಯ ರಸ್ತೆ,
2ನೆಯ ವಿಭಾಗ, ರಾಜಾಜಿನಗರ, ಬೆಂಗಳೂರು-560010. ☎ : 3325335, 3322790

ಬಸವ ಗಂಗೋತ್ರಿ ನಗರ ಯೋಜನೆ - 2ನೇ ಹಂತ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"** ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ.

1. ''ಬಸವ ಗಂಗೋತ್ರಿ ನಗರ'' ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ'-40' X 60'-ವಿಸ್ತೀರ್ಣ 2400 ಚ.ಅಡಿಗಳು

   ವರ್ಗ 'ಬಿ'-30' X 40'-ವಿಸ್ತೀರ್ಣ 1200 ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

2. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. 1000/- (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
3. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ 100/-(ಒಂದುನೂರು) ರೂಗಳನ್ನು ಎಂ.ಓ/ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ :- ದೂರವಾಣಿ : 080-3325335 / 3322790

ಪೂಜ್ಯ ಶ್ರೀ ಸದ್ಗುರು ಸ್ವಾಮಿ ಅಲ್ಲಮ ಪ್ರಭು
ವಿಶ್ವಕಲ್ಯಾಣ ಮಿಷನ್, ಬಸವ ಗಂಗೋತ್ರಿ ನಗರ ಯೋಜನೆ
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-560010

ಜುಲೈ-ಆಗಸ್ಟ್ ತಿಂಗಳಲ್ಲಿ ಧನ ದಾಸೋಹ ಮಾಡಿದ ಶರಣ ಬಂಧುಗಳು

ಬಸವ ಧರ್ಮ ಪೀಠದಲ್ಲಿ ಕೋಣೆ ಕಟ್ಟಿಸಲು

ಶರಣ. ಕೃಷ್ಣಪ್ಪ ಭರಮಪ್ಪ ಮುಸಳೆ, ಗಡಹಿಂಗ್ಲಾಜ್ (ಡಬ್ಬಲ್ ಕೋಣೆ)	ರೂ. 71000-00
ಶರಣೆ. ಗೀತಾ ಮತ್ತು ಶರಣ ಬಾಳಾಸಾಹೇಬ ನೇರ್ಲಿ, ಗಡಹಿಂಗ್ಲಾಜ್(ಡಬ್ಬಲ್)	ರೂ. 71111-00
ಶರಣೆ. ಡಾ|| ಸುರೇಖಾ ಮತ್ತು ಶರಣ ಡಾ|| ಕಿರಣ ಗಡಹಿಂಗ್ಲಾಜ್ (ಸಿಂಗಲ್)	ರೂ. 51000-00

ಮರಾಠಿ ಭಾಷೆಯಲ್ಲಿ ಪುಸ್ತಕ ಮುದ್ರಣಕ್ಕಾಗಿ

ಶರಣ. ರಾವ್ ಸಾಹೇಬ ಬಾಪೂಸಾಹೇಬ ಕಿತ್ತೂರಕರ್, ಗಡಹಿಂಗ್ಲಾಜ್	15000-00
ಶರಣ. ಸುಭಾಷ್ ಬಾಬೂರಾವ್ ಯಲಗಚ್ಚಿ, ಗಡಹಿಂಗ್ಲಾಜ್	10111-00
ಶರಣೆ. ಮಹಾದೇವಿ ಮತ್ತು ಶರಣ ರಾಮಗೊಂಡ ಪಾಟೀಲ್	11111-00
ಶರಣ. ವಿಶ್ವನಾಥ ಶಿವಗೊಂಡ ಪಾಟೀಲ್, ಗಡಹಿಂಗ್ಲಾಜ್	10000-00
ಶರಣೆ.. ಪಾರ್ವತಿ ಅಪ್ಪಾಸಾಹೇಬ ಮಾನೆ, ಗಡಹಿಂಗ್ಲಾಜ್	10001-00

ಕಟ್ಟಡ ನಿಧಿಗೆ

ಶರಣೆ. ಶ್ರೀಮಂತಿ ರಾಮಚಂದ್ರ, ಕುಂಬಾರ, ಹೇರವಾಡ	10000-00
ಶರಣ. ಎಂ. ವಿಜಯಕುಮಾರ್, ಹಟ್ಟಿ	5000-00
ಶರಣೆ. ವಿಜಯಾ ಕಲ್ಲಪ್ಪ ತೋರಗಲ್ಲ, ಗಡಹಿಂಗ್ಲಾಜ್	5000-00
ಶರಣೆ. ವಿದ್ಯಾ ಕಲ್ಯಾಣರಾವ್ ಪೂಜಾರಿ	5000-00
ಶರಣ. ಡಾ|| ಪ್ರಕಾಶ್ ಆಜರಿ, ಗಡಹಿಂಗ್ಲಾಜ್	5000-00
ಶರಣೆ. ಇಂದುಮತಿ ಬಸವಣ್ಣ ಖಣದಾಳೆ, ಗಡಹಿಂಗ್ಲಾಜ್	5000-00
ಶರಣೆ. ಅನಸೂಯಾ ಕೆಂಪಣ್ಣ ಅಮ್ಮಣಗಿ, ಗಡಹಿಂಗ್ಲಾಜ್	5000-00
ಶರಣ. ಅಪ್ಪಾ ಸಾಹೇಬ ದಾದೂ ಶೇಡಬಾಳೆ, ಗಡಹಿಂಗ್ಲಾಜ್	5000-00
ಶರಣ. ಕೃಷ್ಣಪ್ಪ ಭರಮಪ್ಪ ಮುಸಳೆ, ಗಡಹಿಂಗ್ಲಾಜ್ (ಧಾರವಾಡ ಆಶ್ರಮದ ಪ್ರಾರ್ಥನಾ ಮಂದಿರಕ್ಕಾಗಿ)	5000-00
ಶರಣ. ಸೋನಾ ಶಿವಪ್ಪ ತೋದಲಿ, ಗಡಹಿಂಗ್ಲಾಜ್	5000-00
ಶರಣ. ಅರುಣ್ ಲಕ್ಷ್ಮಣ ತೇಲಂಗಾ, ಗಡಹಿಂಗ್ಲಾಜ್	5000-00
ಶರಣ. ರವೀಂದ್ರ ಶಂಕರರಾವ್ ಮುಸಳೆ, ಗಡಹಿಂಗ್ಲಾಜ್	5000-00
ಶರಣ. ಮಹಾದೇವ ಸಾತಪ್ಪ ಗಾಡವಿ, ಗಡಹಿಂಗ್ಲಾಜ್	5000-00
ಶರಣ. ವೀರಪ್ಪ ಬಸಪ್ಪ ಸನ್ನೆ, ಗಡಹಿಂಗ್ಲಾಜ್	2500-00
ಶರಣ. ಡಾ|| ಪ್ರಕಾಶ್ ಎಸ್. ತವಕರಿ, ಗಡಹಿಂಗ್ಲಾಜ್	2500-00
ಶರಣ.. ಬಸವರಾಜು ಷೇಣಿ, ಹಟ್ಟಿ	1500-00

ಶರಣ ಮೇಳದ ಪುದುವಟ್ಟಿಗಾಗಿ

ಶರಣ. ಪಿ. ಶಿವನಂಜಪ್ಪ S/o ಪುಟ್ಟಪ್ಪ ಸೀನೇಕಟ್ಟೆ	5000-00
ಶರಣ. ವೀರಪ್ಪ ಅಡಿವೆಪ್ಪ ಮಗದುಮ್, ಗಡಹಿಂಗ್ಲಾಜ್	5000-00
ಗುಪ್ತಕಾಣಿಕೆ	5000-00
ಶರಣ. ಅಪ್ಪಾಸಾಹೇಬ ವಿಷ್ಣು ಗಳತಗೆ, ಗಡಹಿಂಗ್ಲಾಜ್	5000-00
ಶರಣ. ಸದಾನಂದ ಗುರುಲಿಂಗಪ್ಪ ವಾಲಿ	5000-00
ಶರಣೆ. ರಾಜಶ್ರೀ ಕಾಶೀನಾಥ ಖಣ್ಣಾ, ಗಡಹಿಂಗ್ಲಾಜ್	5000-00

ಗುರು ಕಾಣಿಕೆ

ಶರಣೆ. ಪುಟ್ಟಹೊನ್ನಮ್ಮ, ಬೆಂಗಳೂರು	3000-00
ಶರಣೆ. ಶಿವಲೀಲಾ, ಭರಮಪ್ಪ ಯಾದವಾಡಿ, ಗಡಹಿಂಗ್ಲಾಜ್	1001-00

ಬಸವ ಮಂಟಪದಲ್ಲಿ ದೇವವಾರ (ಭಾನುವಾರ) ನಡೆಯುವ ಶರಣ ಸಂಗಮ ಸಾಮೂಹಿಕ ಪ್ರಾರ್ಥನೆಯ ನಂತರ ಪ್ರಸಾದ (ಊಟ) ದಾಸೋಹಕ್ಕಾಗಿ 1500 ರೂ. ಕೊಟ್ಟ ಶರಣ ಬಂಧುಗಳು

5-8-2001	ಗಣಾಚಾರ ದಳದ ಶರಣರು, ಬೆಂಗಳೂರು
12-8-2001	ಶರಣೆ. ಅನಿತಾ ಮತ್ತು ಶರಣ. ಈಶ್ವರ ಪಾಟೀಲ್, ಬೆಂಗಳೂರು
19-8-2001	ಶರಣ. ಗುರುಸಿದ್ಧಯ್ಯನವರು, ಬೆಂಗಳೂರು
22-8-2001	ಪೂಜ್ಯ ಲಿಂ|| ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿ ದಾಸೋಹಕ್ಕೆ ಕಾಣಿಕೆ ಸಲ್ಲಿಸಿದವರು. ಶರಣೆ. ಲಕ್ಷ್ಮಮ್ಮ, ಗೆಳೆಯರ ಬಳಗ ಲೇ ಔಟ್, ಬೆಂಗಳೂರು
26-8-2001	ಶರಣೆ. ನಿರ್ಮಲಾ ಮತ್ತು ಶರಣ. ಬಿ. ಜಯದೇವ, ಬೆಂಗಳೂರು

ಬಸವ ಧರ್ಮ ಪೀಠದ ದಾಸೋಹ ನಿಧಿಗೆ 1111=00 ರೂ ಕೊಟ್ಟ ಧನ ದಾಸೋಹಿಗಳು.

ಶರಣರುಗಳಾದ :

1. ವಿ.ವಿ. ತೋರಣಗಟ್ಟಿ, ಬೆಳಗಾಂವ
2. ಮಲ್ಲರೆಡ್ಡೆಪ್ಪ ಪಾಟೀಲ್, ಹಟ್ಟಿ
3. ಎಂ. ಶಂಕರಗೌಡರು, ಹಟ್ಟಿ
4. ಎಂ. ವೀರನಗೌಡರು, ಹಟ್ಟಿ
5. ಬಿ. ಅಂಬಣ್ಣನವರು, ಹಟ್ಟಿ
6. ಹನುಮೇಗೌಡರು, ಹಟ್ಟಿ
7. ಪಿ. ಅಮರೇಶ, ಹಟ್ಟಿ
8. ಡಾ|| ಎಂ.ಎಲ್. ಪಾಟೀಲ್, ಹಟ್ಟಿ
9. ಡಾ|| ಎಸ್.ವಿ. ಸಂಗನಾಳ್, ಹಟ್ಟಿ
10. ಟಿ. ವೀರಣ್ಣ, ಹಟ್ಟಿ
11. ಎಂ.ಪಿ. ಮೇತ್ರಾಣಿ, ಹುಬ್ಬಳ್ಳಿ
12. ವ್ಹಿ.ಬಿ. ಕಮತಗಿ, ಹುಬ್ಬಳ್ಳಿ
13. ಪುಟ್ಟಹೊನ್ನಮ್ಮ, ಬೆಂಗಳೂರು
14. ಡಿ.ಜಿ. ಹುಳಿಬುತ್ತಿ, ಬೆಳಗಾಂವ

ಗಡಹಿಂಗ್ಲಾಜ್ ಶರಣ ಬಂಧುಗಳು

15. ಡಾ|| ಸುರೇಶ್ ನರಸಪ್ಪ ಸಂಕೇಶ್ವರ
16. ಶ್ರೀದೇವಿ ವಿಜಯ್ ಉತ್ತೂರೆ
17. ಚನ್ನಪ್ಪ ಭೀಮಪ್ಪ ನೇವಡೆ
18. ಸರೋಜಾ ದುಂಡಪ್ಪ ಘೋಟೂರೆ
19. ಅಪ್ಪಾಸಾಹೇಬ ಮಲ್ಲಪ್ಪ ನೇವಡೆ
20. ವಿಜಯ್ ಸುಭಾಷ್ ಹತ್ತಿ
21. ಸುಭಾಷ್ ಬಾಬೂರಾವ್ ಯಲಗಚ್ಚ
22. ಎಸ್.ಎಂ. ಕೊಲ್ಲಾಪುರ್
23. ಸುರೇಶ್ ಚನ್ನಪ್ಪ ಆಜರಿ
24. ಗಂಗೂತಾಯಿ ಶಿವಪುತ್ರ ಪಚ್ಚಂಡಿ
25. ಸುಶೀಲಾ ಶಿವಯೋಗಯ್ಯ ಮಠದ
26. ನಂದಿನಿ ನಾಗಪ್ಪ ಶ್ರೇಷ್ಠಿ
27. ದಯಾನಂದ ನಿಜಪ್ಪ ನೇಸರಿ
28. ಶಾಲಿನಿ ಈಶ್ವರಪ್ಪ ಜಮದಾಡೆ
29. ಬಂಗಾರವ್ವ ಕಲ್ಲಪ್ಪ ಕಡಲಗೆ
30. ಆಶಾ ವೀರಪ್ಪ ಚರಾಟೆ
31. ರಾವ್ ಸಾಹೇಬ ಬಾಪೂಸಾಹೇಬ ಕಿತ್ತೂರಕರ್
32. ಮಂಗಳಾ ಮಲ್ಲಪ್ಪ ನೇವಡೆ
33. ಅಕ್ಕೂತಾಯಿ ಶಿವಗೊಂಡ ಪಾಟೀಲ್
34. ವತ್ಸಲ ಮಾಡಪ್ಪ ಬಂದಿ
35. ಅಪ್ಪಾಸಾಹೇಬ ಶಿವಪುತ್ರಪ್ಪ ದಡ್ಡಿ
36. ಭೈರು ಕಲ್ಲಪ್ಪ ಕಮತೆ
37. ಕಾಶೀನಾಥ ಬಾಪೂಸಾಹೇಬ ಕಿತ್ತೂರಕರ
38. ಪ್ರಕಾಶ್ ಮಲ್ಲಪ್ಪ ಸೊಲ್ಲಾಪುರೆ
40. ಸತ್ಯಪ್ಪ ಭೀಮಾ ರಿಂಗಣೆ
41. ಮಹಾದೇವ ಈಶ್ವರಪ್ಪ ತೋದಲಿ
42. ವಿಜಯಾ ಮಹಾಲಿಂಗಪ್ಪ ಆಜರಿ
43. ವಿರುಪಾಕ್ಷ ದುಂಡಯ್ಯ ಮಠಪತಿ
44. ರೋಹಿಣಿ ಗುರುಲಿಂಗ ಖಂದಾರೆ
45. ಡಾ|| ವಿವೇಕ್ ಮಹಾಲಿಂಗಪ್ಪ ಪಾಟ್ನಿ
46. ಕಾಡಪ್ಪ ಮಲ್ಲಪ್ಪ ಕಲ್ಲೋಳೆ
47. ಸುರೇಶ್ ಬಾಬೂರಾವ್ ಕೋರಿ
48. ವಿಶ್ವನಾಥ ವೀರಭದ್ರಪ್ಪ ಪಟ್ಟಣಶೆಟ್ಟಿ
49. ಶ್ರೀಕಾಂತ್ ಸದಾಶಿವ ಮಹಾಜನ
50. ಭೀಮರಾವ್ ದುಂಡಪ್ಪ ಕಲ್ಲೋಳೆ

51. ಶಿವಕುಮಾರ್ ಬಸವರಾಜ ಜೊಂಡ್
52. ಪುಷ್ಪಾ ಬಾಬೂಸಾಹೇಬ ಯಲಾಜ್
53. ಎನ್.ಡಿ. ಕಿಚಡಿ
54. ರಾಜಶೇಖರ್ ಗುರುಪಾದಪ್ಪ ಯರಟಿ
55. ಸುಭಾಷ್ ಬಾಬೂರಾವ್ ಮಾಳಿ
56. ಬಾಬೂರಾವ್ ಶಂಕರ್ ಕಾಪ್ಸೆ
57. ಸುಮಿತ್ರಾ ಮಹಾದೇವ ತೋಟಗಿ
58. ಶೈಲಾ ಪ್ರಕಾಶ್ ಪಟ್ಟಣಶೆಟ್ಟಿ
59. ಡಾ|| ಸತೀಶ್ ಶಂಕರರಾವ್ ಮೋಳದಿ
60. ಸುವರ್ಣ ಅಪ್ಪಯ್ಯ ಫಾಳಿ
61. ಸುಮಿತ್ರಾ ಬಸವರಾಜ್ ಫಾಳಿ
62. ಪ್ರಮೀಳಾ ಶಿವಲಿಂಗಪ್ಪ ಹಂಜಿ
63. ಲಕ್ಷ್ಮಣ ದುಂಡಪ್ಪ ಮಾಳಗಿ
64. ಬಸವಾಣಿ ಕಲ್ಲಪ್ಪ ಮಾಳಗಿ
65. ಲಕ್ಷ್ಮೀಬಾಯಿ ತಮ್ಮಣ್ಣ ಮಾಳಗಿ
66. ಬಾಬೂರಾವ್ ಈಶ್ವರಪ್ಪ ಪಟ್ಟಣಶೆಟ್ಟಿ
67. ಶಿವಾನಂದ ಅಣ್ಣಪ್ಪ ಕುರಬೇಟ
68. ರಾಮು ದುಂಡಪ್ಪ ಮಾಳಗಿ
69. ಶಂಕರ ಅಪ್ಪಾಸಾಹೇಬ ವಾಡೇಕರ್
70. ಅಶೋಕ ಸದಾಶಿವ ಮಗದುಮ್, ಕೆರೂರು
71. ಸುರೇಶ ಚಂದ್ರಕಾಂತ ಕೋಳಕಿ
72. ಶಂಕರಗೌಡ ರಾಮನಗೌಡ ದೇಸಾಯಿ
73. ಡಾ|| ಶಿವರುದ್ರಪ್ಪ ಶಿವಪ್ಪ ರುದ್ರಪ್ಪಗೋಳ
74. ಕುಮಾರಿ ಶ್ರೀಮಂತಿ ಸಿದ್ಧಗೌಡ ಪಾಟೀಲ್

(ಮುಂದುವರಿಯುವುದು)

(ಸ್ಥಳಾಭಾವದಿಂದ ಕುರುಬರಹಳ್ಳಿ, ನಾಗಶೆಟ್ಟಿಹಳ್ಳಿ, ಬೆಟ್ಟಹಲಸೂರು, ದೊಡ್ಡೇರಿ, ಚಿಕ್ಕಜಾಲ ಗ್ರಾಮಗಳ ದಾನಿಗಳ ಹೆಸರನ್ನು ಮುದ್ರಿಸಿಲ್ಲ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.)

ಈ ಎಲ್ಲ ಧನ ದಾಸೋಹಿಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಕರ್ತ ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲೆಂದು ಹಾರೈಸುತ್ತೇವೆ.

ಶರಣ ಬಂಧುಗಳೇ,

ಧರ್ಮಪಿತ ಬಸವಣ್ಣನವರು ಮತ್ತು ಆದಿ ಶರಣರ ಋಣವನ್ನು ತೀರಿಸುವ ಸೂಕ್ತಕಾಲ ಬಂದಿದೆ. ಇಂದು ಸ್ಥಾವರಾತ್ಮಕವಾಗಿ ಕೂಡಲ ಸಂಗಮ ಕ್ಷೇತ್ರವನ್ನು ಪುನರ್ ನಿರ್ಮಾಣ ಮಾಡಬೇಕಾಗಿದೆ. ಜಂಗಮಾತ್ಮಕವಾಗಿ ವಚನ ಸಾಹಿತ್ಯವನ್ನು ಕನ್ನಡದಲ್ಲಿ ಮಾತ್ರವಲ್ಲ ಇಂಗ್ಲೀಷ್, ಮರಾಠಿ, ತಮಿಳು, ತೆಲುಗು, ಹಿಂದಿ ಭಾಷೆಗಳಲ್ಲಿ ಮುದ್ರಿಸಬೇಕಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಕರ್ತವ್ಯವೆಂದು ಉದಾರವಾಗಿ ಕಾಣಿಕೆಯನ್ನು ಸಲ್ಲಿಸಬೇಕು. ವೈಯಕ್ತಿಕ ಖರ್ಚುಗಳನ್ನು ಮಿತಗೊಳಿಸಿ ಸರಳ ಜೀವನ ಮಾರ್ಗವನ್ನು ಕೈಗೊಂಡು, ಹೆಚ್ಚು ಉಳಿತಾಯ ಮಾಡಿ ಕಾಣಿಕೆಯನ್ನು ನೀಡಿ ಬಸವ ಧರ್ಮ ಪೀಠವು ಕೈಗೊಂಡಿರುವ, ಕೈಗೊಳ್ಳುವ ಯೋಜನೆಗಳಿಗೆ ಎಲ್ಲರೂ ನೆರವು ನೀಡಬೇಕೆಂದು ಕೋರುತ್ತೇವೆ. ಪ್ರತಿಯೊಬ್ಬರೂ ಹುಂಡಿ ಡಬ್ಬಿಗಳನ್ನು ಇಟ್ಟು ಅದರಲ್ಲಿ ಕಾಣಿಕೆಯನ್ನು ಸಂಗ್ರಹಿಸಿ ಶರಣ ಮೇಳಕ್ಕೆ ಬಂದಾಗ ತಲ್ಪಿಸಿರಿ. ಶರಣ ಮೇಳ ಪ್ರಚಾರಕ್ಕೆ ಬಂದ ನಮ್ಮ ಸಂಸ್ಥೆಯ ಧರ್ಮಬೋಧಕರ ಕೈಲಾದರೂ ಕೊಟ್ಟು ರಸೀತಿ ಪಡೆಯಬಹುದು.

24-8-2001

ಬೆಂಗಳೂರು

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣದ ಪ್ರತಿಗಳು ಎರಡು ಬರುತ್ತಿದ್ದರೆ ಒಂದರ ಚಂದಾ ನಂಬರ ತಿಳಿಸಿ ದಯವಿಟ್ಟು ಪತ್ರ ಬರೆಯಿರಿ. -ವ್ಯವಸ್ಥಾಪಕರು

ವೈಚಾರಿಕ ಪತ್ರಿಕೆಯಾದ ಕಲ್ಯಾಣ ಕಿರಣ ಮಾಸ ಪತ್ರಿಕೆಗೆ ಚಂದಾದಾರರಾಗಿರಿ.



ಗಡಹಿಂಗ್ಲಾಜ್‌ದಲ್ಲಿ ದಿ. 4-6-2001ರಂದು ವಿಶ್ವಧರ್ಮ ಪ್ರವಚನ ಉದ್ಘಾಟನೆ. ನಗರದ ಗಣ್ಯ ವ್ಯಾಪಾರಸ್ಥರಾದ ಶರಣ. ಕೃಷ್ಣಪ್ಪ ಮುಸಳೆ ಅವರಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಮತ್ತು ಈಚಲಕರಂಜಿಯ ಶರಣೆ. ಮಾಲೂತಾಯಿ ಚಂದ್ರಕಾಂತ ಸ್ವಾಮಿ ಲಿಂಗಾಯತ ಅವರು ಚಿತ್ರದಲ್ಲಿದ್ದಾರೆ.



ದಿ. 1-8-2001ರಂದು ನಡೆದ ಮುಕ್ತಾಯ ಸಮಾರಂಭದಲ್ಲಿ ಚುಳುಕಾದ ಚೇತನ ಪುಸ್ತಕದ ಮರಾಠಿ ಆವೃತ್ತಿ ಬಿಡುಗಡೆ ಗೋಕಾಕ ಬಸವ ಮಂಟಪದ ಪೂಜ್ಯ ಶ್ರೀ ಬಸವಕುಮಾರ ಸ್ವಾಮಿಗಳಿಂದ ನಡೆಯಿತು. ಪ್ರಮುಖ ವ್ಯಾಪಾರಸ್ಥರಾದ ಕೃಷ್ಣಪ್ಪ ಮುಸಳೆ ಮತ್ತು ಶರಣ. ರಾವಸಾಹೇಬ್ ಕಿತ್ತೂರಕರ ಚಿತ್ರದಲ್ಲಿದ್ದಾರೆ.

ಕಲ್ಯಾಣ ಕಿರಣ CPMG/KA/BGW-50 ಸೆಪ್ಟೆಂಬರ್-2001
R.No. 19980/70 WPP (W) -17



ಸ್ವಾಗತಿಸಿ ಮಾಲಾರ್ಪಣೆ ಮಾಡುತ್ತಿರುವ
ಶರಣ. ಕಷಪ ಭರಮಪ ಮುಸಳೆ ಮತ್ತು ಶರಣ. ಮಲಪ ರಾಮಪ ಸೇವಡೆ, ಗಡಹಿಂಗಾಜ್